

ಐಕ್ಯ ರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 39 ಸೆಪ್ಟಂಬರ್ 22-28, 1997 ಬೆಲೆ ರೂ. 2.00

ಜನಸಾಮಾನ್ಯರ ಬದುಕಿನ ಮೇಲೆ ಇನ್ನಷ್ಟು ಹೊಡೆತ: ಎಡಪಕ್ಷಗಳ ಕ್ರೋಧ

"ಸಾರ್ವಜನಿಕ ಆಂದೋಲನಕ್ಕೆ ಇಳಿಯಬೇಕಾದೀತು, ಎಚ್ಚರ!"

ಕಳೆದ ವಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ಮಾಡಿದ ನಂತರ ಕೇಂದ್ರ ಹಣಕಾಸು ಮಂತ್ರಿಗಳು ಬಜೆಟ್ ಖೋತಾ ಹೆಚ್ಚಳವನ್ನು ತಡೆಯುವ ಹೆಸರಿನಲ್ಲಿ 6800 ಕೋಟಿ ರೂಗಳ ಹೆಚ್ಚಿನ ಆದಾಯ ವಸೂಲಿಯ ಕ್ರಮಗಳನ್ನು ಪ್ರಕಟಿಸಿದ್ದಾರೆ. ರೈಲು ದರ, ಅಂಚೆದರ ಹೆಚ್ಚಾಗುವ ಸೂಚನೆ ಕೊಡಲಾಗುತ್ತಿದೆ. ಕರ್ನಾಟಕದಲ್ಲಿ ಮತ್ತೊಮ್ಮೆ ಬಸ್‌ದರ ಏರಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. ಇವೆಲ್ಲಾ ಗಾಯಗಳ ಮೇಲೆ ಬರೆ ಎಳೆದಂತೆ ಈಗ ಸಕ್ಕರೆ ಬೆಲೆಗಳನ್ನು ಹೆಚ್ಚಿಸಿದೆ ಅದೂ ಹಬ್ಬಗಳು ಸಮೀಪಿಸುತ್ತಿರುವ ಸಂದರ್ಭದಲ್ಲಿ. ಇವನ್ನೆಲ್ಲಾ ಹಿಂತೆಗೆದುಕೊಳ್ಳಬೇಕು. ಇಲ್ಲವಾದರೆ ಅವುಗಳ ವಿರುದ್ಧ ಆಂದೋಲನ ಎದ್ದು ಬರುತ್ತದೆ ಎಂದು ಎಡಪಕ್ಷಗಳು ಸಂಯುಕ್ತರಂಗ ಸರಕಾರವನ್ನು ಎಚ್ಚರಿಸಿವೆ. ಹಿಂದಿನ ಬಜೆಟನಲ್ಲಿ ಸಿರಿವಂತರಿಗೆ ನೀಡಿದ ಭಾರೀ ರಿಯಾಯ್ತಿಗಳಿಂದಾಗಿ ಸರಕಾರದ ತೆರಿಗೆ ಆದಾಯದಲ್ಲಿ ಇಳಿಕೆಯಾಯ್ತು ಎಂಬುದನ್ನು ಒಪ್ಪಿಕೊಳ್ಳುವ ಬದಲು ಕೇಂದ್ರ ಹಣ ಕಾಸುಮಂತ್ರಿಗಳು ಹೆಚ್ಚಳಕ್ಕೆ ಕೇಂದ್ರ ಸರ್ಕಾರಿ ನೌಕರರ ವೇತನ ಹೆಚ್ಚಳದ ನೆವ ಒಡ್ಡಿದ್ದಾರೆ.

ಸೆಪ್ಟೆಂಬರ್ 16 ರಂದು ಹಣಕಾಸು ಇಲಾಖೆ ಕೆಲವು ಕ್ರಮಗಳನ್ನು ಪ್ರಕಟಪಡಿಸಿತು. ಹಣಕಾಸು ಪರಿಸ್ಥಿತಿಯಲ್ಲಿ ಉಂಟಾಗಿರುವ ಓರೆ-ಕೋರೆಗಳನ್ನು ಈ ಹಣಕಾಸು ವರ್ಷದ ಮಧ್ಯಭಾಗದಲ್ಲಿ ಸರಿಪಡಿಸುವ ಕ್ರಮಗಳಿವು ಎಂದು ಬಂಡವಾಳಶಾಹಿಗಳ ಹತೋಟಿಯಲ್ಲಿರುವ ದೊಡ್ಡ ಪತ್ರಿಕೆಗಳು ಇವನ್ನು ವರ್ಣಿಸಿವೆ. ಕೇಂದ್ರ ಸರ್ಕಾರದ ನೌಕರರಿಗೆ ನೀಡಿದ ವೇತನ ಹೆಚ್ಚಳದ ಭಾರವನ್ನು ಈ ಮೂಲಕ ಸರಿ ಹೊಂದಿಸಲಾಗಿದೆ ಎಂದೂ ಆ ಪತ್ರಿಕೆಗಳು ಜನಗಳನ್ನು ನಂಬಿಸಲು ಪ್ರಯತ್ನಿಸುತ್ತಿವೆ.

ಕಳೆದ ಬಜೆಟ್ ಮಂಡಿಸಿರುವಾಗಲೇ ಆಮದು ಸುಂಕಗಳನ್ನು ಇಳಿಸಿದ್ದರಿಂದ ಸರಕಾರದ ರೆವಿನ್ಯೂ ಆದಾಯ ಕಮ್ಮಿಯಾಗುವುದಲ್ಲದೆ ಉದ್ದಿಮೆಗಳಲ್ಲಿ ಸ್ಥಗಿತತೆ ಉಂಟಾಗುತ್ತದೆ ಎಂದು ಸಿಪಿಐ(ಎಂ) ಟೀಕಿಸಿತ್ತು. ಈಗ ಸಾರಾಸಗಟಾಗಿ 3% ಆಮದು ಸುಂಕ ಏರಿಸಿ ಇದನ್ನೀಗ ಸ್ವಲ್ಪ ಮಟ್ಟಿಗೆ ಸರಿಪಡಿಸಲಾಗಿದೆ. ಆದರೆ ಈ ಹೆಚ್ಚಳ ಅತ್ಯಲ್ಪ. ಇದರಿಂದ ದೇಶೀ ಉದ್ದಿಮೆಗಳಲ್ಲಿ ಕಂಡುಬರುವ ಸ್ಥಗಿತತೆಯ ಪ್ರವೃತ್ತಿಯನ್ನು ಸರಿಪಡಿಸುವುದಾಗಲೀ, ವ್ಯಾಪಾರ ಕೊರತೆಯ ಹೆಚ್ಚಳವನ್ನು ತಗ್ಗಿಸುವುದಾಗಲೀ ಸಾಧ್ಯವಿಲ್ಲ.

ಈ ಆಮದು ಸುಂಕ ಹೆಚ್ಚಳದಿಂದ ಸರಕಾರಕ್ಕೆ ಬರುವ ಹೆಚ್ಚಿನ ಆದಾಯ 6880 ಕೋಟಿ ರೂ. ಗಳಲ್ಲಿ ಕೇವಲ 1300 ಕೋಟಿ ರೂಗಳಷ್ಟು ಮಾತ್ರ. ಸರಕಾರ ಈಗ ಸಂಗ್ರಹಿಸಬೇಕೆಂದಿರುವ ಹೆಚ್ಚುವರಿ ಸಂಪನ್ಮೂಲದ ಬಹುಭಾಗ ಬರುವುದು ಸಾಮಾಜಿಕ ಖರ್ಚಿನಲ್ಲಿನ ಕಡಿತ ಹಾಗೂ ಮತ್ತಷ್ಟು ಸಾರ್ವಜನಿಕ ವಲಯದ ಶೇರುಗಳ ಮಾರಾಟದಿಂದ ಎಂದು ಸಿಪಿಐ (ಎಂ) ಪೊಲಿಟ್ ಬ್ಯೂರೋ ಟೀಕಿಸಿದೆ.

ಯೋಜನೇತರ ಖರ್ಚಿನಲ್ಲಿ 3200 ಕೋಟಿ ರೂ.ಗಳ ಕಡಿತ ಮಾಡಿ ಸರಕಾರ ತನ್ನ ಆದಾಯ ಹೆಚ್ಚಿಸಿದೆ. ಅಂದರೆ ಬಹುಪಾಲು ಬಡಜನ ಸಮೂಹಗಳಿಗೆ ಅಲ್ಪ ಸ್ವಲ್ಪ ಪರಿಹಾರ ನೀಡುವ ಕಲ್ಯಾಣ ಕಾರ್ಯಕ್ರಮಗಳ ಖರ್ಚುಗಳಲ್ಲಿ ಕಡಿತವಾಡಿ ಅವರ ಹೊಟ್ಟೆಬಡಿದು ಸರಕಾರ ತನ್ನ ಆದಾಯ ಹೆಚ್ಚಿಸಿಕೊಂಡಿದೆ. ಇನ್ನೊಂದೆಡೆ ಸಾರ್ವಜನಿಕ ವಲಯದ ಶೇರುಗಳನ್ನು ಮಾರಿಕೊಂಡು 2200 ಕೋಟಿ ರೂ. ಸಂಗ್ರಹಿಸುವ ಯೋಜನೆ ಸರಕಾರದ್ದು. ಇದು ನಮ್ಮ ಆರ್ಥಿಕದ ಸ್ವಾವಲಂಬನೆಯ ಮೇಲೆಯೇ ಬಲವಾದ ಆಘಾತ ಎಂದು ಸಿಪಿಐ(ಎಂ) ಖಂಡಿಸಿದೆ. ಈ ಒಂದು ಹಣಕಾಸು ವರ್ಷದಲ್ಲೇ ಈಗ ಒಟ್ಟು 8000 ಕೋಟಿ ರೂಗಳ ಬೃಹತ್ ಮೊತ್ತವನ್ನು ಸಾರ್ವಜನಿಕ ವಲಯದ ಶೇರುಗಳನ್ನು ಮಾರಿ ತಿನ್ನುವ ಕೆಲಸವನ್ನು ಈ ಸರಕಾರ ಮಾಡಿದೆ. ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ಸರಕಾರದ ಪ್ರಸ್ತುತ ಖರ್ಚನ್ನು ಭರಿಸಲು ಸಾರ್ವಜನಿಕ ವಲಯದ ಶೇರುಗಳ ಮಾರಾಟ ಸಲ್ಲದು ಎಂದು ಸ್ಪಷ್ಟವಾಗಿ ಹೇಳಿದ್ದರೂ ಕೇಂದ್ರ ಹಣಕಾಸು ಇಲಾಖೆ ಈ ಕ್ರಮಕ್ಕಿಳಿದಿದೆ.

ರೆವಿನ್ಯೂ ಆದಾಯದಲ್ಲಿ ನಿರೀಕ್ಷಿತ ಹೆಚ್ಚಳ ಕಾಣದ್ದರಿಂದ ಸರಕಾರ ತನ್ನ ರೆವಿನ್ಯೂ ಸಂಗ್ರಹ ಹೆಚ್ಚಿಸಲು ಈ ಕ್ರಮಗಳಿದಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. **ಬಜೆಟ್‌ನಲ್ಲಿ ತೋರಿಸಿದ ತೆರಿಗೆ ಆದಾಯದಲ್ಲಿ 70% ರಷ್ಟು ಪರೋಕ್ಷ ತೆರಿಗಗಳಿಂದ ಬರಬೇಕು. ಇದು ನಿರೀಕ್ಷಿತ ಗುರಿಗಿಂತ ಬಹಳ ಕಮ್ಮಿಯಿದೆ. ಬಜೆಟ್‌ನಲ್ಲಿ ಶ್ರೀಮಂತರಿಗೆ ಭಾರೀ ರಿಯಾಯ್ತಿಗಳನ್ನು ನೀಡುವ ತಪ್ಪು ಧೋರಣೆಗಳಿಂದಾಗಿ ತೆರಿಗೆ ಸಂಗ್ರಹದಲ್ಲಿ ತೀವ್ರ ಇಳಿತವಾಗಿದೆ ಎಂಬುದನ್ನು ಒಪ್ಪಿಕೊಳ್ಳುವ ಬದಲು ಹಣಕಾಸು ಇಲಾಖೆ ವೇತನ ಆಯೋಗದ ಶಿಫಾರಸ್ಸುಗಳ ಜಾರಿಯಿಂದಾಗಿ ಇದನ್ನು ಮಾಡಬೇಕಾಗಿದೆ ಎಂಬ ನೆವ ಕೊಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.**

ವೇತನ ಆಯೋಗದ ಶಿಫಾರಸ್ಸುಗಳ ಜಾರಿಗೆಂದು ಕಳೆದ ಬಜೆಟ್‌ನಲ್ಲಿ 11000 ಕೋಟಿ ರೂಗಳನ್ನು ಆಗಲೇ ಇಡಲಾಗಿತ್ತು. ಆದರೆ ಕಳೆದ ವಾರ ಕೇಂದ್ರ ಸರಕಾರೀ ನೌಕರರ ಸಂಘಟನೆಗಳೊಂದಿಗೆ ಮಾಡಿಕೊಂಡ ಒಪ್ಪಂದಗಳಿಂದಾಗಿ 18000 ಕೋಟಿ ರೂ. ಬೇಕಾಗುತ್ತದೆ ಅಂದರೆ 7000 ಕೋಟಿ ರೂ. ಜಾಸ್ತಿ ಬೇಕಾಗುತ್ತದೆ ಎಂಬುದು ಸರಕಾರದ ಸಮರ್ಥನೆ. ಆದರೆ ಈ ಖರ್ಚನ್ನು ಸರಕಾರ ವಿಪರೀತ ಹಿಗ್ಗಿಸಿ ಹೇಳುತ್ತಿದೆ ಎಂದು ಸರಕಾರಿ ನೌಕರರ ಸಂಘಟನೆಗಳು ಅಂಕಿ-ಅಂಶಗಳ ಮೂಲಕ ತೋರಿಸಿವೆ. ಅದರೂ ಸರಕಾರದ ಮಾತನ್ನು ನಂಬಿದರೂ ಇದರಲ್ಲಿ 4000 ಕೋಟಿ ರೂ.ಗಳಷ್ಟನ್ನು ರೈಲ್ವೆ ಮತ್ತು ಸಂಪರ್ಕ ಇಲಾಖೆಗಳು ಭರಿಸುತ್ತವೆ. ಪೆಟ್ರೋಲಿಯಂ ಬೆಲೆಯೇರಿಕೆಯಿಂದ ಸರಾಕರದ ಬೊಕ್ಕಸಕ್ಕೆ 3600 ಕೋಟಿ ರೂ. ಬಂದಿದೆ. ಇವೆರಡೇ ಸೇರಿ 7600 ಕೋಟಿ ರೂ.ಗಳಿರುವಾಗ ಸಾಮಾಜಿಕ ಖರ್ಚಿನಲ್ಲಿ ಕಡಿತ, ಸಾರ್ವಜನಿಕ ವಲಯದ ಶೇರುಗಳನ್ನು ಮಾರಿ ತಿನ್ನುವ ಕ್ರಮಗಳ ಅಗತ್ಯವೇ ಇರಲಿಲ್ಲ ಎಂಬುದು ಎಡ ಪಕ್ಷಗಳ ದೃಢ ಅಭಿಪ್ರಾಯವಾಗಿದೆ.

ನೈಸರ್ಗಿಕ ಅನಿಲದ ಬೆಲೆಗಳ ಮೇಲಿನ ಹತೋಟಿಯನ್ನು ತೆಗೆಯಲು ಸರಕಾರ ನಿರ್ಧರಿಸಿದೆಯಂತೆ. ಆದರೆ ಅದನ್ನು ಅಡುಗೆ ಅನಿಲದ ಬೆಲೆಯ ಮಟ್ಟಕ್ಕೆ ಈಗಲೂ ಏರಿಸಿಲ್ಲ. ಹೀಗೆ ಮಾಡಿದ್ದರೆ ಇದೊಂದೆ ಕ್ರಮದಿಂದ ಸರಕಾರಕ್ಕೆ ವಾರ್ಷಿಕ 6000 ಕೋಟಿ ರೂ. ಬರುತ್ತಿತ್ತು. ಆದರೆ ಸರಕಾರದ ಈಗಿನ ಕ್ರಮದಿಂದ ಬರುವ ಹೆಚ್ಚಳ ಕೇವಲ 80-100 ಕೋಟಿ ರೂಗಳಷ್ಟೆ.

ಸರಕಾರ ಹೀಗೆ ಮತ್ತೆ ಸಂಪನ್ಮೂಲ ಸಂಗ್ರಹಿಸುವ ಪರ್ಯಾಯ ವಿಧಾನಗಳನ್ನು ಬಿಟ್ಟು ಜನಗಳ ಮೇಲೆ ಇನ್ನಷ್ಟುಹೊರೆ ಹಾಕುವ ದಾರಿಯನ್ನೇ ಹಿಡಿದಿದೆ. ಅದೂ ಕೂಡಾ ಸಂಯುಕ್ತ ರಂಗ ಚಾಲನಾ ಸಮಿತಿಯ ಬೆನ್ನ ಹಿಂದೆ ಈ ಕ್ರಮ ಕೈಗೊಂಡಿದೆ ಎಂದು ಎಡಪಕ್ಷಗಳು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿವೆ.

ಈ ಕ್ರಮಗಳನ್ನು ಪ್ರಕಟಿಸುವ ಹಿಂದಿನ ದಿನ ಸಂಯುಕ್ತ ರಂಗ ಚಾಲನಾ ಸಮಿತಿಯ ಸಭೆ ನಡೆಯಿತು. ಅದರಲ್ಲಿ ಕಡುಬಡವರಿಗೆ ಕುಟುಂಬಕ್ಕೆ 20. ಕೆ.ಜಿ. ಆಹಾರಧ್ಯಾನ್ಯಗಳನ್ನು ಅರ್ಧ ಬೆಲೆಯಲ್ಲಿ ವಿತರಿಸುವ ವಚನವನ್ನು ಜಾರಿಗೆ ತರುವ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿತ್ತು. ಆದರೆ ಸಭೆಯಲ್ಲಿ ಹಣಕಾಸು ಮಂತ್ರಿಗಳೇ ಹಾಜರಿರಲಿಲ್ಲ, ಈ ಸಭೆಯಲ್ಲಿ ಈ ಹಣಕಾಸು ಕ್ರಮಗಳ ಬಗ್ಗೆ ಪ್ರಸ್ತಾಪವಿಡದೆಯೇ ಪ್ರಕಟಿಸಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಎಡ ಪಕ್ಷಗಳು ಸರಕಾರ ತನ್ನ ಈ ಎಲ್ಲಾ ಕ್ರಮಗಳ ಮರುಪರಿಶೀಲನೆ ಮಾಡಬೇಕೆಂದು ಒತ್ತಾಯಿಸಿವೆ.

"ಹಾಗಿದ್ದರೆ ನೀವು ಸರಕಾರಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದುಕೊಳ್ಳಬಾರದೇಕೆ" ಎಂಬ ಪರ್ತಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹಾಗೂ ಸಿಪಿಐ ಕಾರ್ಯದರ್ಶಿ ಬರ್ದನ್ "ಅದರಿಂದೇ ನಾದರೂ ಪ್ರಯೋಜನ ವಾಗುತ್ತದೆಯೇ? ಬಿಜೆಪಿ ಬರುತ್ತದಷ್ಟೇ" ಎಂದರು. 'ಒಳಗಿನಿಂದಲೇ' ಹೋರಾಟ ನಡೆಸಿ ಸಂಯುಕ್ತ ರಂಗ ಜನಗಳಿಗೆ ನೀಡಿದ ವಚನವನ್ನು ಪಾಲಿಸುವಂತೆ ಮಾಡುತ್ತೇವೆ ಎಂದು ಸುರ್ಜಿತ್ ಹೇಳಿದರು.

ಬೆಂಗಳೂರಿನಲ್ಲಿ ಗಲಭೆ

ಕಿಡಿಗೇಡಿಗಳ, ರೌಡಿಕೂಟಗಳ ಬಗ್ಗೆ ಹೆಚ್ಚಿನ ನಿಗಾ ಅಗತ್ಯ

ಸೆಪ್ಟೆಂಬರ್ 17 ರಂದು ಬೆಂಗಳೂರಿನ ಜಯನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದ "ಗಲಭೆಗಳು ತೀರಾ ಖೇದಕರ. ಪೊಲೀಸರು ಕೈಗೊಂಡ ಕ್ಷಿಪ್ರಕ್ರಮಗಳಿಂದಾಗಿ ಇನ್ನೂ ಹರಡಬಹುದಾಗಿದ್ದ ಈ ಗಲಭೆಗಳು ಒಂದೆರಡು ದಿನಗಳಲ್ಲೇ ಶಾಂತವಾಗಿ ನಗರವು ಪುನ: ಯಥಾಸ್ಥಿತಿಗೆ ಬರುವಂತಾಗಿದೆ.

ಪತ್ರಿಕೆಗಳು ತೋರಿಸಿದ ಸಂಯಮ ನಿಜವಾಗಿಯೂ ಶ್ಲಾಘನೀಯ. ಈ ಸಂಯಮದಿಂದಾಗಿ ತಿಳಿಗೇಡಿಗಳು ಮತ್ತು ಮತೀಯ ರಾಜಕೀಯ ಆಸಕ್ತರು ಪ್ರಯತ್ನಪಟ್ಟರೂ ಅವರ ಪ್ರಯತ್ನಕ್ಕೆ ರೆಕ್ಕೆಪುಕ್ಕ ಸಿಕ್ಕಲಿಲ್ಲ. ನಾಗರಿಕರು ತಮ್ಮ ಕಷ್ಟಗಳನ್ನು ಉದ್ರೇಕಕ್ಕೆ ಒಳಗಾಗದೇ ಅನುಭವಿಸಿ ಹೊಸ ದಾರಿ ತುಳಿದಿದ್ದಾರೆ.

ಗಲಭೆಗಳಿಗೆ ಕಾರಣ ಬೆಂಗಳೂರು ಮಹಾನಗರ ಪಾಲಿಕೆಯ ಅವಸರ. ಗೊತ್ತಿದ್ದೂ ಗೊತ್ತಿದ್ದೂ ಇಂತಹ ವಿಷಯಗಳಲ್ಲಿ ಸಾಕಷ್ಟು ಸಮಯಾವಕಾಶ ಕೊಡದೆ ಮುಂದುವರಿದದ್ದು (ಕೋರ್ಟು ಆಜ್ಞೆ ಇದ್ದರೂ) ನಮ್ಮ ಅಭಿಪ್ರಾಯದಲ್ಲಿ ಸರಿಯಲ್ಲ. ಮಸೀದಿಯವರಿಗೂ ಮಹಾನಗರಪಾಲಿಕೆಯವರಿಗೂ ಮಾತುಕತೆಯಾಗಿದ್ದರೆ, ಆ ಮಾತುಕತೆಯ ಅಂಶಗಳು ಸಾರ್ವಜನಿಕರಿಗೆ ತಿಳಿದು ಬರುವ ಮೊದಲೇ ಕಾರ್ಯಾಚರಣೆಗೆ ಇಳಿದುದು ಸರಿಯಲ್ಲ.


ಇದರಲ್ಲಿ ಮುಖ್ಯ ವದಂತಿಗಳ ಹಬ್ಬುವಿಕೆ ಮತ್ತು ಕಿಡಿಗೇಡಿಗಳ, ರೌಡಿ ಕೂಟಗಳ ಪಾತ್ರ ಎಲ್ಲರ ಗಮನಕ್ಕೂ ಬಂದಿದೆ. ಇನ್ಸಪೆಕ್ಟರ್ ಪಾಶಾರ ಮೇಲೆ ಈ ಸಂದರ್ಭದಲ್ಲಿ ಆಪಾದನೆ ಮಾಡಿದ ಬಿಜೆಪಿ ಎಂ.ಎಲ್.ಎ ಗಳ ಹೇಳಿಕೆ ತೀರಾ ಬೇಜವಾಬ್ದಾರಿತನದ್ದು.

ಕಿಡಿಗೇಡಿಗಳ ಮತ್ತು ರೌಡಿಗಳ ವಿಷಯದಲ್ಲಿ ಸರಕಾರವು ಇನ್ನೂ ಹೆಚ್ಚಿನ ಮುತುವರ್ಜಿ ವಹಿಸಿ ಅವರು ಯಾವ ಸಂದರ್ಭದಲ್ಲೂ ಶಾಂತಿ ಕದಡದಂತೆ ಲೂಟಿಗೆ ಇಳಿಯದಂತೆ ಅವರ ಹುಟ್ಟಡಗಿಸಬೇಕೆಂದು ನಮ್ಮ ವಿನಂತಿ ಸರಕಾರಕ್ಕೆ.

ಮದರ್ ತೆರೇಸಾ

ಮಹಾನ್ ಮಾನವ ಹಿತ ಸಾಧಕರು

ಮದರ್ ತೆರೇಸಾರವರ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸುತ್ತಾ ಆಕೆ ಒಬ್ಬ ಮಹಾನ್ ಮಾನವ ಹಿತಸಾಧಕರಾಗಿದ್ದರು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಬಂಗಾಳದ ಎಡರಂಗ ಸರ್ಕಾರ 1977 ರಲ್ಲಿ ಅಧಿ ಕಾರಕ್ಕೆ ಬಂದಂದಿನಿಂದ ಸಂಕಟದಲ್ಲಿ ರುವ ಮಾನವ ಕುಲಕ್ಕಾಗಿ ಆಕೆ ಮಾಡುತ್ತಿರುವ ಕೆಲಸಗಳಿಗೆ ಸಕಲ ನೆರವು ನೀಡಿದೆ ಎಂದಿರುವ ಸಿಪಿಐ(ಎಂ) ಆಕೆ ಸ್ಥಾಪಿಸಿದ ಮಿಷನ ರೀಸ್ ಆಫ್ ಚಾರಿಟೀಸ್‌ನಲ್ಲಿನ ಎಲ್ಲರಿ ಗೂ ತನ್ನ ತೀವ್ರ ಸಂತಾಪವನ್ನು ತಿಳಿಸಿದೆ.



ಶಿಕ್ಷಣವನ್ನು ಕೇವಲ ಕೆಲವರ ಸ್ವತ್ತಾಗಿಸುವ ಶಿಕ್ಷಣ ನೀತಿಯ ಭಾಗವಾಗಿ ಬಂದಿರುವ ಕರ್ನಾಟಕ ವಿ.ವಿ.ಮಸೂದೆ-97 ಕ್ಕೆ ರಾಜ್ಯದ ವಿದ್ಯಾರ್ಥಿ ಸಮುದಾಯದಿಂದ ಭಾರೀ ಪ್ರತಿಭಟನೆ ವ್ಯಕ್ತಗೊಂಡಿದೆ. ಸೆಪ್ಟೆಂಬರ್ 12 ರಂದು ಎಸ್.ಎಫ್.ಐ ನೇತೃತ್ವದಲ್ಲಿ ನಡೆದ ವಿಧಾನ ಸೌಧ ಚಲೋದ ಒಂದು ದೃಶ್ಯ

ಜನವಾದಿ ಮಹಿಳಾ ಸಂಘಟನೆಯ ಮಡಿಲಿನಲ್ಲಿ 'ಪ್ರಜ್ಞಾ' ಕಾನೂನು ಸಲಹಾ ಸಮಿತಿ

ವರದಿ - ಪ್ರಭಾ

ಮಹಿಳಾ ಜನಾಂಗದ ಉನ್ನತಿ ಮತ್ತು ಸುಧಾರಣೆಗಾಗಿ, ಗಂಡುಹು ಮತ್ತು ಹೆಂಗಸಿನ ನಡುವೆ ಇರುವ ಎಲ್ಲಾ ರೀತಿಯ ತಾರತಮ್ಯಗಳನ್ನು ನಿರ್ಮೂಲನಗೊಳಿಸಿ, ಸಮಾನ ಹಕ್ಕುಗಳಿಂದ ಕೂಡಿದ ಶೋಷಣಾ ರಹಿತವಾದ ಪ್ರಜಾಸತ್ತಾತ್ಮಕ ಸಾಮಾಜಿಕ ವ್ಯವಸ್ಥೆಯ ಉದ್ದೇಶದಿಂದ ಕೆಲಸಮಾಡುತ್ತಿರುವ ಜನವಾದಿ ಮಹಿಳಾ ಸಂಘಟನೆ ತನ್ನ ಈ ಕ್ರಿಯೆಯ ಭಾಗವಾಗಿ 'ಕಾನೂನು ಸಲಹಾ ಸಮಿತಿ'ಯೊಂದನ್ನು ರಚಿಸಿದೆ. ಅದನ್ನು 'ಪ್ರಜ್ಞಾ' ಹೆಸರಿನಿಂದ ನೊಂದಾಯಿಸಿದೆ.

ಸ್ವಾತಂತ್ರ್ಯ ಪಡೆದು 50 ವರ್ಷಗಳಾದರೂ ಆರೋಗ್ಯ, ಶಿಕ್ಷಣ, ಉದ್ಯೋಗ, ಸಾಂಸ್ಕೃತಿಕ ಚಟುವಟಿಕೆಗಳು ಮುಂತಾದ ಪ್ರತಿಯೊಂದು ರಂಗದಲ್ಲೂ ಮಹಿಳೆಯರು ಹಿಂದುಳಿದಿದ್ದಾರೆ(ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರು ಪ್ರಗತಿಯನ್ನು ಸಾಧಿಸಿದ್ದರೂ). ಮಾನಭಂಗ, ವರದಕ್ಷಿಣ, ಕೊಲೆಗಳು ಒತ್ತಾಯದ ಮದುವೆಗಳು, ಬಹುಪತ್ನಿತ್ವ, ಬಾಲ್ಯವಿವಾಹ ಮುಂತಾದ ಮಹಿಳೆಯರ ಮೇಲಿನ ದಬ್ಬಾಳಿಕೆಗಳು ಸಾಮಾಜಿಕ ಅನ್ಯಾಯಗಳು ಇವತ್ತಿನ ಸಮಾಜದ ಸರ್ವೇಸಾಧಾರಣ ಸಂಗತಿಗಳಾಗಿವೆ.

· ಭಾರತದ ಸಂವಿಧಾನವು ಮಹಿಳೆಯರಿಗೆ ಸಮಾನ ಹಕ್ಕುಗಳ ಮತ್ತು ಅವಕಾಶಗಳನ್ನು ನೀಡಿದ್ದರೂ ಅವು ಕೇವಲ ಔಪಚಾರಿಕ ಹಕ್ಕುಗಳಾಗಿ ಉಳಿದಿವೆ. ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವ ಆರ್ಥಿಕವಾಗಿ ಅವಲಂಬಿತವಾಗಿರುವ ಮಹಿಳೆಯರು ಈ ಔಪಚಾರಿಕ ಹಕ್ಕುಗಳನ್ನು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಆಳುವ ವರ್ಗ ಇದನ್ನು ಜಾರಿ ಮಾಡುವ ಮನಸ್ಸನ್ನೂ ಮಾಡಿಲ್ಲ.

ಜಾತಿವಾದ, ಅಸ್ಪೃಶ್ಯತೆ, ಧಾರ್ಮಿಕ ಮೂಢನಂಬಿಕೆ ಮುಂತಾದ ಕೆಡುಕುಗಳ ಸುಳಿಯಿಂದ ಮಹಿಳೆಯರು ಹೊರಗಡೆ ಬರಲು ಸಾಧ್ಯವಾಗಿಲ್ಲ.

ಮಹಿಳೆಯರನ್ನು ಆವರಿಸಿರುವ ಎಲ್ಲ ದೌರ್ಜನ್ಯ, ದಬ್ಬಾಳಿಕೆಗಳ ವಿರುದ್ಧ ಧ್ವನಿ ಎತ್ತುವಂತೆ ಮಾಡುವ ಮತ್ತು ಮಹಿಳೆಯರಿಗಿರುವ ಎಲ್ಲಾ ಕಾನೂನುಗಳ ಸಂವಿಧಾನಾತ್ಮಕ ಹಕ್ಕುಗಳನ್ನು ಜಾರಿಗೊಳಿಸಲು ನೆರವಾಗುವ ಸಲುವಾಗಿ ಕಾನೂನು ಸಲಹಾ ಸಮಿತಿ ರಚನೆಯಾಗಿದೆ.

"ಪ್ರಜ್ಞಾ" ಹಮ್ಮಿಕೊಂಡಿರುವ ಕೆಲವು ಪ್ರಮುಖ ಚಟುವಟಿಕೆಗಳು

- ಕಾನೂನು ನೆರವು ಕೇಂದ್ರಗಳನ್ನು ನಡೆಸುವುದು.
- ಜೀವನಕ್ಕೆ ಆಧಾರವಿಲ್ಲದವರಿಗೆ ಸಹಾಯ ಮಾಡುವುದು.
- ಬೈ ಲಾ ಕ್ಕೆ ಅನುಸಾರವಾಗಿ ಸಭೆ, ಸಂವಾದ, ಚರ್ಚೆ, ವಿಚಾರ ಸಂಕಿರಣಗಳನ್ನು ನಡೆಸುವುದು.
- ಕಲೆ, ಸಾಹಿತ್ಯ, ಸಂಸ್ಕೃತಿಗಳ ಕುರಿತ ಕಾರ್ಯಕ್ರಮ ನಡೆಸುವುದು.

ವಿಶೇಷವಾಗಿ ಮಹಿಳೆಯರ ಕಾನೂನುಗಳ ಕುರಿತ ಪ್ರಜ್ಞೆಯನ್ನು ಎತ್ತರಿಸುವುದು.

ಜವಾಬ್ದಾರಿಯುತ ಮತ್ತು ಪ್ರಜಾಪ್ರಭುತ್ವ ಪ್ರಜ್ಞೆಯುಳ್ಳ ಪ್ರಜೆಗಳಾದ ಮಹಿಳೆಯರು ಅಭಿವೃದ್ಧಿ ಹೊಂದುವಂತೆ ಅವರ ಸಾಮಾಜಿಕ, ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಬೌದ್ಧಿಕ ಉನ್ನತಿಗೆ ಶ್ರಮಿಸುವ ಜನವಾದಿ ಮಹಿಳಾ ಸಂಘಟನೆಯ ಭಾಗವಾಗಿ 'ಪ್ರಜ್ಞಾ' ಕೆಲಸ ಮಾಡುತ್ತದೆ.

ಈ ರೀತಿಯ ಪ್ರಯತ್ನದ ಪ್ರಥಮ ಭಾಗವಾಗಿ 2.8.97 ರಂದು 'ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳ ತುಲನಾತ್ಮಕ ಅಧ್ಯಯನ' ಎನ್ನುವ ವಿಷಯದ ಕುರಿತು ಸಂವಾದವೊಂದನ್ನು ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ನ್ಯಾಷನಲ್ ಲಾ ಸ್ಕೂಲಿನ ಪ್ರತಿಭಾನ್ವಿತ ವಿದ್ಯಾರ್ಥಿನಿಯರಾದ ಕುಮಾರಿ ಮೇನಕ ಗುರುಸ್ವಾಮಿ ಹಾಗೂ ಕುಮಾರಿ ಅಂಕ್ರಿಯಾ ಗೇಬ್ರಿಯಲ್ ರವರು ಭಾಗವಹಿಸಿ ಭಾರತ, ಬಾಂಗ್ಲಾದೇಶ, ದ.ಆಫ್ರಿಕ ಮತ್ತು ನಾರ್ಡಿಕ್ ದೇಶಗಳ ಮಹಿಳೆಯರ ಸಾಂವಿಧಾನಿಕ ಹಕ್ಕುಗಳ ಕುರಿತ ತುಲನಾತ್ಮಕವಾದ ವಿಚಾರಗಳನ್ನು ಮಂಡಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀರಾಜೇಂದ್ರ ಬಾಬು ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಲವಾರು ಕ್ಷೇತ್ರಗಳ ಜನ ಪ್ರತಿನಿಧಿಗಳು, ಗಣ್ಯರು ಪಾಲ್ಗೊಂಡಿದ್ದರು.ಹಾಗೆಯೇ 'ಪ್ರಜ್ಞಾ' ನೆರವನ್ನು ಕೋರಿ ಬಂದವರೊಂದಿಗೆ ನಿರ್ದಿಷ್ಟವಾಗಿ ಗುರುತಿಸಿಕೊಂಡು ಕೆಲಸ ಮಾಡುತ್ತಿದೆ.

ಮಹಿಳೆಯರ ವಿಮೋಚನೆಯ ಹೋರಾಟವು ಏಕರೂಪದ ಹಿತಾಸಕ್ತಿಗಳುಳ್ಳ ವಿಶಾಲ ಜನವಿಭಾಗದ ಬದಲಾವಣೆಗಾಗಿ ನಡೆಸುವ ಹೋರಾಟದ ಅವಿಭಾಜ್ಯ ಸಂಬಂಧವನ್ನು ಹೊಂದಿದೆ. ಈ ರೀತಿಯ ಎಲ್ಲಾ ಪ್ರಗತಿಪರ ಮತ್ತು ಪ್ರಜಾಪ್ರಭುತ್ವವಾದಿ ಗುಂಪುಗಳಿಗೆ ಸಹಕಾರ ನೀಡಬೇಕಾಗುತ್ತದೆ ಮತ್ತು ಸಹಕಾರದಿಂದ ಕೂಡಿಕೊಂಡಿರಬೇಕಾಗುತ್ತದೆ.

ಇಂತಹ ಸ್ಪಷ್ಟ ದೃಷ್ಟಿಕೋನದಲ್ಲಿ 'ಪ್ರಜ್ಞಾ' ಸಾಮಾಜಿಕ ಕಳಕಳಿಯಿಂದ ಕೆಲಸ ಮಾಡುತ್ತಿರುವ ವಿವಿಧ ಸಂಘಟನೆಗಳಿಗೆ ಸೇರಿದ ಸಮಾನ ಮನಸ್ಕ ಸಮಿತಿಯನ್ನು ಹೊಂದಿದೆ. ಪ್ರಜ್ಞಾದ ಪದಾಧಿಕಾರಿಗಳಾಗಿ ಚುನಾಯಿತರಾದವರ ಹೆಸರುಗಳು ಈ ರೀತಿ ಇವೆ.

ಅಧ್ಯಕ್ಷರು-ಕೆ.ಎಸ್.ವಿಮಲಾ, ಉಪಾಧ್ಯಕ್ಷರು-ಹೆಚ್.ಎಸ್.ನಾಗಮೋಹನ ದಾಸ್, ಎಸ್.ಶಂಕರಪ್ಪ, ಜಿ.ಸುಶೀಲಮ್ಮ ಕಾರ್ಯದರ್ಶಿ- ಪ್ರಭಾ.ಎನ್.
ಸಹ ಕಾರ್ಯದರ್ಶಿ-ಕೆ.ನೀಲಾ, ಖಜಾಂಚಿ- ಕೆ.ಎನ್.ಉಮೇಶ್

'ಪ್ರಜ್ಞಾ' ತನ್ನೆಲ್ಲ ಚಟುವಟಿಕೆಗಳಿಗೆ ಪ್ರಗತಿಪರ ಶಕ್ತಿಗಳ ಮತ್ತು ವಿಶಾಲ ಜನಸಮೂಹದ ಬೆಂಬಲ ಮತ್ತು ಸಹಕಾರವನ್ನು ಬಯಸುತ್ತದೆ.

ಸಂಘಟಿತರಾಗಲು ರೈತರಿಗೆ ಕರೆ

ಹಾನಗಲ್ : ಆಳುವ ಸರ್ಕಾರಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಭೂಮಾಲಕ ಪರ ಧೋರಣೆಗಳಿಂದಾಗಿ ಒಕ್ಕಲುತನವು ಒಂದು ಲಾಭದಾಯಕ ಉದ್ಯೋಗವಾಗಿ ಉಳಿಯದಿರುವುದರಿಂದ ಇಂತಹ ಧೋರಣೆಗಳ ವಿರುದ್ಧ ಹೋರಾಡಲು ರೈತರು ಸಂಘಟಿತರಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಅವರು ರೈತರಿಗೆ ಕರೆ ನೀಡಿದರು. ಅವರು ಹಾನಗಲ್ ತಾಲ್ಲೂಕ್ ಕಾಡಶೆಟ್ಟರ ಹಳ್ಳಿ ಗ್ರಾಮದಲ್ಲಿ ರೈತ ಸಂಘದ ಘಟಕವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಜಾಗತೀಕರಣದ ವ್ಯಾಮೋಹಕ್ಕೆ ಒಳಗಾಗಿರುವ ಭಾರತ ಸರ್ಕಾರವು ಆಹಾರ ಉತ್ಪಾದನೆಯಲ್ಲಿ ದೇಶವು ಸ್ವಾವಲಂಬಿಯಾಗಿರಬೇಕೆಂಬ ಧೋರಣೆಯನ್ನು ಕೈ ಬಿಟ್ಟಿರುವುದರಿಂದ ಕೃಷಿ ವಿನಾಶದ ಅಂಚಿಗೆ ತಳ್ಳಲ್ಪಡುತ್ತಿದೆ ಎಂದು ಹೇಳಿದ ಮಾನ್ಪಡೆ ಅವರು ನಮ್ಮ ದೇಶಕ್ಕೆ ಸೋಮಾಲಿಯಾದ ಪರಿಸ್ಥಿತಿ ಬಂದೊದಗುವ ಮುಂಚಿತವಾಗಿ ನಮ್ಮ ರೈತರು ಎಚ್ಚರಗೊಳ್ಳುವುದು ಅತೀ ಅವಶ್ಯವಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಅವರು ಮಾತನಾಡುತ್ತಾ ಸ್ವಾತಂತ್ರ್ಯ ಸಿಕ್ಕು 50 ವರ್ಷಗಳಾಗಿ ಸ್ವಾತಂತ್ರ್ಯದ ಚಿನ್ನ ಹಬ್ಬ ಆಚರಿಸುತ್ತಿರುವ ಸಂದರ್ಭದಲ್ಲಿ ಚಿನ್ನವನ್ನೇ ಬೆಳೆಯುವ ನಾಡಿನ ರೈತರು ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ ಎಂದರು. ಸಾಲದ ಹಣವನ್ನು ವಸೂಲಿ ಮಾಡುವ ಹೆಸರಿನಲ್ಲಿ ರೈತರ ಪಂಪ್‌ಸೆಟ್ - ಬೋರ್‌ವೆಲ್ ಇತ್ಯಾದಿಗಳನ್ನು ಭೂ ಅಡಮಾನು ಬ್ಯಾಂಕುಗಳು ಕಿತ್ತುಕೊಂಡು ಹೋಗುವ ಮೂಲಕ ರೈತರ ಬೆಳೆಗಳನ್ನು ನಾಶಮಾಡುವ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸಿದ ಕಾಂ|| ಜಗನ್ನಾಥ್ ಅವರು ಬ್ಯಾಂಕ್ ಅಧಿಕಾರಿಗಳ ಇಂತಹ ಉದ್ಧಟತನದ ವಿರುದ್ಧ ರೈತ ಸಂಘ ಹೋರಾಡಬೇಕೆಂದು ಹೇಳಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪರವಾಗಿ ಶುಭಕೋರಿ ಮಾತನಾಡಿದ ನಿತ್ಯಾನಂದ ಸ್ವಾಮಿ ಅವರು ರೈತ ಸಂಘದ ಹೋರಾಟಗಳಿಗೆ ಕೃಷಿ ಕೂಲಿಕಾರರ ಸಂಘವು ಪೂರ್ಣ ಬೆಂಬಲ ನೀಡುವುದೆಂದು ಹೇಳಿದರು. ಸ್ಥಳೀಯ ರೈತರ ಪ್ರತಿನಿಧಿಯಾಗಿ ಆರಂಭದಲ್ಲಿ ಮಾತನಾಡಿದ ಸಿ.ಎಂ.ಪಾಟಿಲ್ ಅವರು ಹಿಂದೆ ರಾಜ್ಯ ರೈತ ಸಂಘದಲ್ಲಿ ತಮ್ಮ ಅನುಭವವನ್ನು ನೆನಪುಮಾಡಿಕೊಳ್ಳುತ್ತಾ ಅದು ರೈತರ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ವಿಫಲವಾಯಿತು ಎಂದು ಹೇಳಿದರು. ಅಕ್ಕಿ ಆಲೂರಿನ ವಿಶ್ವನಾಥ ಡಿ.ತುಪ್ಪದ್, ಹಾವೇರಿಯ ರುದ್ರಪ್ಪ ಜಾಬಿನ್, ಹಾನಗಲ್ ತಾಲ್ಲೂಕ್ ಕೃಷಿಕೂಲಿಕಾರರ ಸಂಘದ ಅಧ್ಯಕ್ಷರಾದ ಹಕ್ಕಲಗೌಡ ಪಾಟೀಲ್ ಅವರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪಂಚಾಕ್ಷರಯ್ಯ ಚರಂತಿಮಠ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಚನ್ನವೀರಪ್ಪ ಹುಣಸಿಕಟ್ಟಿಯವರು ಸ್ವಾಗತಿಸಿದರು. ಭಾಷಾಸಾಬ ನಂದಿಹಳ್ಳಿ ವಂದಿಸಿದರು. ಶಿವರುದ್ರಪ್ಪ ದೊಡಮನಿಯವರ ಅಚ್ಚುಕಟ್ಟಾದ ಕಾರ್ಯನಿರ್ವಹಣೆ ಗಮನಾರ್ಹವಾಗಿತ್ತು. ಪರಸ್ಥಳಗಳಿಂದ ಶ್ರೀಮತಿ ಜಯಶೀಲಮ್ಮ ಮೂಡಿ, ಶ್ರೀಮತಿ ಸುಂದರವ್ವ, ಮಹಮ್ಮದ್‌ಮಿಯಾ ಕಲಕೊಪ್ಪ, ಮುರಾರಿ ಡಾಂಗೆ, ಚಂದ್ರಶೇಖರಪ್ಪ ಚೌಟಿ ಮೊದಲಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಮಹಿಳಾ ಆರೋಗ್ಯ ರಕ್ಷಣಾ ಸಮಿತಿಯಿಂದ ಕ್ವಿನಕ್ರಿನ್ ಬಳಕೆಗೆ ಪ್ರತಿಭಟನೆ

ಕ್ವಿನಕ್ರಿನ್ ಎಂಬ ಮಲೇರಿಯಾ ರೋಗಕ್ಕೆ(ಬಹಳ ಹಿಂದೆ) ಬಳಸುತ್ತಿದ್ದ ಔಷಧಿಯನ್ನು ಈಗ ಗರ್ಭನಿರೋಧಕವಾಗಿ ಬಳಸಲಾಗುತ್ತಿದೆ. ಇದೊಂದು ಅವೈಜ್ಞಾನಿಕ, ಅಪಾಯಕಾರಿ ಸಂತಾನ ನಿರೋಧ ವಿಧಾನ. ಬೆಂಗಳೂರಿನಲ್ಲಿ ಚಿಪ್‌ಸಂಸೆ (ಕಾಂಟ್ರಾಸೆಪ್ಟಿವ್ ಹೆಲ್ತ್ ಇನೋವೇಟಿವ್ ಪ್ರಾಜೆಕ್ಟ್) ಈ ಕ್ವಿನಕ್ರಿನ್ ಬಳಕೆಯ ವಿಧಾನವನ್ನು ವೈದ್ಯರಿಗೆ ತಿಳಿಸುತ್ತಿದ್ದಾರೆ. ಮಾತ್ರೆಗಳನ್ನು ಹಂಚುತ್ತಿದ್ದಾರೆ. ಈ ವಿಧಾನದ ಬಳಕೆಗೆ ಇದುವರೆಗೂ ಔಷಧ ನಿಯಂತ್ರಣ ಮಂಡಳಿಯಿಂದ ಪರವಾನಗಿ ದೊರೆತಿಲ್ಲ. ವಿಶ್ವಆರೋಗ್ಯ ಸಂಸ್ಥೆ ಇದನ್ನು ಉಪಯೋಗಿಸದಿರಲು ಬಹಳ ಹಿಂದೆಯೇ ಸಲಹೆ ನೀಡಿದೆ.

ದಿನಾಂಕ 18.9.97 ರಂದು ಚಿಪ್ ಸಂಸ್ಥೆಯ ಮುಖ್ಯಸ್ಥ ಡಾ|| ಪ್ರವೀಣ್ ಕಿಣಿಯವರ ಔಷಧಾಲಯದ ಮುಂದೆ ಜನವಾದಿ ಮಹಿಳಾ ಸಂಘಟನೆ, ಎಸ್.ಎಫ್.ಐ, ಡಿವೈಎಫ್‌ಐ, ಸುಮಂಗಲಿ ಸೇವಾಶ್ರಮ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಮಾನಸ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ನಿಯೋಗವೊಂದು . ಡಾ|| ಕಿಣಿಯವರನ್ನು ಭೇಟಿ ಮಾಡಿ ಈ ವಿಧಾನವನ್ನು ಕೈ ಬಿಡುವಂತೆ ಒತ್ತಾಯಿಸಿತು.

ನಿಯೋಗದೊಂದಿಗೆ ಮಾತನಾಡಿದ ಡಾ|| ಕಿಣಿ ತನ್ನ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತ - ಇದೊಂದು ಪ್ರಜಾಪ್ರಭುತ್ವ ರಾಷ್ಟ್ರ ಇಲ್ಲಿ ಏನನ್ನೂ ಮಾಡಲು ತಮಗೆ ಹಕ್ಕಿದೆ ಎಂದರು ಮತ್ತು ದೇಶದ ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡಲು ಹೊಸ ಹೊಸ ವಿಧಾನವನ್ನು ಕಂಡುಹಿಡಿಯಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು. ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸಲಾಗದಾಗ ಕಳೆದ 3 ತಿಂಗಳಿಂದ ಈ ವಿಧಾನದ ಬಳಕೆಯನ್ನು ಕೈ ಬಿಡಲಾಗಿದೆ ಎಂದು ಹೇಳಿದರು. ಹಾಗೆಂದು ಲಿಖಿತವಾಗಿ ಕೊಡಿ ಮತ್ತು ಈಗಾಗಲೇ ವಿಧಾನವನ್ನು ಬಳಸುತ್ತಿರುವ ವೈದ್ಯರಿಗೆ ಕಳಿಸಿ ಎಂದು ಕೇಳಿದಾಗ ನಿರುತ್ತರರಾದರು.

ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಮಹಿಳೆಯರನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ಶ್ರೀಮತಿ ಕೆ.ಎಸ್.ವಿಮಲಾ, ಡಾ|| ಪ್ರಕಾಶ್ ಸಿ.ರಾವ್, ಪ್ರಭಾ ಎನ್. ರವರು ಮಾತನಾಡಿದರು.

ಮಹಿಳೆಯರ ಆರೋಗ್ಯದ ಬಗ್ಗೆ ಸಾಮಾಜಿಕವಾಗಿ, ಕೌಟುಂಬಿಕವಾಗಿ ತೀವ್ರ ನಿರ್ಲಕ್ಷ್ಯವಿರುವ ಹಿನ್ನೆಲೆಯಲ್ಲಿ - ಈ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ನಿರಂತರ ಚಟುವಟಿಕೆ ನಡೆಸಬೇಕೆಂಬ ಉದ್ದೇಶದಿಂದ ಎಲ್ಲ ಸಂಘಟನೆಗಳು ಸೇರಿ "ಮಹಿಳಾ ಆರೋಗ್ಯ ರಕ್ಷಣಾ ಸಮಿತಿ" (MARS) ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸಲು ನಿರ್ಧರಿಸಿವೆ.

ಕ್ವಿನಕ್ರಿನ್ ಬಳಕೆಯ ವಿರುದ್ಧದ ಹೋರಾಟದ ಮೊದಲ ಹಂತ ಮುಗಿದಿದ್ದು, ಎರಡನೇ ಹಂತವಾಗಿ ದಿನಾಂಕ 28.9.97 ರಂದು ಬೆಂಗಳೂರಿನಲ್ಲಿ ಒಂದು ವಿಚಾರ ಸಂಕಿರಣ ನಡೆಸಲು ಉದ್ದೇಶಿಸಿದೆ. ಅಂದು ಕ್ವಿನಕ್ರಿನ್ ದುಷ್ಪರಿಣಾಮಕ್ಕೆ ಒಳಗಾದ ಮಹಿಳೆಯರನ್ನು ಕುರಿತ ಮತ್ತು ಇತರ ವಿವರಗಳನ್ನೊಳಗೊಂಡ ವಿಡಿಯೋ ಕ್ಯಾಸೆಟ್ ಪ್ರದರ್ಶನ, ಕ್ವಿನಕ್ರಿನ್ ಕುರಿತು ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ವಿ.ವಿ.ಗಳಲ್ಲಿ ಅಪ್ರಜಾಸತ್ತಾತ್ಮಕ ವಿನಾಶಕಾರಿ ಕ್ರಮ

ಶಿಕ್ಷಕರು-ವಿದ್ಯಾರ್ಥಿಗಳು - ಶಿಕ್ಷಕೇತರ ಸಿಬ್ಬಂದಿಗಳಿಗೆ ಸೂಕ್ತ ಪ್ರಾತಿನಿಧ್ಯ ಕೊಡದೆ ಯಾವುದೇ ವಿಶ್ವವಿದ್ಯಾಲಯವನ್ನು ನಡೆಸುವುದು ವಿನಾಶಕಾರಿ ಕ್ರಮ ಎಂದು ಪ.ಬಂಗಾಲದ ಉನ್ನತ ಶಿಕ್ಷಣ ಸಚಿವ ಪ್ರೊ.ಸತ್ಯಸಾಧನ್ ಚಕ್ರವರ್ತಿ ಅಭಿಪ್ರಾಯ ಪಟ್ಟಿದ್ದಾರೆ. ಅವರು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ) ಕರ್ನಾಟಕ ವಿ.ವಿ.ಗಳ ಮಸೂದೆ-97 ನ್ನು ವಿರೋಧಿಸಿ ಸಂಘಟಿಸಿದ್ದ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪಶ್ಚಿಮ ಬಂಗಾಲದಲ್ಲಿ ವಿ.ವಿ.ಗಳ ಪ್ರಜಾಪ್ರಭುತ್ವಕರಣದ ಬಗ್ಗೆ ತಿಳಿಸಿದ ಅವರು ವಿ.ವಿ.ಯ ಅಂಗ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಚುನಾಯಿತ ವಿದ್ಯಾರ್ಥಿ ಶಿಕ್ಷಕರ ಪ್ರತಿನಿಧಿಗಳೇ ಬಹುಸಂಖ್ಯೆಯಲ್ಲಿರುವುದನ್ನು ತಿಳಿಸಿದರು. ಶಿಕ್ಷಣ ಕ್ಷೇತ್ರದಲ್ಲಿನ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡಾಗಲೇ ವಿ.ವಿ.ಗಳಲ್ಲಿ ನೈಜ ಪ್ರಜಾಸತ್ತೆ ಸ್ಥಾಪನೆಯಾಗುವುದು ಎಂದರು. ಉಪಕುಲಪತಿಗಳ ಆಯ್ಕೆಯೂ ಸೇರಿದಂತೆ ವಿ.ವಿ.ಗಳ ಬಹುತೇಕ ವಿಷಯಗಳಲ್ಲಿ ಯಾವುದೇ ರೀತಿಯ ಸರ್ಕಾರಿ ಹಸ್ತಕ್ಷೇಪ ಇಲ್ಲದಂತೆ ವಿ.ವಿ. ಸ್ವಾಯತ್ತತೆ ಕಾಪಾಡಲಾಗಿದೆ ಎಂದರು.

ಹೊಸ ಆರ್ಥಿಕ ನೀತಿಯ ಪ್ರತಿಬಿಂಬವೇ ಹೊಸ ಶಿಕ್ಷಣ ನೀತಿ ಎಂದ ಅವರು ಸ್ವಾತಂತ್ರ್ಯ ಬಂದ ಹೊಸದರಲ್ಲಿನ ಜನಪರ ಘೋಷಣೆಗಳಾದ ಸ್ವಾವಲಂಬನೆ, ಎಲ್ಲರಿಗೂ ಶಿಕ್ಷಣ ಮತ್ತು ಇತರ ಜನಪರ ಆಶಯಗಳು ಮಾಯವಾಗಿ ಹಣವಿದ್ದರೆ ಮಾತ್ರ ಶಿಕ್ಷಣ ಎಂಬ ಘೋಷಣೆ ಕೇಳಿ ಬರುತ್ತಿರುವುದು ಶೋಚನೀಯ ಎಂದರು.

14 ವರ್ಷದವರೆಗೆ ಕಡ್ಡಾಯ ಶಿಕ್ಷಣ ಸಾಂವಿಧಾನಿಕ ಜವಾಬ್ದಾರಿಯಾಗಿದ್ದು ಇದನ್ನು ಯಾವುದೇ ಸರ್ಕಾರ ನಿರ್ಲಕ್ಷಿಸುವುದು ಸಲ್ಲದು. ತುರ್ತು ಪರಿಸ್ಥಿತಿಯಲ್ಲಿ ಶಿಕ್ಷಣವನ್ನು ಸಮವರ್ತಿಪಟ್ಟಿಯಲ್ಲಿ ಸೇರಿಸಿದ್ದರಿಂದ ರಾಜ್ಯ ಸರ್ಕಾರಗಳಿಗೆ ಶಿಕ್ಷಣ ನೀಡಲು ಹೆಚ್ಚಿನ ಹಣ ಸಿಗದೇ ಅಧಿಕಾರ ಕೇಂದ್ರೀಕರಣಗೊಂಡು ಶಿಕ್ಷಣದ ಪ್ರಗತಿ ಕುಂಠಿತಗೊಂಡಿದೆ ಎಂದು ಅಭಿಪ್ರಾಯ ಪಟ್ಟರು.


ಉನ್ನತ ಶಿಕ್ಷಣವನ್ನು ಉಳ್ಳವರ ಸೊತ್ತಾಗಿಸಲು ಹೊರಟಿರುವ ಕೇಂದ್ರ ಸರ್ಕಾರವನ್ನು ಎಚ್ಚರಿಸಿದ ಅವರು ಜಾಗತೀಕರಣ - ಖಾಸಗೀಕರಣದ ನೇರ ಪ್ರಭಾವಕ್ಕೆ ಒಳಗಾಗಿರುವ ಶಿಕ್ಷಣ ಕ್ಷೇತ್ರ ತೀವ್ರ ಸಂಕಷ್ಟದಲ್ಲಿದೆ ಎಂದರು.

ಶಿಕ್ಷಣ ತಜ್ಞರಾದ ಡಾ|| ಜೆ.ರಾಮಕೃಷ್ಣ ರವರು ಮಾತನಾಡಿ ಈ ಮಸೂದೆಯು ಸೋಮಶೇಖರ್‌ರವರ ಖಾಸಗಿ ಮಸೂದೆ ಎಂಬಂತೆ ಸರ್ಕಾರದ ಇತ್ತೀಚಿನ ಹೇಳಿಕೆಗಳು ಸ್ಪಷ್ಟಪಡಿಸುತ್ತವೆ ಎಂದರು. ಇಂತಹ ಶಿಕ್ಷಣ ವಿರೋಧಿ ಮಸೂದೆಯನ್ನು ವಿರೋಧಿಸದೆ ಇದ್ದಲ್ಲಿ ವಿ.ವಿ.ಗಳ ವಿನಾಶ ಖಂಡಿತ ಎಂದರು.

ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಬೆಂಗಳೂರು ಅಧ್ಯಾಪಕರ ಸಂಘದ ಅಧ್ಯಕ್ಷ ಟಿ.ವೆಂಕಟೇಶ್ ಮೂರ್ತಿಯವರು ಮಾತನಾಡುತ್ತಾ ಈ ವಿ.ವಿ.ಗಳ ಮಸೂದೆ ವಾಪಾಸಾದರೆ ವಿಶ್ವವಿದ್ಯಾಲಯವೆಂಬುದು ರೆವಿನ್ಯೂ ಇಲಾಖೆಯಲ್ಲಿ ಮತ್ತೊಂದು ಸರ್ಕಾರಿ ಇಲಾಖೆಯಾಗಿ ಮಾರ್ಪಡುವುದು ಎಂದರು. ಕರ್ನಾಟಕದ ವಿಶ್ವ ವಿದ್ಯಾಲಯಗಳ ಶಿಕ್ಷಕಕಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಲೋಕೇಶ್ ವಿದ್ಯಾರ್ಥಿ-ಶಿಕ್ಷಕರ ಐಕ್ಯತೆಯ ಬಗ್ಗೆ ಒತ್ತುಕೊಟ್ಟರು.

ಅಧ್ಯಕ್ಷೀಯ ಭಾಷಣದಲ್ಲಿ ಎಸ್.ಎಫ್.ಐ. ನ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್ ವಿ.ವಿ.ಗಳ ಮಸೂದೆ-97 ಸಂವಿಧಾನದ ಪ್ರಜಾಸತ್ತಾತ್ಮಕ ಆಶಯಗಳಿಗೆ ವಿರುದ್ಧವಾಗಿದೆ ಎಂದರು. ಈ ದಮನಕಾರಿ ಮಸೂದೆಯನ್ನು ವಿರೋಧಿಸಿ ಸೆಪ್ಟೆಂಬರ್ 12 ರಂದು ವಿಧಾನ ಸೌಧ ಚಲೋ ಕಾರ್ಯಕ್ರಮ ನಡೆಸಲು ಸಮಾವೇಶವು ನಿರ್ಣಯ ಕೈಗೊಂಡಿತು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾಂ|| ಕೆ.ಪ್ರಕಾಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸೆನೆಟ್ ಸದಸ್ಯ ಕೆ.ಎಸ್.ಲಕ್ಷ್ಮಿ ಸ್ವಾಗತಿಸಿದರು. ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷರಾದ ಆರ್.ರಾಮಕೃಷ್ಣ ವಂದಿಸಿದರು. ಕೆ.ಯು.ಸಿ.ಟಿ.ಎ. ಗೌರವ ಅಧ್ಯಕ್ಷರಾದ ಶ್ರೀ ಎಲ್.ಆರ್.ಅಂಗಡಿ ಹಾಗೂ ಅಧ್ಯಕ್ಷರಾದ ಶ್ರೀಪಾಟೀಲ ವೇದಿಕೆಯ ಮೇಲೆ ಉಪಸ್ಥಿತರಿದ್ದರು.



ಮತ್ತೆ ಬರದ ಭೀತಿ: ಪರಿಹಾರಕ್ಕೆ ರೈತಸಂಘ, ಕೂಲಿಕಾರರ ಸಂಘ ಒತ್ತಾಯ

(ನಮ್ಮ ಪ್ರತಿನಿಧಿಯಿಂದ)

ಕಲ್ಬುರ್ಗಿ ಜಿಲ್ಲೆ ಬರಗಾಲದ ದವಡೆಗೆ ಸಿಕ್ಕಿಕೊಂಡಿದೆ. 'ತೊಗರಿ ಬೇಳೆಯ ಕಣಜ' ಎಂದೇ ಹೆಸರಾದ ಕಲ್ಬುರ್ಗಿ ಕಳೆದ ಬಾರಿ ತೊಗರಿಯ ಬಂಪರ್ ಬೆಳೆ ಬೆಳೆದಿದ್ದರೆ ಈ ಬಾರಿ ಮುಂಗಾರು ಮಳೆ ಕೈಕೊಟ್ಟ ಕಾರಣ ತೊಗರಿಯಿಂದ ಹಿಡಿದು ಎಲ್ಲಾ ಆಹಾರ ಧಾನ್ಯಗಳ ಮೇಲೆ ತೀವ್ರ ಪರಿಣಾಮ ಬೀರಲಿದೆ. ಜಿಲ್ಲೆಯಲ್ಲಿ ಆಹಾರಧಾನ್ಯದ ಜೊತೆ ಮೇವಿನ ಸಮಸ್ಯೆಯೂ ಬೃಹತ್ತಾಗಿ ಕಾಡಲಿದೆ. ಜಿಲ್ಲೆಯ ರೈತ ಮಳೆಯ ವಿಫಲತೆಯಿಂದಾಗಿ ದುಗುಡಗೊಂಡಿದ್ದರೆ ಕೃಷಿ ಕಾರ್ಮಿಕರು ಬೇರೆ ರಾಜ್ಯಗಳಿಗೆ ವಲಸೆ ಹೋಗಲು ಆರಂಭಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘ ಈ ಸಮಸ್ಯೆಯ ಬಗ್ಗೆ ಜಿಲ್ಲಾ ಆಡಳಿತದ ಗಮನ ಸೆಳೆದಿದೆ. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಅವರು ರಾಜ್ಯ ಸರ್ಕಾರ ಕೂಡಲೇ ಬರ ಪರಿಹಾರ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೃಷಿ ಕಾರ್ಮಿಕರು ಮಹಾರಾಷ್ಟ್ರ, ಆಂಧ್ರಪ್ರದೇಶದತ್ತ ವಲಸೆ ಹೋಗುವುದನ್ನು ತಡೆಗಟ್ಟಬೇಕೆಂದು ಆಗ್ರಹಿಸಿದ್ದಾರೆ.

ಕಲ್ಬುರ್ಗಿ ಜಿಲ್ಲೆಯಲ್ಲಿ ಈ ಬಾರಿಯ ಬರಗಾಲದಿಂದ 11 ಲಕ್ಷ ಕೃಷಿ ಕೂಲಿಗಾರರು ತೀವ್ರ ತೊಂದರೆಗೆ ಒಳಗಾಗಲಿದ್ದಾರೆ. ಈಗಾಗಲೇ ಭಾರೀ ಸಂಖ್ಯೆಯಲ್ಲಿ ಕೂಲಿಕಾರರು ನೆರೆಯ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದು. ಸುಗ್ಗಿಯ ವೇಳೆ ಭಾರೀ ಸಂಖ್ಯೆಯಲ್ಲಿ ಕೆಲಸಕ್ಕೆ ಬರುತ್ತಿದ್ದ ಮಹಿಳಾ ಕೃಷಿ ಕೂಲಿಕಾರರ ಮೇಲೂ ಈ ಬರ ತೀವ್ರರೀತಿಯ ಪರಿಣಾಮವನ್ನು ಉಂಟು ಮಾಡಲಿದೆ.

ರಾಜ್ಯ ಸರ್ಕಾರ ತಕ್ಷಣವೇ ಗಮನ ಹರಿಸಿ ಗ್ರಾಮೀಣ ಪ್ರದೇಶದಲ್ಲಿ ಈ ಕೂಡಲೇ ಉದ್ಯೋಗ ಆಧಾರಿತ ಕೆಲಸವನ್ನು ಆರಂಭಿಸುವಂತೆ ಕೂಲಿಯಾಗಿ ಆಹಾರ ಧಾನ್ಯವನ್ನು ನೀಡುವಂತೆ ಮಾನ್ಪಡೆ ಒತ್ತಾಯಿಸಿದ್ದಾರೆ. ಬರ ಪೀಡಿತ ಪ್ರದೇಶದಲ್ಲಿ ಜವಾಹರ್ ರೋಜಗಾರ್ ಯೋಜನೆ ಮತ್ತು ಉದ್ಯೋಗ ಭರವಸೆ ಯೋಜನೆಯಲ್ಲಿ ಇರುವ ಹಣ ಮೂಲಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ಸೂಚಿಸಿದ್ದರು.

ಮಳೆ ಆಧಾರಿತ ಪ್ರದೇಶದಲ್ಲಿ ಸಹಾ ಜನರು ಈಗ ವಾಣಿಜ್ಯ ಬೆಳೆಗಳಿಗೆ ಮೊರೆ ಹೋಗಿರುವುದರಿಂದ ಮತ್ತು ಈಗ ಬರದ ಕಾರಣದಿಂದಾಗಿ ಮೇವಿನ ಭಾರೀ ಸಮಸ್ಯೆ ಎದುರಾಗಿದೆ. ಕುಡಿಯುವ ನೀರಿನ ಅಭಾವ ತಲೆದೋರಿದೆ. ಆದ ಕಾರಣ ನಿರಂತರವಾಗಿ ಈ ಮೇವಿನ ಸಮಸ್ಯೆ ಬಗೆಹರಿಸುವಂತಹ ನೀತಿಯನ್ನು ಸರ್ಕಾರ ರಚಿಸಬೇಕೆಂದು ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಬೆಳೆ ವಿಮೆ ಯೋಜನೆ ಪದ್ಧತಿ ಸಹಾ ಬದಲಾಗಬೇಕು. ಯಾವುದೇ ರೈತ ಸಹಕಾರಿ ಸಂಸ್ಥೆಗಳಿಂದ ಸಾಲತೆಗೆದುಕೊಳ್ಳಲಿ ಬಿಡಲಿ ಆತನನ್ನು ಬೆಳೆ ವಿಮಾ ಯೋಜನೆಯಡಿ ಸೇರಿಸಬೇಕು, ಬೆಳೆ ಕಳೆದುಕೊಂಡ ರೈತನಿಗೆ ಸರ್ಕಾರ ಪರಿಹಾರ ನೀಡಬೇಕು, ಬೆಲೆ ಹಾನಿಯನ್ನು ಅಂದಾಜು ಮಾಡುವ ಈಗಿರುವ ಅವೈಜ್ಞಾನಿಕ ಪದ್ಧತಿಯೂ ಬದಲಾಗಬೇಕು ಎಂದು ಮಾನ್ಪಡೆ ಒತ್ತಾಯಿಸಿದ್ದಾರೆ.

ಚಿಂಚನಸೂರು :

ಬರಗಾಲ ಪರಿಹಾರ ಕಾಮಗಾರಿಗಳನ್ನು ಕೂಡಲೇ ಆರಂಭಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ಸೆಪ್ಟೆಂಬರ್ 2 ರಿಂದ ಧರಣಿ ಸತ್ಯಾಗ್ರಹವನ್ನು ನಡೆಸುತ್ತಿದೆ.

ರೈತರ ದನಕರುಗಳಿಗೆ ಮೇವು ಒದಗಿಸಬೇಕು, ಬೆಳೆ ಪರಿಹಾರ ಧನ ನೀಡಬೇಕು, ಎಲ್ಲಾಬಡ ರೈತ, ಕೂಲಿಕಾರರಿಗೆ ರೇಷನ್ ಕಾರ್ಡ್ ನೀಡಬೇಕು, ಪ್ರತಿ ಕಾರ್ಡಿಗೆ 30 ಕೆ.ಜಿ. ರೇಷನ್‌ನ್ನು ಅರ್ಧ ಬೆಲೆಗೆ ನೀಡಬೇಕು ಎಂದು ಒತ್ತಾಯಿಸಿ ಧರಣಿ ನಡೆಯುತ್ತಿದೆ ಎಂದು ರೈತ ಸಂಘದ ಚಿಂಚನಸೂರು ಘಟಕದ ಅಧ್ಯಕ್ಷ ರಾಮಲಿಂಗಪ್ಪ ಮಗಿ, ಕಾರ್ಯದರ್ಶಿ ಪಾಂಡುರಂಗ ಮಾರ್ಪಿಕರ್ ಅವರು ತಿಳಿಸಿದ್ದಾರೆ.

ಲಾಡಮುಗಳಿ:

ಆಳಂದ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು, ದನಗಳಿಗೆ ಉಚಿತ ಮೇವು ಪೂರೈಕೆ ಆಗಬೇಕು, ಬೆಳೆ ಹಾನಿಯ ಅಂದಾಜು ತಕ್ಷಣವೇ ಮಾಡಿ ಪರಿಹಾರ ಕೊಡಬೇಕು, ಲಾಡಮುಗಳಿಗ್ರಾಮ ಪಂಚಾಯತಿ ಪ್ರದೇಶದಲ್ಲಿ ಕೃಷಿ ಕೂಲಿಗಾರರಿಗೆ ಕೆಲಸ ಒದಗಿಸಬೇಕು ಎಂದು ಒತ್ತಾಯಿಸಿ ಲಾಡ ಮುಗಳಿಯ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ಸೆಪ್ಟೆಂಬರ್ 4 ರಂದು ಧರಣಿ ಸತ್ಯಾಗ್ರಹ ನಡೆಸಿತು.

ನರೋಣ :

ಆಳಂದ ತಾಲ್ಲೂಕಿನ ನರೋಣವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ನೀಡಲು ಒತ್ತಾಯಿಸಿ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ಸೆಪ್ಟೆಂಬರ್ 12 ರಂದು ಧರಣಿ ಸತ್ಯಾಗ್ರಹ ನಡೆಸಿದವು.

ಕಲ್ಬುರ್ಗಿಯ ಕಾರ್ಮಿಕ ಮುಂದಾಳು ಮರೆಪ್ಪ ಕಡೆಚೂರ ನಿಧನ

ಕಲ್ಬುರ್ಗಿ ಜಿಲ್ಲೆಯ ಹಿರಿಯ ಸಂಘಟಕ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದ ಕಾಂ॥ ಮರೆಪ್ಪ ಕಡೆಚೂರ ಅವರು ನಿಧನರಾದರು.

1972 ರಿಂದ ಪಕ್ಷದ ಸದಸ್ಯರಾಗಿದ್ದ ಕಡೆಚೂರ ಅವರು ಜಿಲ್ಲೆಯ ಕಾರ್ಮಿಕ ಸಂಘಟನೆಯ ಮುಂದಾಳಾಗಿದ್ದರಲ್ಲದೆ ಸಮೂಹ ಸಂಘಟನೆಗಳಿಗೆ ಸ್ಫೂರ್ತಿ ನೀಡಿದ್ದರು. ಸಿಐಟಿಯು ನೇತೃತ್ವದ ಎಂಎಸ್‌ಕೆ ಮಿಲ್ ಸಂಘದ ಅಧ್ಯಕ್ಷರಾಗಿ 1972 ರಿಂದ ಆಯ್ಕೆಯಾಗುತ್ತಾ ಬಂದಿದ್ದ ಕಡೆಚೂರ ಅವರು ಕಾರ್ಖಾನೆಯಲ್ಲಿ ಹೆಚ್ಚಿನ ಕೆಲಸದ ಹೊರೆಯ ವಿರುದ್ಧ, ಮಿಲ್ ಮುಚ್ಚುವ ಹುನ್ನಾರದ ವಿರುದ್ಧ ಪ್ರತಿಭಟನೆ ಏರ್ಪಡಿಸಿದ್ದರು.

ಕಟ್ಟಡ ಕೆಲಸಗಾರನೊಬ್ಬ ರೈಲಿಗೆ ಸಿಕ್ಕು ಮರಣ ಹೊಂದಿದಾಗ ರೈಲ್ವೆ ಸೇತುವೆಗೆ ಒತ್ತಾಯಿಸಿ ಏಳು ಗಂಟೆ ಕಾಲ ರೈಲು ತಡೆ ನಡೆಸುವಲ್ಲಿ ಯಶಸ್ವಿಯಾಗಿದ್ದರು. ಶಿಸ್ತುಬದ್ಧ ಸಂಘಟಕರಾಗಿದ್ದ ಕಾಂ॥ ಮರೆಪ್ಪ ಅವರು ಮೂರು ಬಾರಿ ಜೈಲುವಾಸ ಅನುಭವಿಸಿದ್ದರು.

ಸಿಪಿಐ(ಎಂ) ಸಂತಾಪ:

ಕಾಂ॥ ಮರೆಪ್ಪ ಕಡೆಚೂರ ಅವರ ನಿಧನಕ್ಕೆ ಸಿಪಿಐ(ಎಂ)ನ ಹಸನ್‌ಖಾನ್ ಸ್ಮಾರಕ ಕಚೇರಿಯಲ್ಲಿ ಸಂತಾಪ ಸಭೆ ಏರ್ಪಡಿಸಿತ್ತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಜಿಲ್ಲಾ ಸಮಿತಿ ಸದಸ್ಯರುಗಳಾದ ಕೆ.ನೀಲಾ, ಅಬ್ದುಲ್ ಖಾದರ್ ಅನ್ನೂ, ದೇವೇಂದ್ರಪ್ಪ ಗೌಡಿಗೆರೆ ಅವರು ಮರೆಪ್ಪ ಅವರ ಕೊಡುಗೆಯನ್ನು ಸ್ಮರಿಸಿದರು.

ಎಂಎಸ್‌ಕೆ ಮಿಲ್‌ನಲ್ಲಿಯೂ ಸಹಾ ಸಂತಾಪ ಸಭೆಯನ್ನು ಏರ್ಪಡಿಸಲಾಗಿತ್ತು. ಎಲ್ಲಾ ಕಾರ್ಮಿಕರು ಭಾಗವಹಿಸಿದ್ದ ಸಭೆಯನ್ನು ಉದ್ದೇಶಿಸಿ ಮಾರುತಿ ಮಾನ್ಪಡೆ, ಕೆ.ನೀಲಾ, ಮೈಮಾ ಜಲಾಲ ಅವರು ಮಾತನಾಡಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಚಂದೂ ಜಾಧವ್, ಎ.ಬಿ.ದಾಸ್ ಅವರು ಮೃತರಿಗೆ ಪುಷ್ಪಗುಚ್ಛವನ್ನು ಇರಿಸಿ ಗೌರವ ಸಲ್ಲಿಸಿದರು.

ಕಾಂ॥ ಮರೆಪ್ಪಾ ಕಡೆಚೂರ ಅವರ ನಿಧನಕ್ಕೆ 'ಐಕ್ಯರಂಗ' ಬಳಗ ಸಹ ಸಂತಾಪವನ್ನು ಸೂಚಿಸುತ್ತದೆ.

ತೈಲ ಬೆಲೆ ಏರಿಕೆ ವಿರೋಧಿಸಿ ಸಿಪಿಎಂ ರೈಲು ತಡೆ

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ರೈಲು ಸಂಚಾರಕ್ಕೆ ಅಡ್ಡಿಪಡಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಜಿಲ್ಲಾ ಪಂಚಾಯತ್ ಸದಸ್ಯ ಮೇಘರಾಜ ಕಠಾರೆ ಹಾಗೂ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಕೆ.ನೀಲಾ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಘದ ಪ್ರಧಾನ ಕಾರ್ಯದರ್ಶಿ ವರಲಕ್ಷ್ಮಿ ಅವರ ನೇತೃತ್ವದಲ್ಲಿ ಚೆನ್ನೈಗೆ ತೆರಳಲಿದ್ದ ಮದ್ರಾಸ್ ಮೇಲ್‌ನ್ನು ಅರ್ಧ ಗಂಟೆಗೂ ಹೆಚ್ಚು ಕಾಲ ತಡೆದು ನಿಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆ, ರಾಜ್ಯ ಅಂಗನವಾಡಿ. ಕಾರ್ಯಕರ್ತರ ಸಂಘಟನೆ, ಸಿಐಟಿಯು ಸದಸ್ಯರು ಭಾಗವಹಿಸಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

ತಮ್ಮ ಪಕ್ಷದ ತೀವ್ರ ಪ್ರತಿರೋಧದ ನಡುವೆಯೂ ಬೆಲೆ ಹೆಚ್ಚಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಮಾರುತಿ ಮಾನ್ಪಡೆ ಸಂಯುಕ್ತ ರಂಗದ ಕನಿಷ್ಠ ಕಾರ್ಯಕ್ರಮದಿಂದ ಜನತಾದಳ ಹಿಂದೆ ಸರಿಯುತ್ತಿರುವುದನ್ನು ಇದು ಸ್ಪಷ್ಟವಾಗಿ ತೋರಿಸುತ್ತಿದೆ ಎಂದರು.

ವಿದೇಶದಿಂದ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವ ಸರ್ಕಾರದ ಕ್ರಮವನ್ನು ಅವರು ಟೀಕಿಸಿದರು.

ಸಕ್ಕರೆ ಕಾರ್ಖಾನೆ ಕಾರ್ಮಿಕರ ಹೊಸ ರಾಜ್ಯಮಟ್ಟದ ಒಕ್ಕೂಟ

ಮಂಡ್ಯದಲ್ಲಿ ಆಗಸ್ಟ್ 31 ರಂದು ನಡೆದ ರಾಜ್ಯದ ವಿವಿಧ ಸಕ್ಕರೆ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕ ಸಂಘಗಳ ಮುಖಂಡರು ಸಭೆ ಸೇರಿ ಕರ್ನಾಟಕ ಸ್ಟೇಟ್ ಷುಗರ್ ಎಂಪ್ಲಾಯೀಸ್ ಫೆಡರೇಷನ್ ರಚಿಸಲು ನಿರ್ಧರಿಸಿದ್ದಾರೆ. ಮಂಡ್ಯದ ಮೈಷುಗರ್ ಕಾರ್ಮಿಕ ಸಂಘದ ಅಧ್ಯಕ್ಷ ಎಂ.ಎಸ್.ಶಿವಣ್ಣನವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮೈಷುಗರ್ ಕಾರ್ಖಾನೆಯಲ್ಲದೆ ಕಂಪ್ಲಿಯ ರಾಮ್ ಷುಗರ್ಸ್, ಶಿರಗುಪ್ಪ ಷುಗರ್ಸ್, ಬೆಳಗಾವಿ ಜಿಲ್ಲಾ ಸಕ್ಕರೆ ಕಾರ್ಮಿಕರ ಸಂಘಟನೆ, ಮಹದೇಶ್ವರ ಷುಗರ್ ಮಿಲ್ ಹಾಗೂ ಚಾಮುಂಡೇಶ್ವರಿ ಷುಗರ್ ಮಿಲ್ ಕಾರ್ಮಿಕರ ಹಾಗೂ ಸಿಬ್ಬಂದಿ ಸಂಘಗಳ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದರು. ಈಗಿರುವ ಫೆಡರೇಷನ್ ನೌಕರರ, ಕಾರ್ಮಿಕರ ಹಿತ ಕಡೆಗಣಿಸಿರುವುದರಿಂದ ನಿರ್ವಾಹವಿಲ್ಲದೆ ಹೊಸ ರಾಜ್ಯಮಟ್ಟದ ಒಕ್ಕೂಟವನ್ನು ಸ್ಥಾಪಿಸಲು ಸರ್ವಾನುಮತದಿಂದ ನಿರ್ಧರಿಸಿ ಕರಡು ನಿಯಮಾವಳಿಗಳನ್ನು ಅಂಗೀಕರಿಸಲಾಯಿತು. ಪ್ರಸಕ್ತ ಸಾಲಿಗೆ ಸಿ.ಪಿ.ಬಾರಟೆಯವರು ಗೌರವ ಅಧ್ಯಕ್ಷರಾಗಿರುವ, ಪ್ರಸನ್ನ ಕುಮಾರ್ ಅಧ್ಯಕ್ಷರಾಗಿರುವ ಹಾಗೂ ಮೋಹನ್ ಕುಮಾರ್ ಪ್ರಧಾನ ಕಾರ್ಯದರ್ಶಿಯಾಗಿರುವ 17 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು. ಇತರ ಸಕ್ಕರೆ ಕಾರ್ಖಾನೆ ಸಂಘಗಳೊಂದಿಗೆ ಸಮಾಲೋಚಿಸಿದ ನಂತರ ಅಂತಹ ಸಂಘಗಳ ಪ್ರತಿನಿಧಿಗಳನ್ನು ಕಾರ್ಯಕಾರಿ ಸಮಿತಿಗೆ ಸೇರಿಸಿ ಕೊಳ್ಳಲು ನಿರ್ಧರಿಸಲಾಯಿತು. ○

"ಎತ್ತ ಸಾಗುತಿದೆ ಸ್ವತಂತ್ರ ಭಾರತ" ವಿದ್ಯಾರ್ಥಿ ಮೇಳ - 97

ಹುಬ್ಬಳ್ಳಿ : ಸ್ವಾತಂತ್ರ್ಯದ ಚಿನ್ನದ ಹಬ್ಬದ ಅಂಗವಾಗಿ ಆಗಸ್ಟ್ 17 ರಂದು ಹುಬ್ಬಳ್ಳಿಯ ಎಸ್.ಎಫ್.ಐ. ನ ಆಶ್ರಯದಲ್ಲಿ 'ವಿದ್ಯಾರ್ಥಿ ಮೇಳ-97' ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. "ಎತ್ತ ಸಾಗುತ್ತಿದೆ ಸ್ವತಂತ್ರ ಭಾರತ' ವಿಷಯ ಕುರಿತು ಭಾಷಣ ಪ್ರಬಂಧ ನಾಡಗೀತೆಗಳು, ವಿಚಾರಸಂಕಿರಣ, ಪ್ರಶಸ್ತಿ ಪ್ರಧಾನ ಸಮಾರಂಭಗಳನ್ನೊಳಗೊಂಡ ಈ ಮೇಳದಲ್ಲಿ 180 ವಿದ್ಯಾರ್ಥಿ- ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಜಾತಿವಾದದಿಂದ ದೇಶದ ಐಕ್ಯತೆ ಸಾಧ್ಯ ಇಲ್ಲ, ಅದು ಪ್ರಗತಿಗೆ ಮಾರಕ. ಜಾತಿವಾದಿಗಳ ಅಟ್ಟಹಾಸದ ವಿರುದ್ಧ ಯುವ ಜನರ ಐಕ್ಯ ಹೋರಾಟ ಅಗತ್ಯ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಜಿ.ಟಿ.ಪದರೆ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ತಾವು ವಿದ್ಯಾರ್ಥಿಯಾಗಿದ್ದಾಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು, ಜೈಲುವಾಸ ಅನುಭವಿಸಿ, ಇಂದಿನ ಪರಿಸ್ಥಿತಿ ಕುರಿತು ಹೇಳುತ್ತಾ ಸ್ವಾತಂತ್ರ್ಯ ಪೂರ್ವದ ನಮ್ಮ ಕನಸುಗಳನ್ನು ನನಸು ಮಾಡುವದು ಯುವಜನತೆಯ ಕೈಯಲ್ಲಿದೆ ಎಂದು ಹೇಳಿದರು. ವಿದ್ಯಾರ್ಥಿ ಯುವ ಜನರಲ್ಲಿ ಸಾಮಾಜಿಕ ಕಾಳಜಿ ಕಡಿಮೆ ಯಾಗಲು ಇಂದಿನ ಶಿಕ್ಷಣ ನೀತಿ ಕಾರಣ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ಉಳಿಸಲಿಕ್ಕಾಗಿ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾವು ಧುಮುಕಬೇಕಾಗಿದೆ ಎಂದು ಹಿರಿಯ ಕಾರ್ಮಿಕ ಮುಖಂಡರಾದ ನಿತ್ಯಾನಂದ ಸ್ವಾಮಿ ವಿದ್ಯಾರ್ಥಿಗಳಿಗೆ ಕರೆನೀಡಿದರು. ಪ್ರೊ. ಎಲ್.ಆರ್.ಅಂಗಡಿ, ಕೆ.ಬಿ.ಕಲ್ಲಿನ್ನಾ ವರ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಈ ಪ್ರಶಸ್ತಿ ಪ್ರಧಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಕಾಂತ ದುಂಡಿ ಗೌಡ್ರ ಸ್ವಾಗತಿಸಿದರು. ಶಿವಕುಮಾರ ಸಬರದ ವಂದಿಸಿದರು. ಬಹುಮಾನಿತ ವಿದ್ಯಾರ್ಥಿಗಳಿಗೆ ಅತಿಥಿಗಳು ಪ್ರಶಸ್ತಿ ಬಹುಮಾನ ನೀಡಿದರು.

ಮೇಳದ ಮಾರ್ಗದರ್ಶಕರಾಗಿ ಶಿಕ್ಷಕರಾದ ಶ್ರೀಮತಿ ದವಳೆ, ರಮೇಶ್ ಘೋಡವೆ, ಸಿದ್ದು ಕೊಂಗಿ, ದೊಡ್ಡಮನಿ ಶಿವಪ್ರಸಾದ ಮಾದರ ರೆನಯ್ಯ ಆಗಮಿಸಿದ್ದರು.

ಪ್ರಾರಂಭದಲ್ಲಿ ಪ್ರೊ. ಜಿ.ಸಿ.ಜೋಗುರ ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ಮೇಳದ ವಿವರ ಮತ್ತು ಎಸ್.ಎಫ್.ಐ. ಸಂಘಟನೆ ಕುರಿತು ಮಹೇಶ ಪತ್ತಾರ ಪ್ರಾರಂಭದಲ್ಲಿ ಮಾತನಾಡಿದರು. ದಿನವಿಡೀ ನಡೆದ ವಿಶಿಷ್ಟ ಪೂರ್ಣ ಈ ಮೇಳದಲ್ಲಿ ಉತ್ಸುಕತೆಯಿಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಸ್ವಾತಂತ್ರ್ಯ ಚಿನ್ನದ ಹಬ್ಬ ಕಾರ್ಯಕ್ರಮಗಳು

ಹುಬ್ಬಳ್ಳಿ : ಸ್ವಾತಂತ್ರ್ಯ ದಿನೋತ್ಸವದಂದು ಪಕ್ಷದ ಕಚೇರಿ ಮುಂದೆ ತ್ರಿವರ್ಣ ಧ್ವಜವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಸಿ.ಆರ್.ಭಟ್ ಏರಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿಯುವ ಜನರ ಪಾತ್ರವನ್ನು ವಿವರಿಸಿ ಇಂದಿನ ನಮ್ಮ ಕರ್ತವ್ಯ ಕುರಿತು ತಿಳಿಸಿದರು. ಮಹೇಶ್ ಪತ್ತಾರ, ಕೆ.ಪಿ.ಜೋಶಿ, ಕೃಷ್ಣಪ್ರಭು, ಗೀತಾ ಗುಡದ, ಹುಸೇನಬಿ ಮುಂತಾದ ಕಾರ್ಮಿಕರು, ವಿದ್ಯಾರ್ಥಿಗಳು ಸುತ್ತಲಿನ ನಾಗರೀಕರು ಆಟೋರಿಕ್ಷಾ ಚಾಲಕರು ಪಾಲ್ಗೊಂಡಿದ್ದರು.

ತಾರಿಹಾಳ ಕೈಗಾರಿಕಾ ವಸಾಹತುವಿನಲ್ಲಿ

ದೀಪಕ್ ಪ್ಲಾಸ್ಟಿಕ್ ಕಂಪನಿ ಎದುರು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಜೆ.ಗೊಂದಕರ ಧ್ವಜಾರೋಹಣಾ ನೆರವೇರಿಸಿ ಮಾತನಾಡಿದರು. ಎಂ.ಬಿ.ದೊಡ್ಡಮನಿ ಸ್ವಾಗತಿಸಿದರು. ಆ ಪ್ರದೇಶದ ಕಾರ್ಮಿಕರು ಪಾಲ್ಗೊಂಡಿದ್ದರು.

ಧಾರವಾಡ ಥರ್ಮ್‌ಸಪ್ ಕಂಪನಿ ಎದುರು

ಸಿಐಟಿಯು ಜಿಲ್ಲಾ ಅಧ್ಯಕ್ಷ ಎಂ.ಬಿ.ಕಟ್ಟಿ ಧ್ವಜಾರೋಹಣ ನೆರವೇರಿಸಿದರು. ಉಪಾಧ್ಯಕ್ಷರಾದ ಎಂ.ಕೆ.ದೇಶಪಾಂಡೆ ಮಾತನಾಡಿದರು.

ವಿಶೇಷ ಕರಪತ್ರ

ಸ್ವಾತಂತ್ರ್ಯಸಂಗ್ರಾಮದ ಇತಿಹಾಸ ಕಾರ್ಮಿಕರ ಮತ್ತು ಕಮ್ಯುನಿಸ್ಟ್ ಚಳುವಳಿಯ ಪಾತ್ರವನ್ನು ವಿವರಿಸುವ ವಿಶೇಷ ಕರಪತ್ರವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಪ್ರಕಟಿಸಿ ಕೆಂಬಾವುಟದೊಂದಿಗೆ ಧ್ವಜಾರೋಹಣ ನಡೆದ ಸಭೆಗಳಲ್ಲಿ ಜನರಮಧ್ಯೆ ವಿತರಿಸಲಾಯಿತು.

ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶ: ಸೆಪ್ಟಂಬರ್. 30

ಸೆಪ್ಟೆಂಬರ್ 30 ರಂದು ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶವೊಂದನ್ನು ಬೆಂಗಳರು ನಗರದ ಕಬ್ಬನ್‌ಪಾರ್ಕಿನಲ್ಲಿರುವ ಎನ್.ಜಿ.ಒ. ಸಭಾಂಗಣದಲ್ಲಿ ನಡೆಸಲು ಸಿಐಟಿಯು ನಿರ್ಧರಿಸಿದೆ.

ಕರ್ನಾಟಕ ರಾಜ್ಯದ ಕಾರ್ಖಾನೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಗುತ್ತಿಗೆ ಕಾರ್ಮಿಕರ ಪರವಾಗಿ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯದ ಉಚ್ಚ ನ್ಯಾಯಾಲಯ ತೀರ್ಪುಗಳನ್ನು ಕೊಟ್ಟಿದೆ. ಸತತವಾಗಿ ಉತ್ಪಾದನ ಸಂಬಂಧವಾದ ಕೆಲಸಗಳನ್ನು ಮಾಡುತ್ತಿರುವ ಕಾರ್ಮಿಕರನ್ನು ಗುತ್ತಿಗೆ ಪದ್ಧತಿಯಲ್ಲಿ ದುಡಿಸಲು ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಪರವಾನಿಗೆ ನೀಡುವುದಕ್ಕೆ ನ್ಯಾಯಾಂಗದ ತೀರ್ಪು ಆಕ್ಷೇಪಿಸಿದೆ.

ರಾಜ್ಯ ಸರ್ಕಾರದ ಗುತ್ತಿಗೆ ಕಾರ್ಮಿಕ ರದ್ದತಿ ಮಂಡಳಿಯ ಶಿಪಾರಸು ಅನುಸರಿಸಿ ಈಗಾಗಲೇ ಕ್ಯಾಂಟೀನ್ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ಆದೇಶ ಹೊರಡಿಸಿದೆ. ಹಾಗೆಯೆ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಮತ್ತು ಸ್ಟೀಲ್, ರೋಲಿಂಗ್ ಮಿಲ್ಲುಗಳ ಕೈಗಾರಿಕೆಯಲ್ಲಿ ಸಹ ಯಾವುದೇ ಗುತ್ತಿಗೆ ಕಾರ್ಮಿಕರು ಇರಬಾರದೆಂದು ಆದೇಶ ಹೊರಡಿಸಲಾಗಿದೆ.

ಈ ಎಲ್ಲಾ ವಿಷಯಗಳನ್ನು ವಿವರವಾಗಿ ಚರ್ಚಿಸಿ ಸೂಕ್ತ ತೀರ್ಮಾನಕ್ರಮಗಳನ್ನು ಜರುಗಿಸಲು ಗುತ್ತಿಗೆ ಕಾರ್ಮಿಕರ ಸಮಾವೇಶ ಕರೆಯಲಾಗಿದೆ ಎಂದು ರಾಜ್ಯ ಸಮಿತಿ ಹೇಳಿದೆ.

ಸಿಐಟಿಯು ಸದಸ್ಯರ ಗಮನಕ್ಕೆ

ಈ ಸಮಾವೇಶವನ್ನು ಸೆಪ್ಟೆಂಬರ್ 25 ರಂದು ನಡೆಸಲು ಈ ಹಿಂದೆ ಸೂಚಿಸಲಾಗಿತ್ತು. ಆದರೆ ಈಗ ಅದನ್ನು ಸೆಪ್ಟೆಂಬರ್ 30 ರಂದು ನಡೆಸಲಾಗುತ್ತದೆ ಎಂಬುದನ್ನು ಗಮನಿಸಬೇಕಾಗಿ ಸಿಐಟಿಯು ರಾಜ್ಯ ಸಮಿತಿ ಕಚೇರಿ ತಿಳಿಸಿದೆ.



ಭಾರತೀಯ
ವಿಮೋಚನಾ ಸಮರ ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

1757 ರಲ್ಲಿ ಪ್ಲಾಸಿ ಕದನದಲ್ಲಿ ಗೆದ್ದ ಬ್ರಿಟಿಶರ ಈಸ್ಟ್ ಇಂಡಿಯಾ ಕಂಪನಿ ಆಡಳಿತ ಭಾರತದಲ್ಲಿ ಕ್ರೋಢೀಕರಣಗೊಳ್ಳಲಾರಂಭಿಸಿತು. ಆದರೆ ಅದರೊಂದಿಗೇ ಅದು ಭಾರತೀಯ ಪ್ರತಿರೋಧವನ್ನು ನಿರಂತರವಾಗಿ ಎದುರಿಸಬೇಕಾಗಿ ಬಂತು. 1757 ರಿಂದ ಆರಂಭವಾಗಿ 1857 ರಲ್ಲಿ ಬ್ರಿಟಿಶರು ಭಾರತವನ್ನು ಸಂಪೂರ್ಣವಾಗಿ ಗೆದ್ದುಕೊಳ್ಳುವವರೆಗಿನ ಒಂದು ಶತಮಾನದಲ್ಲಿ ಜನಗಳ ಸಶಸ್ತ್ರ ದಂಗೆಯನ್ನು ಕಾಣದ ಒಂದೇ ಒಂದು ವರ್ಷವಿಲ್ಲ. ರೈತರು, ಕೈಕಸುಬುದಾರರು, ಬುಡಕಟ್ಟು ಜನರು, ಸನ್ಯಾಸಿಗಳು, ಫಕೀರರು, ಸೈನಿಕರು, ಪಾಳೆಯಗಾರರು, ಅರಸರು, ಹೀಗೆ ಎಲ್ಲರೂ ಈ ದಂಗೆಗಳಲ್ಲಿ ಭಾಗವಹಿಸಿದರು. ಕೆಲವಂತೂ ವರ್ಷಾನುಗಟ್ಟಲೇ ನಡೆದವು. ಈ ಒಂದು ನೂರು ವರ್ಷಗಳಲ್ಲಿ 90 ಕ್ಕೂ ಹೆಚ್ಚು ವಿಭಿನ್ನ ಸಶಸ್ತ್ರ ಹೋರಾಟಗಳು ಬ್ರಿಟಿಶರ ವಿರುದ್ಧ ನಡೆದವು. (ಇವುಗಳಲ್ಲಿ ಕರ್ನಾಟಕದಲ್ಲಿ 1791-99 ರ ನಡುವೆ ಮೈಸೂರಿನಲ್ಲಿ ಟಿಪ್ಪುಸುಲ್ತಾನ್) ಸಿಂಧಗಿಯಲ್ಲಿ 1824 ರಲ್ಲಿ, ಕಿತ್ತೂರಿನಲ್ಲಿ 1824-29 ರಲ್ಲಿ ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ, 1833-34 ರಲ್ಲಿ ಕೊಡಗಿನಲ್ಲಿ ನಡೆದ ದಂಗೆಗಳೂ ಸೇರಿವೆ). ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಸಶಸ್ತ್ರ ದಂಗೆಗಳು ಕೇವಲ ಬ್ರಿಟಿಶರ ವಿರುದ್ಧ ಮಾತ್ರವೇ ಅಲ್ಲ, ಜಮೀನ್ದಾರರ ವಿರುದ್ಧ, ಪ್ಲಾಂಟರುಗಳ ವಿರುದ್ಧವೂ ನಡೆದವು.


ಕೆಲವು ಪ್ರಮುಖ ದಂಗೆಗಳು-



ಸನ್ಯಾಸಿ - ಫಕೀರ್ ಬಂಡಾಯ(1760-1800) - ಬಿಹಾರ, ಉತ್ತರ ಬಂಗಾಲದಲ್ಲಿ ಢಾಕಾದವರೆಗೂ ಮತ್ತೆ ಮತ್ತೆ ಆಗಿನ ಬುದ್ಧಿಜೀವಿಗಳಾದ ಸನ್ಯಾಸಿಗಳು, ಫಕೀರರು ಮತ್ತು ಕೆಲವೊಮ್ಮೆ ಇವರಿಬ್ಬರೂ ಸೇರಿ ರೈತರೂ, ಕಸುಬುದಾರರು, ಪಾಳೆಯಗಾರ ಸೇನೆಗಳಲ್ಲಿದ್ದವರು - ಇವರೆಲ್ಲರ ದಂಗೆಗಳಿಗೆ ನೇತೃತ್ವ ನೀಡಿದರು. ಬ್ರಿಟಿಶರು ಇದರಿಂದ ಎಷ್ಟು ಹೆದರಿದ್ದರೆಂದರೆ ಸನ್ಯಾಸಿಗಳು, ಫಕೀರರು ಸಣ್ಣ ಗುಂಪುಗಳಾಗಿ ಉತ್ತರ ಭಾರತದಲ್ಲಿ ತಿರುಗಾಡದಂತೆ ನಿಷೇಧ ಹಾಕಿದರು. ಭವಾನೀ ಪಾಠಕ್, ದೇವೀ ಚೌಧುರಾಣಿ, ಮಜ್ನು ಶಹಾ, ಚಿರಾಗ್ ಶಹಾ ಈ ಸನ್ಯಾಸಿ-ಫಕೀರ ಮುಖಂಡರಲ್ಲಿ ಪ್ರಮುಖರು.



ಟಾಟಾ ತಿಲ್ಕಾ ಮಾಝಿ (1784-85) - ಕಾಡುಗಳಲ್ಲಿ ಬುಡಕಟ್ಟು ಜನಗಳ ಹಕ್ಕುಗಳನ್ನು ಕಿತ್ತುಕೊಳ್ಳಲಾರಂಭಿಸಿದ ಬ್ರಿಟಿಶರ ವಿರುದ್ಧ ದಂಗೆಯೆದ್ದ ಸಂತಾಲರ ಧೀರ ಮುಖಂಡ. ಆತ ಬಿಲ್ಲುಬಾಣದಿಂದ ಭಾಗಲ್ಪುರದ ಬ್ರಿಟಿಶ್ ಕಲೆಕ್ಟರನ್ನು ಕೊಂದಾಗ ಕ್ರುದ್ಧರಾದ ಬ್ರಿಟಿಶರು ದೊಡ್ಡ ಸೇನೆಯೊಂದಿಗೆ ಮುತ್ತಿಗೆ ಹಾಕಿದರು. ದೀರ್ಘ ಕಾಲ ಈ ಮುತ್ತಿಗೆಯನ್ನೆದುರಿಸಿ ಹೋರಾಡಿ ಕೊನೆಗೂ ಗಾಯಗೊಂಡು ಸೆರೆಯಾದಾಗ ಬ್ರಿಟಿಶರು ಅಮಾನುಷವಾಗಿ ಆತನನ್ನು ಕೊಂದರು. ಈ ಚಿತ್ರ ಆತ ವೀರಮರಣವನ್ನಪ್ಪಿದ ಜಾಗದಲ್ಲಿ ಸ್ವಾತಂತ್ರ್ಯ ನಂತರ ನಿಲ್ಲಿಸಿರುವ ಪ್ರತಿಮೆಯದ್ದು.



ಟಿಪ್ಪುಸುಲ್ತಾನ್(1791-99) : ಬ್ರಿಟಿಶರು ಮೋಸ, ವಂಚನೆಗಳಿಂದ ಒಂದಾದ ಮೇಲೆ ಒಂದರಂತೆ ಸಂಸ್ಥಾನಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುತ್ತಿದ್ದಾಗ ಪ್ರತಿರೋಧದ ಬೆಂಕಿಯನ್ನು ಪ್ರಜ್ವಲಂತವಾಗಿಟ್ಟ ಮೈಸೂರಿನ ಸುಲ್ತಾನ - ಗಣತಂತ್ರವಾದಿ ಫ್ರಾನ್ಸಿನ ನೆರವು ಪಡೆದು ಬ್ರಿಟಿಶ್ ವಸಾಹತುಶಾಹಿಗಳನ್ನು ಎದುರಿಸುವ ಪ್ರಯತ್ನ ನಡೆಸಿದಾತ. 1799 ರಲ್ಲಿ ಶ್ರೀರಂಗಪಟ್ಟಣದಲ್ಲಿ ಹೋರಾಡುತ್ತಾ ಮಡಿದ ದೇಶಪ್ರೇಮಿ.




ತಿರುನಲ್ವೇಲಿಯಲ್ಲಿ ಬ್ರಿಟಿಶರ ವಿರುದ್ಧ ನಡೆದ ಪಾಳೆಯಗಾರ ಬಂಡಾಯದ ಪ್ರಮುಖ ಹೋರಾಟಗಾರ ವೀರ ಪಾಂಡ್ಯನ್ ಕಟ್ಟ ಬೊಮ್ಮನ್ 1799 ರಲ್ಲಿ ವಿಶ್ವಾಸ ಘಾತುಕನೊಬ್ಬನಿಂದಾಗಿ ಬ್ರಿಟಿಶರ ಕೈಸೆರೆಯಾದಾಗ ಆತನನ್ನು ಗಲ್ಲಿಗೇರಿಸಲಾಯಿತು. ಈ ಬಂಡಾಯದಲ್ಲಿ ಭಾಗವಹಿಸಿದವರು



ಬಹಳಷ್ಟು ಜನ ಸೈನಿಕರು, ರೈತರು. ಬ್ರಿಟಿಶರು ತಿರುವಾಂಕೂರಿನಲ್ಲಿ ತಮ್ಮ ಕೈ ಚಾಚಲಾರಂಭಿಸಿದಾಗ ಅಲ್ಲಿಯ ಜನತೆಯ ಬಂಡಾಯಕ್ಕೆ ನೇತೃತ್ವ ನೀಡಿದ ಅಲ್ಲಿಯ ದಿವಾನ ವೇಲುಥಂಪಿ ಬ್ರಿಟಿಶರು ತಿರುವನಂತಪುರವನ್ನು ವಶಪಡಿಸಿಕೊಳ್ಳದಂತೆ ದೀರ್ಘ ಹೋರಾಟ ನಡೆಸಿದಾತ.



ಕಿತ್ತೂರ ಚೆನ್ನಮ್ಮ : ಕಿತ್ತೂರನ್ನು ಉಳಿಸುವ ಪ್ರಯತ್ನದಲ್ಲಿ ಬ್ರಿಟಿಶರ ವಿರುದ್ಧ ಶಸ್ತ್ರ ಕೈಗೆತ್ತಿಕೊಂಡ ರಾಣಿ. 1824 ರಲ್ಲಿ ಬ್ರಿಟಿಶರ ಸೆರೆಯಾದಳು. 1829 ರಲ್ಲಿ ಜೈಲಿನಲ್ಲಿ




ಮರಣ ಹೊಂದಿದಳು. ಆದರೂ ಪ್ರತಿರೋಧ ನಿಲ್ಲಲಿಲ್ಲ. ಇದಕ್ಕೆ ಕಾರಣ ಸಂಗೊಳ್ಳಿ ರಾಯಣ್ಣ. 1824 ರಿಂದ 1830 ರ ವರೆಗೆ ಸತತವಾಗಿ ಕೂಟ ಸಮರ ನಡೆಸಿ, ಧಾರವಾಡದಿಂದ ಮುಂಬೈವರೆಗಿನ ಬ್ರಿಟಿಶ್ ಅಂಚೆ ವ್ಯವಸ್ಥೆಯನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿದಾತ. 1830 ರಲ್ಲಿ ಬ್ರಿಟಿಶರು ಆತನನ್ನು ಹಿಡಿದು ಗಲ್ಲಿಗೇರಿಸಿದರು.

ವಹಾಬಿ ದಂಗೆ(1771-1831): ಬ್ರಿಟಿಶ್-ವಿರೋಧಿ, ಪಾಳೆಯಗಾರಿಕೆ-ವಿರೋಧಿ, ಸಮಾನತೆಯ ದೃಷ್ಟಿಕೋನದ ವಹಾಬಿ ಆಂದೋಲನದ ಮುಖಂಡ ತಿತು ಮೀರ್. 1831 ರಲ್ಲಿ ರಣರಂಗದಲ್ಲೇ ಮಡಿದ ವೀರ. ಆತನ ಸೋದರಳಿಯನನ್ನು ಬ್ರಿಟಿಶರು ಗಲ್ಲಿಗೇರಿಸಿದರು. 350 ಇತರರನ್ನು ಗಡಿಪಾರು ಮಾಡಿದರು.

ದೂದು ಮಿಯಾಂ ಮತ್ತು ಫರಾಝಿ ಆಂದೋಲನ(1838-48)


ಎಲ್ಲಾ ಭೂಮಿ, ಎಲ್ಲಾ ಸಂಪತ್ತು ಎಲ್ಲರದ್ದು ಎಂದು ಬೋಧಿಸುತ್ತಿದ್ದ ಫರೀದ್ ಪುರದ ಬಡ ಮುಸ್ಲಿಮರು [illegible] ದೂದು ಮಿಯಾ ಇದೇ ದೃಷ್ಟಿಕೋನದ ಆಧಾರದಲ್ಲಿ ಬ್ರಿಟಿಶ್ ಅರಸರು, ಪ್ಲಾಂಟರುಗಳು ಹಾಗೂ ಜಮೀನ್ದಾರರ ವಿರುದ್ಧ ಪ್ರತಿರೋಧ ನಡೆಸಬೇಕೆಂದು ಬೋಧಿಸಿದ. "ಭೂಮಿ ಅಲ್ಲಾಹುಗೆ ಸೇರಿದ್ದು, ಆದ್ದರಿಂದ ಖಾಸಗಿಯಾಗಿ, ವಂಶಪಾರಂಪರ್ಯವಾಗಿ ಅದರ ಒಡೆತನ ಸಾಧ್ಯವಿಲ್ಲ. ಆದರಿಂದ ಗೇಣಿ ಕಿತ್ತುಕೊಳ್ಳಲೂ ಸಾಧ್ಯವಿಲ್ಲ" ಎಂದು ಆತ ಸಾರಿದ. ದೂದು ಮಿಯಾನ ಫರಾಝಿ ಆಂದೋಲನದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂ ಬಡರೈತರು, ಕಸುಬುದಾರರಷ್ಟೇ ಅಲ್ಲ, ಹಿಂದೂ ರೈತರೂ, ಕಸುಬುದಾರರೂ ನೀಲಿಗಿಡಗಳ ಪ್ಲಾಂಟರುಗಳ, ಜಮೀನ್ದಾರರ ಸಶಸ್ತ್ರ ಬಾಡಿಗೆ ಗೂಂಡಾಗಳನ್ನು ಎದುರಿಸಿದರು. 1856 ರಲ್ಲಿ ಕೊನೆಯ ಬಾರಿಗೆ ಬ್ರಿಟಿಶರಿಗೆ ಸೆರೆಸಿಕ್ಕ ದೂದು ಮಿಯಾ 1860 ರಲ್ಲಿ ತೀರಿಕೊಂಡ.

[illegible] ಸಿಂಗ್(1847-49): ಪಂಜಾಬಿನಲ್ಲಿ ಬ್ರಿಟಿಶರ ಪ್ರಾಬಲ್ಯಕ್ಕೆ ಸವಾಲು ಹಾಕಿದ ಸಂತಯೋಧ.




ರಜಪೂತರು ಹಾಗೂ ಪಠಾಣರ ಜತೆಗೂಡಿ ಬ್ರಿಟಿಶರ ತಂತ್ರಗಳನ್ನೆಲ್ಲಾ ವಿಫಲಗೊಳಿಸಿ ಎಂಟು ವರ್ಷ ಹೋರಾಡಿದ ಈತನನ್ನು ಕೊನೆಗೂ ಸೆರೆಹಿಡಿದು ಬ್ರಿಟಿಶರು ಸಿಂಗಾಪೂರದ ಜೈಲಿಗೆ ಕಳಿಸಿದರು ಯಾವುದೇ ವಿಚಾರಣೆಯಿಲ್ಲದೆ. ಅಲ್ಲಿಯೇ ಆತ ತೀರಿಕೊಂಡ.

ಸಂತಾಲ ಬಂಡಾಯ(1855-56) : 1855 ರಲ್ಲಿ 10 ಸಾವಿರ ಸಂತಾಲ ಬುಡಕಟ್ಟಿನ ಜನ ಒಂದು ಸಭೆ ನಡೆಸಿ ಬ್ರಿಟಿಶರು, ಜಮೀನ್ದಾರರು ಹಾಗೂ ಲೇವಾದೇವಿಗಾರರ ದಮನಕಾರಿ ಆಳ್ವಿಕೆಯನ್ನು ಕೊನೆಗೊಳಿಸುವ ಪ್ರತಿಜ್ಞೆ ಮಾಡಿದರು. ಇದಕ್ಕೆ ನೇತೃತ್ವ ನೀಡಿದವರು ಸಿಧೋ ಮತ್ತು ಕಾನು. ಶಸ್ತ್ರಯುಕ್ತ ಸಾಗಿದ ಸಂತಾಲ ಸೇನೆಯೆದುರು ಬ್ರಿಟಿಶರು ತತ್ತರಿಸಿಹೋದರು. ಆದರೆ ನಂತರ ಬ್ರಿಟಿಶರ ಅಮಾನುಷ ಧಾಳಿಗೆ ಬಲಿಯಾಗಬೇಕಾಯಿತು. 30-50 ಸಾವಿರ ಸಂತಾಲ ಬಂಡಾಯಗಾರರಲ್ಲಿ 15-25 ಸಾವಿರ ಮಂದಿಯನ್ನು ಬ್ರಿಟಿಶರು ಕೊಂದುಹಾಕಿದರು.



ಸಂತಾಲ ಮುಖಂಡ ಸಿದೋ

(ಮುಂದುವರಿಯುವುದು)



ಆಝಾದ್ ಹಿಂದ್ ಫೌಜ್ (ಇಂಡಿಯನ್ ನ್ಯಾಷನಲ್ ಆರ್ಮಿ-ಐ.ಎನ್.ಎ)- ಸ್ವಾತಂತ್ರ್ಯ ಹೋರಾಟದ ಇತಿಹಾಸದ ಈ ಪ್ರಮುಖ ಅಧ್ಯಾಯವನ್ನು ಐ.ಎನ್.ಎಸ್ ಸುದ್ದಿ ಸಂಸ್ಥೆಯ ಮಾನಿನಿ ಚಟರ್ಜಿಯವರೊಂದಿಗೆ ಮಾತುಕತೆಯಲ್ಲಿ ನೆನಪಿಸಿಕೊಂಡಿದ್ದಾರೆ ಅದರಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ ಕ್ಯಾಪ್ಟನ್ ಲಕ್ಷ್ಮಿ ಸಹಗಲ್. ಅವರು ಈಗ ಸಿಪಿಐ(ಎಂ) ನ ಉತ್ತರ ಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರು.

"ಆಝಾದ್ ಹಿಂದ್ ಸೇನೆಯಲ್ಲಿ ನಾನು"

ಕ್ಯಾಪ್ಟನ್ ಲಕ್ಷ್ಮಿ ಸಹಗಲ್

ನಾನು ರಾಜಕೀಯ ಕುಟುಂಬದಿಂದ ಬಂದಾಕೆ. ನನಗೆ ರಾಷ್ಟ್ರೀಯ ಆಂದೋಲನವಲ್ಲಿ ಆಸಕ್ತಿ ಇತ್ತು. ಆದರೆ ನನ್ನ ವಿದ್ಯಾಭ್ಯಾಸವನ್ನು ಮೊದಲು ಮುಗಿಸಬೇಕು ಎಂದು ನಿರ್ಧರಿಸಿದ್ದೆ. 1940 ರಲ್ಲಿ ಮದ್ರಾಸ್ ಮೆಡಿಕಲ್ ಕಾಲೇಜನಲ್ಲಿ ವೈದ್ಯಕೀಯ ವಿದ್ಯಾಭ್ಯಾಸವನ್ನು ಮುಗಿಸಿದೆ. ಆ ವೇಳೆಗೆ ಎರಡನೇ ಮಹಾಯುದ್ಧ ಸಿಡಿದೆದ್ದಿತು. ಎಲ್ಲಾ ಡಾಕ್ಟರುಗಳನ್ನು (ಬ್ರಿಟಿಷ್ ಭಾರತೀಯ) ಸೇನೆಗೆ ಭರ್ತಿ ಮಾಡಿಕೊಳ್ಳುವ ಒಂದು ಯೋಜನೆ ಇತ್ತು. ನನಗೆ ಅದು ಇಷ್ಟವಿರಲಿಲ್ಲ, ಆದ್ದರಿಂದ ನನ್ನ ನಿಕಟ ಸಂಬಂಧಿಗಳಿದ್ದ ಸಿಂಗಪೂರ್‌ಗೆ ಹೋದೆ. ಅಲ್ಲಿ ಖಾಸಗೀ ಪ್ರಾಕ್ಟೀಸ್ ಆರಂಭಿಸಿದೆ. ಸಾಕಷ್ಟು ಉತ್ತಮ ಪ್ರಾಕ್ಟೀಸ್ ಇತ್ತು. ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ದಕ್ಷಿಣ ಭಾರತೀಯರು ಇದ್ದರು. ನನ್ನ ಬಳಿ ಹಲವಾರು ಚೀನಿ, ಮಲಯಾ ರೋಗಿಗಳು ಬರುತ್ತಿದ್ದರು.

ಜಪಾನೀ ಪಡೆಗಳು ಡಿಸೆಂಬರ್ 8, 1941 ರಂದು ಸಿಂಗಾಪೂರ್ ಮೇಲೆ ದಾಳಿ ಮಾಡಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ರಾಶ್ ಬಿಹಾರಿ ಬೋಸ್ ಜಪಾನೀಯರ ಜೊತೆಗೆ ಬಂದಿದ್ದರು. ಅವರು ಇಂಡಿಯಾ ಇಂಡಿಪೆಂಡೆನ್ಸ್ ಲೀಗ್ (ಭಾರತ ಸ್ವಾತಂತ್ರ್ಯ ಕೂಟ) ಸ್ಥಾಪಿಸಿದರು. ಎಲ್ಲಾ ಭಾರತೀಯರು ಈ ಲೀಗನ್ನು ಸೇರುವ ನಿರೀಕ್ಷೆ ಇತ್ತು. ಆದರಿಂದ ಪ್ರಯೋಜನವೂ ಇತ್ತು. ಏಕೆಂದರೆ ನಮಗೆ ನಮ್ಮ ರೇಷನ್ ಕಾರ್ಡ್ ಸಿಕ್ಕಿತು. ಹಾಗೂ ಭಾರತೀಯ ಸೊತ್ತನ್ನು ಶತ್ರುಗಳ ಸೊತ್ತೆಂದು ಪರಿಗಣಿಸಲಾಗುತ್ತಿರಲಿಲ್ಲ. ಅಲ್ಲದೆ ಭಾರತೀಯರನ್ನು ಬಲವಂತದಿಂದ ಸೇನೆಗೆ ಸೇರಿಸುತ್ತಿರಲಿಲ್ಲ. ನಾನು ಲೀಗ್ ಸೇರಿದೆ. ಆದರೆ ಕೆಲವು ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ಗುಪ್ತ ಪ್ರಸಾರಗಳನ್ನು ಮಾತ್ರ ಮಾಡಲು ಸಾಧ್ಯವಾಗುತ್ತಿತ್ತು.

ಫೆಬ್ರವರಿ 15,1942 ರಂದು ಕ್ಯಾಪ್ಟನ್ ಮೋಹನ್ ಸಿಂಗ್ ಐ.ಎನ್.ಎಯನ್ನು ಸ್ಥಾಪಿಸಿದರು. ಇದಲ್ಲದೆ ರಾಶ್ ಬಿಹಾರಿ ಬೋಸ್ ಮುಖ್ಯಸ್ಥರಾಗಿದ್ದ ಇಂಡಿಯಾ ಇಂಡಿಪೆಂಡೆನ್ಸ್ ಲೀಗ್ ಇತ್ತು. ಅಲ್ಲಿದ್ದ ಇತರ ಮುಖಂಡರೆಂದರೆ ನಮ್ಮ ರಾಜಕೀಯ ಗುರುವಾಗಿದ್ದ ಕೇಶವ (ಕೆ.ಪಿ.ಕೆ.) ಮೇನನ್ ಮತ್ತು



ಎಸ್.ಸಿ.ಗುಹಾ. ಅದರಲ್ಲಿ ಐ.ಎನ್.ಎ ಯ ಸೇನಾಧಿಕಾರಿಗಳೂ ಇದ್ದರು. ಅವರೆಲ್ಲಾ ಜಪಾನೀ ಸರ್ಕಾರವನ್ನು ಭೇಟಿಯಾಗಿದ್ದರು. ಐ.ಎನ್.ಎ.ಗೆ ಮಿತ್ರಸೇನೆಯ ಸ್ಥಾನಮಾನವನ್ನು ಪಡೆಯಲು ಟೋಕಿಯೋಗೆ ಹೋದರು. ದುರದೃಷ್ಟವಶಾತ್, ಜಪಾನ್ ಮುಖತಃ ಮಾತ್ರ ಅದಕ್ಕೆ ಒಪ್ಪಿತು. ಎಂದೂ ಅದನ್ನು ಅಧಿಕೃತವಾಗಿ ಸಿಂಧುಗೊಳಿಸಲಿಲ್ಲ. ಆದ್ದರಿಂದ ಜಪಾನಿಯರನ್ನು ನಂಬಲು ಸಾಧ್ಯವಿಲ್ಲವೆಂದು ಮೋಹನ್ ಸಿಂಗ್ ಮತ್ತು ಕೇಶವ ಮೆನನ್ ಭಾವಿಸಿದ್ದರು. ಆಝಾದ್ ಹಿಂದ್ ಸೇನೆಯನ್ನು ವಿಸರ್ಜಿಸಲು ಮೋಹನ್ ಸಿಂಗ್ ನಿರ್ಧರಿಸಿದರು. ಈ ಪ್ರಸ್ತಾಪ ಎಲ್ಲರಿಗೂ ಒಪ್ಪಿಗೆಯಾಗಿರಲ್ಲಿಲ್ಲ. ಆಝಾದ್ ಹಿಂದ್ ಸೇನೆಯ ಶೇ 80 ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸೈನಿಕರು ತಾವು ಅದಕ್ಕೆ ವಿಧೇಯವಾಗಿರುವ ಪ್ರತಿಜ್ಞೆ ಕೈಗೊಂಡಿರುವುದರಿಂದ ಅದನ್ನು ಮುರಿಯಬಾರದು ಎಂದು ಅಭಿಪ್ರಾಯಪಟ್ಟರು.

ಈ ನಡುವೆ ಸುಭಾಸ್ ಚಂದ್ರ ಬೋಸ್ ಜರ್ಮನಿಯಲ್ಲಿರುವ ಸುದ್ದಿ ಬಂತು. ಬರ್ಲಿನ್ ನಲ್ಲಿರುವ ಜಪಾನಿ ರಾಯಭಾರಿಯ ಮೂಲಕ ರಾಶ್ ಬಿಹಾರಿ ಬೋಸ್ ಒತ್ತಡ ಹಾಕಿ ನೇತಾಜಿಯವರನ್ನು ಜಪಾನಿನಿಂದ ಆಗ್ನೇಯ ಏಷ್ಯಾಕ್ಕೆ ಕಳುಹಿಸುವಂತೆ ಮಾಡಿದರು. ಸುಭಾಸ್ ಚಂದ್ರ ಬೋಸ್ ಕೇವಲ ಭಾರತದ ಮುಂದಾಳುವಷ್ಟೇ ಅಲ್ಲ, ಏಷ್ಯಾದ ಮುಂದಾಳು ಎಂದು ಜಪಾನಿನ ಪ್ರಧಾನಮಂತ್ರಿ ಟೋಜೋರಿಗೆ ಮನವರಿಕೆ ಮಾಡಿಸಿ ಹಾಗೆಂದು ಅವರು ಸಾರುವಂತೆ ಮಾಡಿ ಜುಲೈ 1943 ರಲ್ಲಿ ಬಂದರು. ನೇತಾಜಿ ಸಿಂಗಾಪುರಕ್ಕೆ ಆಗಮಿಸಿದ ನಂತರ ರಾಶ್ ಬಿಹಾರಿ ಬೋಸ್ ಇಂಡಿಯಾ ಇಂಡಿಪೆಂಡೆನ್ಸ್ ಲೀಗ್‌ನ ನೇತೃತ್ವವನ್ನು ಅವರಿಗೆ ವಹಿಸಿಕೊಟ್ಟರು.

ನೇತಾಜಿ ಇಡೀ ಆಂದೋಲನವನ್ನು ಮರುಸಂಘಟಿಸಿ ಅದನ್ನೊಂದು ಕ್ರಾಂತಿಕಾರಿ ಆಧಾರದಲ್ಲಿ ಕಟ್ಟಿದರು. ಅವರು ಮೊದಲು ಮಾನವ ಶಕ್ತಿಯನ್ನು ಕ್ರೋಢೀಕರಿಸುವ ಕರೆ ನೀಡಿ ಆಝಾದ್ ಹಿಂದ್ ಸೇನೆಯನ್ನು ಸೇರುವಂತೆ ಎಲ್ಲಾ ಯುವಜನರಿಗೆ ಮನವಿ ಮಾಡಿದರು. ಇದಕ್ಕೆ ತುಂಬಾ ಒಳ್ಳೆಯ ಸ್ಪಂದನ ದೊರೆಯಿತು. ಆರು ವಾರದೊಳಗೆ ಸೇನೆಯ ಬಲ 30,000 (ಮೂವತ್ತು ಸಾವಿರ)ದಿಂದ 60,000 (ಅರವತ್ತು ಸಾವಿರ)ಕ್ಕೆ ಏರಿತು. ಸಿಂಗಾಪುರ್, ಬರ್ಮಾ, ಮಲೇಷ್ಯಾ, ಇಂಡೋನೇಷ್ಯಾ, ಹಾಂಗ್ ಕಾಂಗ್ ಮತ್ತು ಥೈಲ್ಯಾಂಡ್ ನಿಂದ ಸ್ವಯಂಸೇವಕರು ಬಂದರು.

ಮಹಿಳಾ ತುಕಡಿ

ಎರಡನೇ ಸಾಮೂಹಿಕ ಸಭೆಯಲ್ಲಿ ನೇತಾಜಿ ಮಹಿಳಾ ಪದಾತಿ ದಳವನ್ನು ರಚಿಸುವ ತನ್ನ ಉದ್ದೇಶವನ್ನು ಸಾರಿದಾಗ ಬಾಂಬನ್ನೇ ಹಾಕಿದಂತಾಗಿತ್ತು. 1857 ರಲ್ಲಿ ಬ್ರಿಟಿಷರ ವಿರುದ್ಧ ವೀರಾವೇಶದಿಂದ ಹೋರಾಡಿದ್ದ ಝಾನ್ಸಿ ರಾಣಿಯ ಹೆಸರನ್ನು ಈ ರೆಜಿಮೆಂಟಿಗೆ ಇಡುವುದಾಗಿ ಅವರು ಸಾರಿದರು. ಈ ವಿಚಾರದ ಬಗ್ಗೆ ನನಗೆ ಆಗಲೇ ಗೊತ್ತಿತ್ತು. ಏಕೆಂದರೆ ಇದರ ಮೊದಲು ಅವರೊಂದಿಗೆ ಸಂದರ್ಶನ ಕೇಳಿದ್ದ ನನಗೆ ಅವರು ಈ ವಿಚಾರ ತಿಳಿಸಿದ್ದರು.

ನಾನು ಈ ರೆಜಿಮೆಂಟನ್ನು ಸೇರಲು ಸಿದ್ಧವಿರುವುದಾಗಿ ಹೇಳಿದೆ. ಮರುದಿನದಿಂದಲೇ ತನ್ನ ಮುಖ್ಯಕಛೇರಿಯಲ್ಲಿ ನನಗೊಂದು ಕೋಣೆಯನ್ನು ನೀಡಿದರು. ನಾನು ಮಹಿಳೆಯರನ್ನು ಭರ್ತಿ ಮಾಡಲಾರಂಭಿಸಿದೆ. ಅಂದು ಜುಲೈ 8, 1943 ಬಹಳಷ್ಟು ಮಂದಿಯನ್ನು ಭರ್ತಿಮಾಡಿಕೊಳ್ಳುವ ನಿರೀಕ್ಷೆ ನನಗಿಲ್ಲವೆಂದು ನಾನು ಅವರಿಗೆ ಹೇಳಿದ್ದೆ. ಏಕೆಂದರೆ ಹೆಚ್ಚಿನ ಶಿಕ್ಷಿತ ಮಧ್ಯಮ ವರ್ಗದ ಕುಟುಂಬಗಳು ಭಾರತಕ್ಕೆ ಹಿಂದಿರುಗಿದ್ದವು. ಅಲ್ಲಿ ಉಳಿದಿದ್ದದ್ದು ರಬ್ಬರ್ ಎಸ್ಟೇಟ್‌ಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಮತ್ತು ಪಿ.ಡಬ್ಲ್ಯೂ.ಡಿ ಕಾರ್ಮಿಕರ ಕುಟುಂಬಗಳು. ಮಧ್ಯಮ ವರ್ಗದ ಕುಟುಂಬಗಳು ಉಳಿದ್ದದ್ದು ಕೆಲವೇ ಕೆಲವು. ಒಂದು ಕ್ರಾಂತಿಕಾರಿ ಆಂದೋಲನದಲ್ಲಿ ಮಧ್ಯಮ ವರ್ಗಗಳನ್ನು ಅವಲಂಬಿಸಬೇಡ-ಹೀಗೆಂದು ನೇತಾಜಿ ಹೇಳಿದರು. ಅವರು ಹೇಳಿದ್ದೇ ನಿಜವಾಗಿತ್ತು. ಏಕೆಂದರೆ ಹೆಚ್ಚೇನೂ ಕಷ್ಟವಿಲ್ಲದೆ ಸೈನಿಕರಾಗಿ ತರಬೇತಿ ಪಡೆದ 1500 ಮಹಿಳೆಯರು ಹಾಗೂ 200 ನರ್ಸಿಂಗ್ ಸಿಬ್ಬಂದಿಯಿರುವ ಒಂದು ತುಕಡಿಯನ್ನು ಆರಂಭಿಸಲು ಸಾಧ್ಯವಾಯಿತು. ಹುಮ್ಮಸ್ಸು ಮತ್ತು

ಪುಟ 5 ನೋಡಿ

ಹುತಾತ್ಮ ರಾಮಸ್ವಾಮಿ

ನೀವು ಮೈಸೂರು ನಗರ ನೋಡಿದ್ದರೆ ರಾಮಸ್ವಾಮಿ ವೃತ್ತವನ್ನೂ ನೋಡಿರುತ್ತೀರಿ. ಯಾರು ಈ ರಾಮಸ್ವಾಮಿ ಎಂದು ಯೋಚಿಸಿದ್ದೀರಾ? ಆತ ದೊಡ್ಡ ಮುತ್ಸದ್ದಿಯೇನಲ್ಲ. ಮಹಾರಾಜರ ಆಳ್ವಿಕೆಯ ಬಿರುದಾಂಕಿತ ಅಡಳಿತಗಾರನೂ ಅಲ್ಲ. ಈ ವರ್ಷ ಸ್ವಾತಂತ್ರ್ಯದ ಸ್ವರ್ಣಜಯಂತಿಯಾದ್ದರಿಂದ ಆತ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿರಬೇಕೆಂದು ನೀವು ಊಹಿಸಿರಬಹುದು. ಅಲ್ಲ ಆತನೊಬ್ಬ ಚಿಕ್ಕ ಬಾಲಕ. ಇಂದಿಗೆ ಸರಿಯಾಗಿ 50 ವರ್ಷಗಳ ಹಿಂದೆ ಸೆಪ್ಟೆಂಬರ್ 15, 1947 ರಂದು ತ್ರಿವರ್ಣ ಧ್ವಜ ಏರಿಸಿದ್ದಕ್ಕೇ ಸ್ವತಂತ್ರ ಭಾರತದಲ್ಲಿ, ಭಾರತೀಯ ಜಿಲ್ಲಾವರಿಷ್ಠಾಧಿಕಾರಿಯ ಬಂದೂಕಿಗೆ ಬಲಿಯಾಗಿ ಹುತಾತ್ಮನಾದ 17 ವರ್ಷದ ಬಾಲಕ ಆತ.

ಆಗಸ್ಟ್ 15, 1947 ರಂದು ಇಡೀ ದೇಶದಲ್ಲಿ ಸ್ವಾತಂತ್ರ್ಯದ ಸಂಭ್ರಮವಿದ್ದರೂ ಪಕ್ಕದ ಹೈದರಾಬಾದಿನಂತೆ ಮೈಸೂರಿನಲ್ಲೂ ತ್ರಿವರ್ಣ ಬಾವುಟ ಹಾರಿಸಲು ಅಡ್ಡಿಯಿತ್ತು. ನಿಜಾಮ ಭಾರತ ಸೇರಲು ಸಿದ್ಧನಿರದಿದ್ದರೆ, ಇಲ್ಲಿಯ ಮಹಾರಾಜ ಭಾರತ ಸೇರಲೊಪ್ಪಿದರೂ ಜವಾಬ್ದಾರಿ ಸರಕಾರಕ್ಕೆ ನಿರಾಕರಿಸುತ್ತಿದ್ದ. ಅದರ ಭಾಗವಾಗಿಯೇ ತ್ರಿವರ್ಣ ಬಾವುಟ ಹಾರಿಸಲೂ ಆಕ್ಷೇಪ. ಈ ಹಿನ್ನೆಲೆಯಲ್ಲಿ ಮೈಸೂರು ಚಲೋ ಚಳುವಳಿ ನಡೆಯುತ್ತಿದ್ದ ಸಂದರ್ಭವದು.

ಸ್ವಾತಂತ್ರ್ಯ ದೊರೆತು ಸರಿಯಾಗಿ ಒಂದು ತಿಂಗಳಾಗಿತ್ತು. ನಗರದ ಚೋಟಿ ರಸ್ತೆಯಲ್ಲಿ ಒಂದು ಕಂಬದಲ್ಲಿ ತ್ರಿವರ್ಣ ಬಾವುಟ ಹಾರಿಸಬೇಕೆಂದು ಎಂ.ಎನ್.ಜೋಶಿ, ಬಿ.ಕಾಳಯ್ಯ ಮುಂತಾದ ಹಿರಿಯರು ನಿರ್ಧರಿಸಿದ್ದರು. ಆದರೆ ಧ್ವಜ ಹಾರಿಸುವವರು ಯಾರು? ಒಂದೆಡೆ ಸ್ವಾತಂತ್ರ್ಯ ಪ್ರೇಮಿ, ಪ್ರಜಾಪ್ರಭುತ್ವ ಪ್ರೇಮಿ ಜನಗಳ ಜಯಜಯಕಾರ, ಇನ್ನೊಂದೆಡೆ ಧ್ವಜಾರೋಹಣವನ್ನು ತಡೆಯಲು ಸನ್ನದ್ಧರಾಗಿ ನಿಂತಿದ್ದ ಮಹಾರಾಜನ ಸಶಸ್ತ್ರ ಪೋಲೀಸರು ಧ್ವನಿವರ್ಧಕದಿಂದ ಎಚ್ಚರಿಕೆ ಪ್ರಸಾರ ಮಾಡುತ್ತಿದ್ದರು. ಹಬ್ಬದ ಅಡುಗೆ ಮಾಡಲು ತಾಯಿಗೆ ಗಸಗಸೆ, ಸಕ್ಕರೆ ತರಲೆಂದು ಬಗಲಿಗೆ ಚೀಲ ಹಾಕಿ ಹೊರಟಿದ್ದ ಹಳ್ಳದಕೇರಿಯ ಬಾಲಕ ರಾಮಸ್ವಾಮಿ ಮೆರವಣಿಗೆ ನೋಡಿ ಅದರಲ್ಲಿ ಸೇರಿಕೊಂಡ. ಪೋಲೀಸರು ಎಚ್ಚರಿಕೆ ಕೊಡುತ್ತಿದ್ದರೂ ಗಮನಿಸದೆ ಪಟಪಟನೆ ಕಂಬವೇರಿ ಬಾವುಟ ಹಾರಿಸಿಯೇ ಬಿಟ್ಟ. ಏನಾಯಿತು ಎಂದು ನೆರದವರಿಗೆ ತಿಳಿಯುವಷ್ಟರಲ್ಲಿ ಜಿಲ್ಲಾ ವರಿಷ್ಠಾಧಿಕಾರಿ ನಾಗರಾಜ್‌ರವರ ಬಂದೂಕಿನಿಂದ ಸಿಡಿದ ಗುಂಡು ಬಾಲಕನ ಪ್ರಾಣವನ್ನು ಬಲಿತೆಗೆದುಕೊಂಡಿತ್ತು. ದೇಶಕ್ಕೆ ಸ್ವಾತಂತ್ರ್ಯ ದೊರೆತು ಸರಿಯಾಗಿ ಒಂದು ತಿಂಗಳಾದ ನಂತರ ರಾಷ್ಟ್ರೀಯ ಬಾವುಟ ಹಾರಿಸಿದ ತಪ್ಪಿಗಾಗಿ! ಆ ಬಾಲಕನಿಗೆ ತಾಯಿ ಮಾಡಿಟ್ಟ ಹಬ್ಬದ ಪಾಯಸ ಸಿಗಲಿಲ್ಲ. ಆದರೆ ಒಂಭತ್ತು ದಿನಗಳ ನಂತರವಷ್ಟೆ ಬ್ರಿಟಿಷರನ್ನು ಭಾರತೀಯ ಜನ ಓಡಿಸಿದುದರ ಅರಿವು ಕೊನೆಗೂ ಮಹಾರಾಜರಿಗೆ ಬಂತು. ಸೆಪ್ಟೆಂಬರ್ 24, 1997 ರಂದು ಜವಾಬ್ದಾರಿ ಸರಕಾರ ರಚಿಸಲು ಮಹಾರಾಜರಿಂದ ಒಪ್ಪಿಗೆ ಕೊನೆಗೂ ಸಿಕ್ಕಿತು. ಪ್ರಜಾಪ್ರಭುತ್ವ ಚಳುವಳಿ ಜಯಶಾಲಿಯಾಯಿತು.

ನೀವು ಮೈಸೂರು ನೋಡಿಲ್ಲವಾದರೆ ಮೈಸೂರಿಗೆ ಬಂದಾಗ ರಾಮಸ್ವಾಮಿ ವೃತ್ತವನ್ನೂ ನೋಡಲು ಮರೆಯದಿರಿ. ಈ ಬಾಲಕನನ್ನು ಬಲಿ ತೆಗೆದುಕೊಂಡ ಪಾಳೆಯಗಾರಿಕೆಯ ಕ್ರೌರ್ಯವನ್ನು ನೆನಪಿಸಿಕೊಳ್ಳಲು ಮರೆಯದಿರಿ.

ಪೆಟ್ರೋಲಿಯಂ ಬೆಲೆ ಏರಿಕೆ ಬಗ್ಗೆ ಸೀತಾರಾಂ ಯೆಚೂರಿ

ಹಣಕಾಸು ಇಲಾಖೆಯ ಕಪಟೋಪಾಯಗಳಿಗೆ ಸರಕಾರ ಭಾರೀ ಬೆಲೆ ತೆರಬೇಕಾಗಬಹುದು

ಕೊನೆಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ಬಂದೇ ಬಂತು. ಸಂಯುಕ್ತ ರಂಗ ಸರ್ಕಾರ ಸಿಪಿಐ(ಎಂ) ಮುಂದಿಟ್ಟ ಪರ್ಯಾಯ ವಿಧಾನಗಳನ್ನು ಉಪೇಕ್ಷಿಸಿದರೂ ಈ ಹಿನ್ನೆಲೆಯಲ್ಲಿ ನಾಲ್ಕು ತಿಂಗಳು ನಡೆದ ರಾಷ್ಟ್ರೀಯ ಚರ್ಚೆ ಕೂಡಾ ಸರಕಾರದ ಈ ನಿರ್ಣಯದಲ್ಲಿ ಸಾಕಷ್ಟು ಪ್ರಭಾವ ಬೀರಿದೆ. ಆದರೆ ಒಟ್ಟಾರೆಯಾಗಿ ಈ ಕಸರತ್ತಿನ ಮೂಲಕ ಸರಕಾರ ನೇರವಾದ ಬೆಲೆಯೇರಿಕೆಯ ಬದಲು ಹಲವು ಪರೋಕ್ಷ ಕ್ರಮಗಳ ಮೂಲಕ ಜನಗಳ ಮೇಲೆ ಹೊರೆ ಹಾಕಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಹೇಳಿದ್ದಾರೆ.

ಆರು ತಿಂಗಳ ಹಿಂದೆ ತೈಲನಿಧಿ ಖಾತೆಯ ಕೊರತೆ ಹಾಗೂ ಅಂದರಿಂದಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಬೇಕಾಗುತ್ತದೆ ಎಂದ ಸರಕಾರ 47.5% ಏರಿಕೆಯ ಪ್ರಸ್ತಾಪವನ್ನು ತಯಾರಿಸಿತ್ತು. ಈಗ ಈ ಎಲ್ಲಾ ಚರ್ಚೆಗಳು ಹಾಗೂ ಸಿಪಿಐ(ಎಂ)ನ ಪರ್ಯಾಯ ಪ್ರಸ್ತಾಪಗಳ ಪರಿಣಾಮವಾಗಿ ಅಷ್ಟು ವಿಪರೀತ ಬೆಲೆಏರಿಕೆಯನ್ನು ಸರಕಾರಕ್ಕೆ ಮಾಡಲಾಗಲಿಲ್ಲ, ಆದರೂ ಡೀಸೆಲ್ ಬೆಲೆಗಳಲ್ಲಿ 26% ಹೆಚ್ಚಳ ವ್ಯಾಪಕ ಬೆಲೆಯೇರಿಕೆ ತರಲಿದೆ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ. ಹೊರೆ ಹೊರಲು ಶಕ್ತರಾಗಿರುವ ಜನವಿಭಾಗಗಳಿಂದ ವಸೂಲಿ ಮಾಡ ಬಹುದಾದ ಕ್ರಮಗಳನ್ನು ಸಿಪಿಐ(ಎಂ) ಸೂಚಿಸಿತ್ತು. ಆದರೆ ಸರ್ಕಾರ ತನ್ನ ವರ್ಗಪಕ್ಷಪಾತಕ್ಕನುಗುಣವಾಗಿ ಹಲವಾರು ಕಪಟೋಪಾಯಗಳ ಮೂಲಕ ಜನಸಾಮಾನ್ಯರ ಮೇಲೆಯೇ ಹೊರೆ ಹಾಕಿದೆ. ಈ ಮೂಲಕ ಸಂಯುಕ್ತ ರಂಗ ಸರ್ಕಾರ ತಾನು ಇತರ ಸರ್ಕಾರಗಳಿಗಿಂತ ಭಿನ್ನ ಎಂಬುದನ್ನು ಸಾಬೀತು ಮಾಡುವ ಅವಕಾಶವನ್ನು ಕಳಕೊಂಡಿದೆ ಎನ್ನುತ್ತಾರೆ ಯೆಚೂರಿಯವರು.

ಸೀತಾರಾಂ ಯೆಚೂರಿಯವರು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಯಲ್ಲಿ ಈ ಕುರಿತು ಬರೆದಿರುವ ಒಂದು ಲೇಖನದಲ್ಲಿ ಸರಕಾರದ ಇತ್ತೀಚಿನ ನಿರ್ಣಯದ ಹಿಂದಿರುವ ಮೂರು ಕಪಟೋಪಾಯಗಳನ್ನು ಬಯಲಿಗೆಳೆದಿದ್ದಾರೆ.

ಮೊದಲನೆಯದಾಗಿ, ಮಾರ್ಚ್ 1997ರ ವರೆಗಿನ ತೈಲನಿಧಿ ಕೊರತೆಯಾದ 18200 ಕೋಟಿ ರೂ.ಗಳನ್ನು ಹಣಕಾಸು ಇಲಾಖೆಯೇ ವಹಿಸಿಕೊಂಡು ಜನಗಳ ಮೇಲಿನ ಹೊರೆಯನ್ನು ಕಮ್ಮಿಮಾಡಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ಇದು ನಿಜವಲ್ಲ. ಕೇಂದ್ರ ಹಣಕಾಸು ಇಲಾಖೆ ತೈಲ ಕಂಪನಿಗಳಿಗೆ ಅಷ್ಟು ಮೊತ್ತಕ್ಕೆ ಸರ್ಕಾರಿ ಸೆಕ್ಯೂರಿಟಿಗಳನ್ನು, ಸಾಲದ ಬಾಂಡುಗಳನ್ನು ನೀಡಿದೆಯಷ್ಟೆ. ಇದರಲ್ಲಿ 5000 ಕೋಟಿ ರೂ.ಗಳಷ್ಟು ಮಾತ್ರ ಈ ತೈಲ ಕಂಪನಿಗಳು ನಗದಾಗಿ ಪಡೆಯಬಹುದು. ಉಳಿದ ಮೊತ್ತ ಅವರ ಲೆಕ್ಕ ಪುಸ್ತಕಗಳಲ್ಲಿ ಇರುತ್ತದಷ್ಟೆ. ಹೆಚ್ಚೆಂದರೆ ತೈಲ ಕಂಪೆನಿಗಳು ಈ ಆಧಾರದಲ್ಲಿ ಮಾರುಕಟ್ಟೆಯಿಂದ ಸಾಲ ಎತ್ತಬಹುದಷ್ಟೆ. ಇನ್ನೂ ಹೊಲಸು ಸಂಗತಿಯೆಂದರೆ ಈ ಸೆಕ್ಯೂರಿಟಿ ಹಾಗೂ ಬಾಂಡುಗಳನ್ನು ತೈಲ ಕಂಪನಿಗಳು 10.5% ಬಡ್ಡಿದರದಲ್ಲಿ 5-7 ವರ್ಷಗಳಲ್ಲಿ ಮರುಪಾವತಿ ಮಾಡಬೇಕು. ಅಂದರೆ ಪ್ರತಿ ವರ್ಷ ಸುಮಾರು 1800 ಕೋಟಿ ರೂ.ಗಳಷ್ಟು ಮುಂದಿನ 5-7 ವರ್ಷಗಳಲ್ಲಿ ಈ ಕಂಪನಿಗಳು ತೆರಬೇಕು. ಸಹಜವಾಗಿಯೇ ಇನ್ನು ಮುಂದೆ ತೈಲ ಬೆಲೆಗಳನ್ನು ನಿರ್ಧರಿಸುವಾಗ ಈ ಕಂಪನಿಗಳು ಈ 1800 ಕೋಟಿ ರೂ.ಗಳ ಹೆಚ್ಚಿನ ಭಾರವನ್ನು ಲೆಕ್ಕಕ್ಕೆ ತಗೊಳ್ಳುತ್ತವೆ. ಅಂದರೆ ಇದನ್ನೂ ಜನಸಾಮಾನ್ಯರೇ ತೆರಬೇಕು. ಒಟ್ಟಿನಲ್ಲಿ ಹಣಕಾಸು ಇಲಾಖೆ ತೈಲನಿಧಿಯಿಂದ ದೋಚಿಕೊಂಡ 27849 ಕೋಟಿ ರೂ.ಗಳಷ್ಟಾಗುವ ಹಣದಲ್ಲಿ ಒಂದು ಪೈಸೆಯನ್ನು ಹಿಂದಿರುಗಿಸಿಲ್ಲ. ಒಂದೇ ಏಟಿಗೆ ಭಾರೀ ಬೆಲೆಯೇರಿಕೆ ಮಾಡುವ ಬದಲು 5-7 ವರ್ಷಗಳಲ್ಲಿ ಇದನ್ನು ಜನಗಳಿಂದಲೇ ವಸೂಲು ಮಾಡುತ್ತಿದೆ. ಈ ಸತ್ಯವನ್ನು ಅದರ ಜನರಿಂದ ಮರೆಮಾಚಿದೆ.

ಎರಡನೆಯದಾಗಿ, ಕೇಂದ್ರ ಸರ್ಕಾರದ ಒಂದು ಏಕಪಕ್ಷೀಯ ಕ್ರಮದಿಂದಾಗಿ ಕರ್ನಾಟಕ, ಕೇರಳದಂತಹ ರಾಜ್ಯಗಳಲ್ಲಿ ಪೆಟ್ರೋಲಿಯಂ ಬೆಲೆಗಳು ಕೇಂದ್ರ ಸರ್ಕಾರ ಪ್ರಕಟಿಸಿದ್ದಕ್ಕಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಏರಿವೆ. ಪೆಟ್ರೋಲ್ ಬೆಲೆ 3.40 ರೂ. ಡೀಸೆಲ್ ಬೆಲೆ 3.00 ರೂಗಳಷ್ಟು ಹಾಗೂ ಅಡುಗೆ ಅನಿಲ ಬೆಲೆ 30 ರೂಗಳಷ್ಟು ಏರಿವೆ. ತೈಲ ಕಂಪೆನಿಗಳು ತಮ್ಮ ಉತ್ಪನ್ನಗಳ ಮಾರಾಟದಿಂದ ಬರುವಆದಾಯದ ಮೇಲೆ ವಿವಿಧ ರಾಜ್ಯ ಸರಕಾರಗಳಿಗೆ ನೀಡಬೇಕಾದ ತೆರಿಗೆಯನ್ನು ಇನ್ನು ಮುಂದೆ ಆ ರಾಜ್ಯದ ಜನಗಳಿಂದಲೇ ವಸೂಲು ಮಾಡಬೇಕೆಂದು ಕೇಂದ್ರ ಮಂತ್ರಿ ಮಂಡಳ ರಾಜ್ಯ ಸರಕಾರಗಳನ್ನು ಕೇಳದೆ ನಿರ್ಧರಿಸಿರುವುದೇ ಇದಕ್ಕೆ ಕಾರಣ. ವಾಸ್ತವವಾಗಿ ಈ ತೆರಿಗೆಗಳು ಯಾವುದೇ ಕಂಪನಿ ತನ್ನ ಲಾಭದ ಮೇಲೆ ಕೊಡಬೇಕಾದ ತೆರಿಗೆಯ ಸ್ವರೂಪವು . ಇದನ್ನು ನಿಯಮ ಪ್ರಕಾರ ಬಳಕೆದಾರರ ತಲೆಯ ಮೇಲೆ ಹಾಕುವಂತಿಲ್ಲ. ಆದರೆ ಕೇಂದ್ರ ಸರ್ಕಾರ ಒಂದೆಡೆ ಈ ಕಾನೂನು ಬಾಹಿರ ಹೊರೆ ಹಾಕಿ ಕೋಟಿಗಟ್ಟಲೆ ರೂಪಾಯಿ ಉಳಿಸಿ ಇನ್ನೊಂದೆಡೆ ಒಕ್ಕೂಟ ನೀತಿಯನ್ನೂ ಉಲ್ಲಂಘಿಸಿದೆ.

ಮೂರನೆಯದಾಗಿ, ಇದುವರೆಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ನಿರ್ಧರಿಸುತ್ತಿರುವ ಆಡಳಿತವರ್ಗ ಬೆಲೆ ವ್ಯವಸ್ಥೆ(AYM) ಯನ್ನು ರದ್ದು ಮಾಡಲು ಸರ್ಕಾರ ನಿರ್ಧರಿಸಿದೆ. ಈ ವ್ಯವಸ್ಥೆಯಿಂದಾಗಿ ಇದುವರೆಗೆ ಈ ಸರಕುಗಳಲ್ಲಿ ಹೆಚ್ಚಿನವುಗಳ ಬೆಲೆಗಳನ್ನು ಕೇವಲ ಮಾರುಕಟ್ಟೆ ಶಕ್ತಿಗಳ ದೃಷ್ಟಿಯಿಂದಲೇ ನಿರ್ಧರಿಸಿದೆ. ಸಾಮೂಹಿಕ ಅಗತ್ಯಗಳನ್ನು ಗಮನಿಸಿ ನಿರ್ಧರಿಸಲಾಗುತ್ತಿತ್ತು. ಹೀಗೆ ಮಾಡುವುದರಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿದರೆ ನಾವು ತೆರಬೇಕಾದ ಬೆಲೆಗಳೂ ಇಳಿಯುತ್ತವೆ ಎಂಬ ಭ್ರಮೆ ಸೃಷ್ಟಿಸಲಾಗುತ್ತಿದೆ. ಇದು ಕೇವಲ ಭ್ರಮೆ ಯಾಕೆಂದರೆ ತೈಲ ಬೆಲೆಗಳನ್ನು ಹೀಗೆ ನಿರ್ಧರಿಸಲಾಗುತ್ತದೆ:

ಆಮದು ಖರ್ಚು+ ಕಸ್ಟಮ್ಸ್ ಸುಂಕ+ ಅಬಕಾರಿ ಸುಂಕ+ ರಾಜ್ಯ ಸರಕಾರಗಳ ತೆರಿಗೆಗಳು+ 18200 ಕೋಟಿ ರೂಗಳ ಬಡ್ಡಿ ಮತ್ತು ಮರುಪಾವತಿಗೆ ಕೊಡಬೇಕಾದ ಹಣ. ಆದ್ದರಿಂದ ಅಂತರ್ರಾಷ್ಟ್ರೀಯ ಬೆಲೆಗಳು ಇಳಿದು ಆಮದು ಖರ್ಚು ಕಮ್ಮಿಯಾದರೂ ಉಳಿದ ಮೇಲೆ ಹೇಳಿದ ಹಲವು ಸುಂಕಗಳನ್ನು ಇಳಿಸದೆ ಅಥವಾ ಬಿಡದೆ ತೈಲ ಬೆಲೆಗಳಲ್ಲಿ ಇಳಿಕೆ ಸಾಧ್ಯವಾಗುವುದಿಲ್ಲ.

ಒಟ್ಟಿನಲ್ಲಿ ಕೇಂದ್ರ ಹಣಕಾಸು ಇಲಾಖೆ ಭಾರೀ ಬುದ್ಧಿವಂತಿಕೆಯಿಂದ ವರ್ತಿಸಲು ಪ್ರಯತ್ನಿಸಿದೆ. ಒಂದೆಡೆ ತಾನೇ ದೋಚಿಕೊಂಡ ಹಣವನ್ನು ತೈಲ ಕಂಪನಿಗಳಿಗೆ ಸಾಲವಾಗಿ ನೀಡಿ ಅದನ್ನು ಮರುಪಾವತಿ ಪಡೆಯುವುದಷ್ಟೆ ಅಲ್ಲ, ಈ ಬೆಲೆಯೇರಿಕೆಗಳಿಂದ ಕಸ್ಟಮ್ಸ್ ಮತ್ತು ಅಬಕಾರಿ ಸುಂಕಗಳ ರೂಪದಲ್ಲಿ 3600 ಕೋಟಿ ರೂ.ಗಳಷ್ಟು ಹೆಚ್ಚಿನ ಆದಾಯ ಪಡೆಯುತ್ತದೆ. ಭಾರತೀಯ ಜನಗಳಿಗೆ ಈ ಕಪಟೋಪಾಯವನ್ನು ಕಾಣಲಾರದು ಎಂದು ಅದು ನಂಬಿದಂತಿದೆ. ಆದರೆ ಇಂತಹ ಬುದ್ಧಿವಂತಿಕೆಯಿಂದ ಏನೂ ಪ್ರಯೋಜನವಿಲ್ಲ, ಅದಕ್ಕೆ ಸಂಯುಕ್ತ ರಂಗ ಸರಕಾರ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಸೀತಾರಾಂ ಯೆಚೂರಿ ಎಚ್ಚರಿಸಿದ್ದಾರೆ. ಏಕೆಂದರೆ ಜನರಲ್ಲಿ ಅಸಂತೃಪ್ತಿಯನ್ನು ಹೆಚ್ಚಿಸುವ ಕ್ರಮ ಇದು.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

"ವಿಶ್ವ ವ್ಯಾಪಾರ ಸಂಸ್ಥೆಯ ನಿರ್ಬಂಧಗಳು ಹಣಕಾಸು ವಲಯಕ್ಕೆ ತಾಯಿ ಹಾಲಿನಂತೆ"

ಹೀಗೆಂದು ಹೇಳಿದವರು ಅಮೇರಿಕಾದ ವ್ಯಾಪಾರ ಪ್ರತಿನಿಧಿ ಜೆಫ್ರಿ ಲ್ಯಾಂಗ್. ಈ ಮಹಾಶಯ ಕೆಲವು ದಿನಗಳ ಹಿಂದೆ ಭಾರತಕ್ಕೆ ಬಂದು ನಮ್ಮ ಕೇಂದ್ರ ಸರ್ಕಾರದ ಹಣಕಾಸು ಮಂತ್ರಿ ಶ್ರೀ ಪಿ.ಚಿದಂಬರಂ ಮತ್ತು ವಾಣಿಜ್ಯ ಮಂತ್ರಿ ಶ್ರೀ ರಾಮಯ್ಯ ನವರೊಂದಿಗೆ ಚರ್ಚೆಯನ್ನು ನಡೆಸಿದ. ಈ ಚರ್ಚೆಯ ನಂತರ ಈ ಮಹಾಶಯ ನೀಡಿದ ಅಪ್ಪಣೆಯಿದು.

ಹಣಕಾಸು ವಲಯವನ್ನು ವಿದೇಶಿಯರಿಗೆ ಪೂರ್ಣವಾಗಿ ತೆರೆಯಬೇಕೆಂಬುದೇ ಅಮೇರಿಕನ್ ಮತ್ತು ಯುರೋಪಿನ ಸಾಮ್ರಾಜ್ಯಶಾಹಿಗಳ ಬಹುದಿನದ ಬೇಡಿಕೆ(ಒತ್ತಾಯ). ಭಾರತದಲ್ಲಿ ವಿದೇಶಿ ಬ್ಯಾಂಕೊಂದಕ್ಕೆ ಬರಿ ಎಂಟು ಶಾಖೆಗಳನ್ನು ತೆರೆಯಲು ಅವಕಾಶವಿದೆ. ಹಾಗೆಯೇ ಒಟ್ಟು ಬ್ಯಾಂಕು ಆಸ್ತಿಗಳ ಬರೀ ಶೇ 15 ರಷ್ಟನ್ನು ಮಾತ್ರ ವಿದೇಶೀ ಬ್ಯಾಂಕುಗಳು ಹೊಂದಬಹುದು" ಇಂತಹ ನೀತಿಗಳು ಹಣಕಾಸು ವಲಯದಲ್ಲಿ ವಿದೇಶಿ ತಂತ್ರಜ್ಞಾನ ಹರಿದು ಬರಲು ಮತ್ತು ಸ್ಪರ್ಧಾತ್ಮಕತೆ ಮೂಡಿಬರಲು ಅವಕಾಶ ಮಾಡಿಕೊಡುವುದಿಲ್ಲವಂತೆ. ಆದ್ದರಿಂದ ಈ ವಲಯವನ್ನು ಪೂರ್ತಿಯಾಗಿ ಉದಾರೀಕರಿಸಬೇಕು ಎನ್ನುತ್ತಾನೆ ಈತ.

ಹಾಗೆಯೇ ವಿಮಾ ವಲಯ. "ಅಮೆರಿಕಾದಲ್ಲಿ ನಾವು 400 ಕ್ಕೂ ಹೆಚ್ಚು ವಿದೇಶಿ ವಿಮಾ ಕಂಪನಿಗಳು ಕೆಲಸ ಮಾಡಲು ಬಿಟ್ಟಿದ್ದೇವೆ" ಎಂದು ಎದೆ ತಟ್ಟಿಕೊಳ್ಳುತ್ತಾನೆ ಈತ. ಭಾರತಕ್ಕೂ ಅಮೆರಿಕಕ್ಕೂ ಹೋಲಿಕೆ ಸರಿಯಲ್ಲ ಎಂಬ ಚಿಕ್ಕ ಅಂಶವೂ ಈತನಿಗೆ ಹೊಳೆಯುವಂತೆ ಕಾಣುವುದಿಲ್ಲ.

ಈತನ ಪ್ರಕಾರ ವಿಶ್ವ ವ್ಯಾಪಾರ ಸಂಸ್ಥೆಯ ನಿರ್ಬಂಧಗಳು ಹಣಕಾಸು ವಲಯಕ್ಕೆ ತಾಯಿ ಹಾಲಿದ್ದಂತೆ. ಅಂದರೆ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿಯನ್ನು ಈ ವಿಶ್ವ ವ್ಯಾಪಾರ ಸಂಸ್ಥೆ ಅಷ್ಟು ಚೆನ್ನಾಗಿ ಕಾಯುತ್ತದೆ ಎಂದಾಯಿತಲ್ಲವೇ?

ಭಾರತ ತನ್ನ ಮಾತನ್ನು ಉಳಿಸಿಕೊಂಡಿದೆ ಎಂದರೆ ಈತ ಅಮೆರಿಕಾ ಮತ್ತು ಯುರೋಪುಗಳು ತಮ್ಮ ಪ್ರಸ್ತಾವಗಳನ್ನು ಸುಧಾರಿಸಿವೆ, ಆದ್ದರಿಂದ ಭಾರತ ಇನ್ನೂ ಹೆಚ್ಚೆಚ್ಚು ಉದಾರೀಕರಣವನ್ನು ತರಬೇಕು ಎನ್ನುತ್ತಾನೆ.

ತಾಯಿ ಹಾಲು ಬಿಟ್ಟು ... ಕುಡಿದು ಭಾರತದ ಜನಸಾಮಾನ್ಯರನ್ನು ಉಪವಾಸ ಕೆಡವುವುದೇ ಈ ಸಾಮ್ರಾಜ್ಯಶಾಹಿಗಳ ವಿಶ್ವವ್ಯಾಪಾರ ಸಂಸ್ಥೆಯ ಹುನ್ನಾರವಲ್ಲವೇ?

ಆಝಾದ್ ಹಿಂದೆ ಸೇನೆಯಲ್ಲಿ ....

ಪುಟ 4 ರಿಂದ

ದಕ್ಷತೆಯಲ್ಲಿ ಗಮನ ಸೆಳೆದ ಒಂದು ಗುಂಪೆಂದರೆ ಎರಡು ಮೂರು ಪೀಳಿಗೆಗಳಿಂದ ಅಲ್ಲೇ ನೆಲೆಸಿದ್ದ ಕುಟುಂಬಗಳಿಂದ ಬಂದ ಮಹಿಳೆಯರು. ಅವರಿಗೆ ಭಾರತದೊಂದಿಗೆ ಸಾಂಸ್ಕೃತಿಕ ಸಂಬಂಧ ಬಿಟ್ಟರೆ ಬೇರೇನೂ ಸಂಪರ್ಕವಿದ್ದಿರಲಿಲ್ಲ.

ತಾತ್ಕಾಲಿಕ ಸರಕಾರದಲ್ಲೂ

ಅಕ್ಟೋಬರ್ 23, 1943 ರಂದು ಸಿಂಗಾಪುರ ಮತ್ತು ರಂಗೂನಿನಲ್ಲಿ ಝಾನ್ಸಿ ರಾಣಿ ರೆಜಿಮೆಂಟಿಗೆ ತರಬೇತಿ ಆರಂಭಿಸಲಾಯಿತು. ಅಕ್ಟೋಬರ್ 21 ರಂದು ನೇತಾಜಿ ಅಝಾದ್ ಹಿಂದ್‌ನ ತಾತ್ಕಾಲಿಕ ಸರಕಾರ ರಚಿಸಿದರು. ಭಾರತೀಯ ಮಹಿಳೆಯರ ಉದ್ಧಾರದ ಬಗ್ಗೆ ತನ್ನ ಕಳಕಳಿಯನ್ನು ಸಾಬೀತು ಮಾಡಲು ನನ್ನನ್ನು ತನ್ನ ಸರಕಾರದಲ್ಲಿ ಒಬ್ಬ ಮಂತ್ರಿಯಾಗಿ ಸೇರಿಸಿಕೊಂಡರು. ಮಹಿಳಾ ಸಮಸ್ಯೆಗಳ ಖಾತೆಯನ್ನು ಹಾಗೂ ಝಾನ್ಸಿ ರಾಣಿ ತುಕಡಿಯ ಜವಾಬ್ದಾರಿಯನ್ನು ನನಗೆ ವಹಿಸಲಾಯಿತು. ನಮ್ಮ ತರಬೇತಿ ಮೂರು ತಿಂಗಳು ನಡೆಯಿತು. ಅದು ಬಹಳ ಕಠಿಣವಾಗಿತ್ತು. ನಾವೆಲ್ಲಾ ಖಾಕಿ ಪ್ಯಾಂಟು ಹಾಗೂ ಖಾಕಿ ಬುಷ್ ಷರ್ಟ್‌ನ ಸಮವಸ್ತ್ರ ತೊಡಬೇಕಾಗಿತ್ತು. ಹಾಗೂ ನಮ್ಮ ತಲೆಗೂದಲನ್ನು ಮೊಟಕುಗೊಳಿಸಬೇಕಾಗಿತ್ತು. ನನಗೆ ಮೊಣಕಾಲವರೆಗೂ ಕೂದಲಿತ್ತು. ತಾಯಿ ಅದನ್ನೆಂದೂ ಕತ್ತರಿಸಲು ಬಿಟ್ಟಿರಲಿಲ್ಲ, ಆದ್ದರಿಂದ ಅದನ್ನು ಕತ್ತರಿಸಬೇಕಾಗಿ ಬಂದಾಗ ನನಗೆ ನಿಜಕ್ಕೂ ಸಂತೋಷವಾಗಿತ್ತು. ನಂತರ ಎಂದೂ ಅದನ್ನು ಉದ್ದಕ್ಕೆ ಬೆಳೆಸಲಿಲ್ಲ, ಭಾರತೀಯ ಸೇನೆಯ ಕೆಲವರು ನಮಗೆ ತರಬೇತಿ ನೀಡುತ್ತಿದ್ದರು. ಅವರು ಶಿಸ್ತು ಮತ್ತು ದಕ್ಷತೆಗೆ ಒತ್ತು ನೀಡುತ್ತಿದ್ದರು. ಆ ಶಿಕ್ಷಕರು ತಮ್ಮ ಕೆಲಸದಲ್ಲಿ ಅಪಾರ ಆಸಕ್ತಿ ಮತ್ತು ಹೆಮ್ಮೆ ಅನುಭವಿಸುತ್ತಿದ್ದರು. ನಾವು ಅವರ ತರಬೇತಿಗೆ ಸ್ಪಂದಿಸಿದಾಗ ಅವರಿಗೆ ಬಹಳ ಸಂತೋಷ ಹಾಗೂ ಹೆಮ್ಮೆ ಅನಿಸುತ್ತಿತ್ತು. ನಮಗಿದ್ದ ಶಸ್ತ್ರಾಸ್ತ್ರಗಳೆಂದರೆ ರೈಫಲ್‌ಗಳು ಮತ್ತು ಕೈ ಬಾಂಬುಗಳು ಮಾತ್ರ. ಸ್ವಯಂಚಾಲಿತ ಶಸ್ತ್ರಾಸ್ತ್ರಗಳಿರಲಿಲ್ಲ. ದೈಹಿಕ ತರಬೇತಿಯೊಂದಿಗೆ ಮಿಲಿಟರಿ ತಂತ್ರಗಳು, ಕಾರ್ಯವ್ಯೂಹಗಳು ಹಾಗೂ ನಕಾಶೆಗಳನ್ನು ಓದುವ ತರಬೇತಿ ನೀಡಲಾಯಿತು. ಪ್ರತಿದಿನ ಒಂದೂವರೆ ಗಂಟೆ ಹಿಂದಿ ತರಗತಿಗಳೂ ಇರುತ್ತಿದ್ದವು. ರೋಮನ್ ಲಿಪಿಯಲ್ಲಿ ಆ ಭಾಷೆಯನ್ನು ಕಲಿಸಲಾಗುತ್ತಿತ್ತು. ತರಬೇತು ಪಡೆಯುವವರಲ್ಲಿ ಹೆಚ್ಚಿನವರು ದಕ್ಷಿಣ ಭಾರತದವರು. ಆದರೆ ಮೂರು ತಿಂಗಳಲ್ಲಿ ಅವರೆಲ್ಲಾ ಹಿಂದಿ ಕಲಿತರು. ರಾಜಕೀಯ ತರಗತಿಗಳೂ ಇರುತ್ತಿದ್ದವು. ಇದನ್ನು ಬಹಳಸಾರಿ ನೇತಾಜಿಯವರೇ ತಗೊಳ್ಳುತ್ತಿದ್ದರು.

ರಣರಂಗದಲ್ಲಿ

ಮೂರು ತಿಂಗಳ ತರಬೇತಿಯ ನಂತರ ಝಾನ್ಸಿ ರಾಣಿ ತುಕಡಿಯ ಮೊದಲ ತಂಡ ಸಿಂಗಾಪುರದಿಂದ ಬರ್ಮಾಕ್ಕೆ ಹೋಯಿತು. ಮೇ 1944 ರಲ್ಲಿ ಈ ತುಕಡಿಯ ಸಣ್ಣ ಸಣ್ಣ ತಂಡಗಳು ರಂಗೂನಿನಿಂದ ಇಂಫಾಲ್ ಕಡೆ ಹೊರಟವು. ಈ ತುಕಡಿ ಬಹಳಮಟ್ಟಿಗೆ ಗೆರಿಲ್ಲಾ ಧಾಳಿಗಳಲ್ಲಿ ತೊಡಗಿದ್ದವು. ಪುರುಷ ಸಹ ಸೈನಿಕರ ವರ್ತನೆಯಂತೂ ಉತ್ತಮ ಮಾದರಿ ಹಾಕಿಕೊಟ್ಟಿದ್ದವು. ಒಂದೇ ಒಂದು ಕೆಟ್ಟ ಘಟನೆಯೂ ನಡೆಯಲು ಅವರು ಅವಕಾಶ ಕೊಡಲಿಲ್ಲ. ವಾಸ್ತವವಾಗಿ ಅವರು ನಮ್ಮಗೆಲ್ಲಾ ಜಪಾನೀಯರಿಂದ ಹಾಗೂ ಸ್ಥಳೀಯ ಜನರಿಂದ ರಕ್ಷಣೆಯನ್ನು ಒದಗಿಸುತ್ತಿದ್ದರು. ಜಪಾನೀಯರು ಅತಿ ದೊಡ್ಡ ಪುರುಷ ಸಂಕುಚಿತವಾದಿಗಳಾಗಿದ್ದರು. ಆರಂಭದಲ್ಲಿ ಅವರು ಮಹಿಳಾ ತುಕಡಿಗಳ ವಿಚಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ನಮಗೆ ಜಾಗ ಅಥವಾ ಕ್ಯಾಂಪ್ ಸೈಟ್‌ಗಳನ್ನು ಒದಗಿಸಲಿಲ್ಲ. ಆದರೆ ನಮ್ಮ ಕೆಲಸ ನೋಡಿದ ಮೇಲೆ ಅವರೂ ಪ್ರಭಾವಿತರಾದರು.

ಆದರೆ ನಮ್ಮ ತುಕಡಿ ಬರ್ಮಾದ ಮಧ್ಯಭಾಗದವರೆಗೆ ಮಾತ್ರ ಮುಂದುವರೆಯಲು ಸಾಧ್ಯವಾಯಿತು. ಏಕೆಂದರೆ ಇಂಫಾಲ್ ಮೇಲೆ ಐ.ಎನ್.ಎ.ಯ ಧಾಳಿ ಹಾಗೂ ಅದಕ್ಕೆ ಜಪಾನಿ ಸೇನೆಯ ನೆರವನ್ನು ಹಿಮ್ಮೆಟ್ಟಿಸಲು ಬ್ರಿಟಿಶ್ ಕಾವಲು ಪಡೆಯನ್ನು ವಿಪರೀತ ಹೆಚ್ಚಿಸಲಾಗಿತ್ತು. ಬಹಳ ಸಾವು-ನೋವುಗಳ ನಂತರ ಹಿಮ್ಮೆಟ್ಟಬೇಕಾಯಿತು. ಅಲ್ಲದೆ ಮಳೆಗಾಲ ಬೇಗನೇ ಕಾಲಿಟ್ಟು ಚಲನವಲನ ಅಸಾಧ್ಯವೆನ್ನುವಂತಾಯಿತು. ನೇತಾಜಿ ಮನಸ್ಸಿನಲ್ಲದ ಮನಸ್ಸಿನಿಂದ ಹಿಂದೆಗೆಯುವ ಆದೇಶ ನೀಡಿದರು. ಸಾಕಷ್ಟು ಸಾಧನಗಳಿಲ್ಲದ, ಪೋಷಕ ಆಹಾರವಿಲ್ಲದ ಐ.ಎನ್.ಎ. ಮಧ್ಯ ಬರ್ಮಾಕ್ಕೆ ಹಿಂದೆ ಸರಿಯಿತು. ನಂತರ ಪುನಃ ತಂಡ-ತಂಡಗಳಾಗಿ ಬ್ರಿಟಿಶ್ ಸೇನೆಯ ಮೇಲೆ ಧಾಳಿ ಮಾಡಿ ಅವರ ಮುನ್ನಡೆಯನ್ನು ವಿಳಂಬಗೊಳಿಸಿತು.

ನೆತ್ತರಿನಲ್ಲಿ ಸಹಿ

ಆದರೆ ಝಾನ್ಸಿ ರಾಣಿ ತುಕಡಿಯನ್ನು ವಿಸರ್ಜಿಸಲಾಯಿತು. ಬರ್ಮಾದಲ್ಲಿ ಕುಟುಂಬಗಳಿದ್ದವರನ್ನು ಹಿಂದೆ ಕಳಿಸಲಾಯಿತು. ಸ್ವತಃ ನೇತಾಜಿ ಮಲಯಾದ ತುಕಡಿಯ ಜೊತೆಗೆ ಥೈಲ್ಯಾಂಡ್‌ಗೆ ನಂತರ ಮಲೇಶ್ಯಾಕ್ಕೆ ಹೋದರು. ಈ ಸಂಬಂಧದಲ್ಲಿ ನಾನೊಂದು ವಿಷಯವನ್ನು ಹೇಳಬೇಕು. ಝಾನ್ಸಿ ರಾಣಿ ತುಕಡಿಯ ಪ್ರತಿಯೊಬ್ಬ ಸದಸ್ಯರೂ ತಮ್ಮ ನೆತ್ತರಿನಿಂದ ಸಹಿ ಮಾಡಿದ ಒಂದು ಮನವಿಯನ್ನು ನೇತಾಜಿಗೆ ಅರ್ಪಿಸಿದರು. ತಾವು ರಣರಂಗದಲ್ಲಿ ಪ್ರಾಣ ಕೊಡಲು ಸಿದ್ಧ, ತಾವು ಹಿಮ್ಮೆಟ್ಟಲು ಇಷ್ಟಪಡುವುದಿಲ್ಲ ಎಂದು ಆ ಅರ್ಜಿಯಲ್ಲಿ ಹೇಳಲಾಗಿತ್ತು.

ಈ ಘಟ್ಟದಲ್ಲಿ ನಾನು ಐ.ಎನ್.ಎ. ಆಸ್ಪತ್ರೆಯಲ್ಲಿ ಕೆಲಸ ಮಾಡುವುದಾಗಿ ಹೇಳಿದೆ. ಗಂಭೀರವಾಗಿ ಗಾಯಗೊಂಡ, ಅಂಗವಿಕಲರಾದ ಐ.ಎನ್.ಎ. ಸಿಬ್ಬಂದಿಯ ಶುಶ್ರೂಷೆಗಾಗಿ ಇದನ್ನು ತೆರೆಯಲಾಗಿತ್ತು. ಅದು ದಟ್ಟ ಕಾಡಿನಲ್ಲಿತ್ತು. ಎಂದೂ ಯುದ್ಧ ಅಥವಾ ಆಕಾಶದಿಂದ ಬಾಂಬು ಧಾಳಿಯನ್ನು ಕಂಡಿರದಿದ್ದ ಜಾಗ ಅದು. ಆದರೆ ಮಿತ್ರ ಪಕ್ಷಗಳ ಗುಪ್ತಚರರು ಬಹಳ ಸಕ್ರಿಯರಾಗಿದ್ದರು. ಬರ್ಮಾವನ್ನು ಬಿಡುವ ಮೊದಲು ನೇತಾಜಿ ಈ ಆಸ್ಪತ್ರೆಗೆ ಭೇಟಿ ನೀಡಿದ್ದರು. ಮರುದಿನವೇ ನಮ್ಮ ಮೇಲೆ ಭಾರೀ ಬಾಂಬ್ ಧಾಳಿ ನಡೆಯಿತು. ಆಸ್ಪತ್ರೆ ಧ್ವಂಸವಾಯಿತು. ಹೆಚ್ಚಿನ ರೋಗಿಗಳು ಕೊಲ್ಲಲ್ಪಟ್ಟರು. ಉಳಿದ ಕೆಲವರನ್ನು ಎತ್ತಿನ ಗಾಡಿಗಳಲ್ಲಿ ಸಾಗಿಸುತ್ತಿದ್ದಾಗ ರಂಗೂನಿಗೆ ಹೋಗುವ ರಸ್ತೆಯಲ್ಲಿ ಮುಂದೊತ್ತಿ ಬರುತ್ತಿದ್ದ ಬ್ರಿಟಿಶ್ ಪಡೆಗಳ ಕೈಗೆ ಸಿಕ್ಕಿಬಿದ್ದೆವು. ಇದು ನಡೆದದ್ದು ಜೂನ್ 1945ರ ಆರಂಭದಲ್ಲಿ. ನನ್ನನ್ನು ಇತರ ಐ.ಎನ್.ಎ. ಸಿಬ್ಬಂದಿಯಿಂದ ಪ್ರತ್ಯೇಕಿಸಿ ವಿಚಾರಣೆಗೆಂದು ರಂಗೂನಿಗೆ ಕಳಿಸಿ ಗೃಹಬಂಧನದಲ್ಲಿಡಲಾಯಿತು. ಮಾರ್ಚ್ 1946 ರಲ್ಲಿ ಬಿಡುಗಡೆ ಮಾಡಿ ನನ್ನನ್ನು ಭಾರತಕ್ಕೆ ಕರೆತರಲಾಯಿತು. ಐ.ಎನ್.ಎ. ಬಂಧಿಗಳ ವಿಚಾರಣೆ ಇಡೀ ದೇಶದ ಗಮನ ಸೆಳೆಯಿತು. ನೆಹರೂ ಇವರನ್ನು ಸಮರ್ಥಿಸಿಕೊಳ್ಳಲು ಮತ್ತೊಮ್ಮೆ ವಕೀಲರ ಕೋಟು ಹಾಕಿಕೊಂಡರು. ಆದರೆ ಈ ಕೆಲಸದಲ್ಲಿ ಅತೀದೊಡ್ಡ ಕಾಣಿಕೆ ನೀಡಿದವರೆಂದರೆ ಭೂಲಾಭಾಯ್ ದೇಸಾಯಿ. ಐ.ಎನ್.ಎ. ವಿಚಾರಣೆಯಲ್ಲಿ ಅವರ ಭಾಷಣ ಒಂದು ಐತಿಹಾಸಿಕ ಭಾಷಣ.

ಸ್ವಾತಂತ್ರ್ಯದ ನಂತರ

ಸ್ವಾತಂತ್ರ್ಯದ ನಂತರ ನಾನು ಮತ್ತೆ ವೈದ್ಯಕೀಯ ಪ್ರಾಕ್ಟೀಸ್ ಆರಂಭಿಸಿದೆ. ಯಾವುದೇ ರಾಜಕೀಯ ಪಕ್ಷವನ್ನು ಸೇರಲಿಲ್ಲ. ಕಾಂಗ್ರೆಸ್ ಪಕ್ಷವನ್ನು ಸೇರುವ ಯಾವುದೇ ಆಕಾಂಕ್ಷೆ ನನಗಿರಲಿಲ್ಲ. ಅವಿಭಜಿತ ಸಿಪಿಐ ನಮ್ಮ ಬಗ್ಗೆ ತಳೆದಿದ್ದ ನಿಲುವಿನಿಂದಾಗಿ ಅದನ್ನು ಸೇರುವಂತಿರಲಿಲ್ಲ. 1969 ರಲ್ಲಿ ನನ್ನ ಮಗಳು ಸುಭಾಷಿಣಿ ಅಮೆರಿಕಾದಿಂದ ಹಿಂದಿರುಗಿದ ನಂತರ ಕಾನ್ಪುರದಲ್ಲಿ ಕಾರ್ಮಿಕ ಆಂದೋಲನದ ಮೂಲಕ ಸಿಪಿಐ(ಎಂ) ಸೇರಿದಳು. 1971 ರಲ್ಲಿ ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ ನಾನು ಪರಿಹಾರ ಕೆಲಸಗಳಲ್ಲಿ ಸ್ವಯಂ ಸೇವಕಳಾಗಿ ಭಾಗವಹಿಸ ಬಯಸಿದ್ದೆ. ಆಗ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದ ಪದ್ಮಜಾನಾಯ್ಡುರವರಿಗೆ ಬರೆದೆ. ಅವರಿಂದ ನನಗೆ ನೆರವು ಸಿಗಲಿಲ್ಲ. ಆಗ ನಾನು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯಲ್ಲಿ ಜನತಾ ಪರಿಹಾರ ಸಮಿತಿಗೆ ಬೆಂಬಲ ನೀಡಬೇಕೆಂದು ಜ್ಯೋತಿಬಸುರವರ ಮನವಿಯನ್ನು ಕಂಡೆ. ಸ್ವಯಂ ಸೇವಕಳಾಗಿ ಸೇರಿ ಗಡಿ ಪ್ರದೇಶಗಳಲ್ಲಿ ಆರುವಾರ ಕೆಲಸ ಮಾಡಿದೆ. ಕಲ್ಕತ್ತೆಯ ಮೂಲಕ ಹಿಂದಿರುಗುವಾಗ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ನಡೆಯುತ್ತಿತ್ತು. ನಾನು ಅಲ್ಲಿಗೆ ಹೋಗಿ ಮುಖಂಡರನ್ನು ಭೇಟಿಯಾಗಿ ಪಕ್ಷವನ್ನು ಸೇರಿದೆ. ಅಂದಿನಿಂದ ಪಕ್ಷದಲ್ಲಿದ್ದೇನೆ ○



ಪೆಟ್ರೋಲಿಯಂ ಬೆಲೆ ಏರಿಕೆಗೆ ದೇಶಾದ್ಯಂತ ಪ್ರತಿಭಟನೆಯ ಅಲೆ

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಯನ್ನು ಏರಿಸಿರುವುದಕ್ಕೆ ದೇಶಾದ್ಯಂತ ಆಕ್ರೋಶದೊಂದಿಗೆ ಪ್ರತಿಭಟನೆಯ ಅಲೆಯೇ ಎದ್ದಿದೆ. ವಿಶೇಷವಾಗಿ ಎಡಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳ ನೇತೃತ್ವದಲ್ಲಿ ನಾಡಿನ ಉದ್ದಗಲದಲ್ಲಿ ಬೆಲೆಯೇರಿಕೆ ವಿರೋಧಿ ಹೋರಾಟಗಳು ನಡೆಯುತ್ತಿವೆ.

ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿತ ನೇತೃತ್ವದಲ್ಲಿ ಗೋಲ್ ಮೇಠಿ ಚೌಕದಲ್ಲಿರುವ ಪ್ರಧಾನಿ ನಿವಾಸದ ಎದುರು ಸೆಪ್ಟೆಂಬರ್ ಐದರಂದು ನೂರಾರು ಮಹಿಳೆಯರು ಮತ್ತು ಪುರುಷರು ಪ್ರತಿಭಟನಾ ಪ್ರದರ್ಶನ ನಡೆಸಿದರು.

"ಬೆಲೆಯೇರಿಕೆಯನ್ನು ಹಿಂತೆಗೆದುಕೊಳ್ಳಿ", "ಗುಜ್ರಾಲ್ ಸರ್ಕಾರವೇ, ಕಾಂಗ್ರೆಸ್ ನೀತಿ ಅನುಸರಿಸುವುದನ್ನು ನಿಲ್ಲಿಸಿ" ಮೊದಲಾದ ಘೋಷಣೆಗಳುಳ್ಳ ಭಿತ್ತಿ ಪತ್ರಗಳನ್ನು ಹಿಡಿದಿದ್ದ ಮೆರವಣಿಗೆಕಾರರನ್ನು ಪೋಲೀಸರು ಮುಖ್ಯರಸ್ತೆಯಲ್ಲಿ ತಡೆದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೋಹನ್ ಲಾಲ್, ಬೃಂದಾ ಕಾರಟ್ ಮತ್ತು ರಾಜ್ಯ ಸಮಿತಿಯ ಹಲವು ಸದಸ್ಯರು ಮಾತನಾಡಿದರು. ಬೆಲೆಯೇರಿಕೆಯನ್ನು ಮತ್ತು ಡೀಸೆಲ್ ಬೆಲೆ ನಿಯಂತ್ರಣವನ್ನು ತೆಗೆದುಕಹಾಕುವ ಪ್ರಸ್ತಾವವನ್ನು ಅವರು ಕಟುವಾಗಿ ಖಂಡಿಸಿದರು.

ಕೇರಳದಲ್ಲಿ

ತಿರುವನಂತಪುರಂ ವರದಿ:

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ವಿರುದ್ಧ ಕೇರಳಾದ್ಯಂತ ಅನೇಕ ಕಾರ್ಮಿಕ ಸಂಘಗಳು, ಸರಕಾರಿ ನೌಕರರು, ರಿಕ್ಷಾ ಚಾಲಕರು ಮೊದಲಾದವರು ಪ್ರದರ್ಶನಗಳನ್ನು ನಡೆಸಿದರು

ಸೆಪ್ಟೆಂಬರ್ ನಾಲ್ಕರಿಂದ ಒಂದು ದಿನ ರಾಜ್ಯಾದ್ಯಂತ ಸಾರಿಗೆ ಮುಷ್ಕರ ನಡೆಸುವಂತೆ ಹಲವು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಾರಿಗೆ ಕ್ಷೇತ್ರದ ಕಾರ್ಮಿಕರಿಗೆ ಕರೆ ಕೊಟ್ಟಿದ್ದರು. ಸಿಐಟಿಯು, ಎಐಟಿಯುಸಿ, ಇಂಟಕ್, ಬಿಎಂಎಸ್, ಯುಟಿಯುಸಿ, ಎಸ್.ಟಿ.ಯು ಮತ್ತು ಎಚ್.ಎಂ.ಎಸ್. ಈ ಜಂಟಿ ಕರೆಗೆ ಸಹಿ ಹಾಕಿದ್ದವು.

ಕೇಂದ್ರ ಸರ್ಕಾರದ ತಪ್ಪು ಧೋರಣೆಯಿಂದಾಗಿ ಕೇರಳ, ಕರ್ನಾಟಕ ಮೊದಲಾದ ರಾಜ್ಯಗಳಲ್ಲಿ ಈ ಬೆಲೆಯೇರಿಕೆ ಪ್ರಮಾಣ ದೇಶದ ಉಳಿದ ಭಾಗಗಳಿಗಿಂತ ತುಂಬಾ ಹೆಚ್ಚಾಗಿದೆ. ಇದನ್ನು ವಿಶೇಷವಾಗಿ ಖಂಡಿಸಲಾಗಿದೆ.

ಪೆಟ್ರೋಲ್ ಉತ್ಪನ್ನಗಳ ಬೆಲೆಯೇರಿಕೆ ವಿರುದ್ಧ ಹೋರಾಟ ನಡೆಸುವಂತೆ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿ ಕಾರ್ಯದರ್ಶಿ ಚಡಾಯನ್ ಗೋವಿಂದನ್ ಕರೆ ಕೊಟ್ಟಿದ್ದಾರೆ. ಬೆಲೆಯೇರಿಕೆ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ರಾಜ್ಯದ ಹಣಕಾಸು ಸಚಿವರೂ, ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆಗಿರುವ ಟಿ.ಶಿವದಾಸ್ ಮೇನನ್ ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದಾರೆ.

ಪ್ರತಿಕೃತಿ ದಹನ ಪಾಟ್ನಾ ವರದಿ:

ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಬಿಹಾರ ರಾಜ್ಯ ಸಮಿತಿಗಳು ಪಾಟ್ನಾ ಕಾಲೇಜ್ ಗೇಟ್ ಬಳಿ ಪ್ರತಿಕೃತಿಯನ್ನು ಸುಟ್ಟು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಗೆ ವಿರೋಧವನ್ನು ದಾಖಲಿಸಿದರು. ಬೆಲೆಯೇರಿಕೆಯನ್ನು ತಕ್ಷಣವೇ ವಾಪಸು ಪಡೆಯುವಂತೆ ನೂರಾರು ಪ್ರದರ್ಶನಕಾರರು ಒತ್ತಾಯಿಸಿದರು.

ರಾಜ್ಯಾದ್ಯಂತ ಎಲ್ಲಾ ಹಂತಗಳಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸಸುವಂತೆ ಉಭಯ ಸಂಘಟನೆಗಳು ತಮ್ಮ ಕಾರ್ಯಕರ್ತರಿಗೆ ಕರೆ ಕೊಟ್ಟಿವೆ.

ಆಂಧ್ರ: ರಸ್ತೆ ತಡೆ ಚಳುವಳಿ

ಲಾಠಿ ಪ್ರಹಾರ, ಬಂಧನ

ಪೆಟ್ರೋಲ್ ಉತ್ಪನ್ನಗಳ ಬೆಲೆಯೇರಿಕೆಗೆ ಆಂಧ್ರಪ್ರದೇಶದಲ್ಲಿ ತೀಕ್ಷ್ಣ ಸ್ವರೂಪದ ಪ್ರತಿಭಟನೆ ವ್ಯಕ್ತವಾಯಿತು.

ಹೈದರಾಬಾದಿನ ಮಹಾರಾಜ ಗಂಜ್ ಪ್ರದೇಶಗಳಲ್ಲಿ ಸಿಐಟಿಯು ಏರ್ಪಡಿಸಿದ್ದ ರಸ್ತೆ ತಡೆ ಚಳುವಳಿಯಲ್ಲಿ ಪಾಲ್ಗೊಂಡ ಕಾರ್ಯಕರ್ತರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರು ಹಾಗೂ ನೂರಾರು ಜನರನ್ನು ಬಂಧಿಸಿದರು.

ಕಾರ್ಯಕರ್ತರನ್ನು ಸೆಪ್ಟೆಂಬರ್ 6 ರಂದು ಬಂಧಿಸಿ 9 ರವರೆಗೆ ಅಕ್ರಮವಾಗಿ ಜೈಲಿನಲ್ಲಿ ಇಡಲಾಗಿತ್ತು. ಲಾಠಿ ಪ್ರಹಾರದಲ್ಲಿ ಇಬ್ಬರು ಮಹಿಳೆಯರು ಸೇರಿತ ಐದು ಜನರು ಗಾಯಗೊಂಡಿದ್ದಾರೆ.

ಖಮ್ಮಮ್‌ನಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಮೆರವಣಿಗೆ ನಡೆಸಿ ಬೆಲೆಯೇರಿಕೆಯನ್ನು ಪ್ರತಿಭಟಿಸಿದರು. ವಿಶಾಖಪಟ್ಟಣಂನ ವಿಶಾಖನಗರ, ಕಂಚರಪಾಲಂ ಮೊದಲಾದೆಡೆ ಮೆರವಣಿಗೆಗಳು ನಡೆದವು. ಬೆಲೆಯೇರಿಕೆ ಘೋಷಣೆಯಾದ ಮರುದಿನವೇ ವಿಜಯವಾಡದಲ್ಲಿ ಸಿಪಿಐ(ಎಂ) ನಗರ ಸಮಿತಿ ಏರ್ಪಡಿಸಿದ್ದ ಪ್ರತಿಭಟನಾ ಕಾರ್ಯಕ್ರಮದಲ್ಲಿ ನೂರಾರು ಜನರು ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದು ಒಂದು ವಿಶೇಷ ಅಂಶವಾಗಿದೆ.

ಪ್ರಕಾಶಂ ಜಿಲ್ಲೆಯ ಒಂಗೋಲ್, ಸಿರಾಲಾ ಮತ್ತು ಸಿಂಗರಾಯಕೊಂಡ, ಕರ್ನೂಲ್ ಜಿಲ್ಲೆಯ ನಂದ್ಯಾಲ ಮತ್ತು ರಾಜ್ಯದ ಇನ್ನೂ ಹಲವೆಡೆ ಪ್ರತಿಭಟನೆ ಚಳುವಳಿ ನಡೆದ ವರದಿಗಳು ಬಂದಿವೆ.

ತಮಿಳುನಾಡು

ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ

ಸಿಪಿಐ(ಎಂ) ಪಾಲಿಟ್ ಬ್ಯೂರೋ ಕರೆಯ ಮೇರೆಗೆ ಪಕ್ಷದ ತಮಿಳುನಾಡು ರಾಜ್ಯ ಸಮಿತಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸೆಪ್ಟೆಂಬರ್ ಐದರಂದು ಪ್ರತಿಭಟನೆ ಪ್ರದರ್ಶನಗಳನ್ನು ನಡಿಸಿತು. ರಾಜ್ಯಾದ್ಯಂತ ಪ್ರಮುಖ ಪಟ್ಟಣಗಳಲ್ಲಿ ಆ ದಿನ ಪ್ರದರ್ಶನಗಳು ನಡೆದವು.

ಸಿದ್ಧತೆಗೆ ಹೆಚ್ಚು ಕಾಲಾವಕಾಶ ಇಲ್ಲದಿದ್ದರೂ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಸಂಘಟಿಸಲಾಯಿತು. ರಾಜಧಾನಿ ಚೆನ್ನೈನ ಎರಡು ಸ್ಥಳಗಳಲ್ಲಿ ಪ್ರದರ್ಶನ ನಡೆಯಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಟಿ.ಕೆ.ರಂಗರಾಜನ್ ಮತ್ತು ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಂ.ಸುಂದರ್ ರಾಜನ್ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು.

ದಿಂಡಿಗಲ್, ಮಧುರೆ, ಕೊಯಮತ್ತೂರು, ತಿರುಚಿ ಮತ್ತಿತರ ಕಡೆಗಳಿಂದಲೂ ಚಳುವಳಿಯ ವರದಿಗಳು ಬಂದಿವೆ.

ಸಾಮೂಹಿಕ ಅತ್ಯಾಚಾರದ ವಿರುದ್ಧ ಭುಗಿಲೆದ್ದ ಆಕ್ರೋಶ ಜೈಪುರ ಬಂದ್

ರಾಜಸ್ಥಾನ ವಿಶ್ವವಿದ್ಯಾಲಯ ಕ್ಯಾಂಪಾಸ್‌ನಲ್ಲಿ ಜೆ.ಸಿ.ಬೋಸ್ ಹುಡುಗರ ಹಾಸ್ಟೆಲ್‌ನಲ್ಲಿ ಸೆಪ್ಟಂಬರ್ ಮೊದಲ ವಾರದಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಹೇಯ ಪ್ರಕರಣ ವರದಿಯಾಗಿದೆ. ಎಂಟು ದುಷ್ಕರ್ಮಿಗಳು ಈ ಕರಾಳ ಕೃತ್ಯದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ವಿರೋಧಿಸಿ ಹಾಗು ದುಷ್ಕರ್ಮಿಗಳನ್ನು ಬಂದಿಸುವಂತೆ ಒತ್ತಾಯಿಸಲು ವಿದ್ಯಾರ್ಥಿಗಳು ನೀಡಿದ್ದ ಜೈಪುರ ಬಂದ್ ಸೆಪ್ಟಂಬರ್ ಎಂಟರಂದು ಯಶಸ್ವಿಯಾಗಿ ನಡೆಯಿತು. ನಾಗರಿಕರೂ ಹೃತ್ಪೂರ್ವಕವಾಗಿ ಈ ಬಂದ್‌ಗೆ ಬೆಂಬಲ ನೀಡುವ ಮೂಲಕ ಅಮಾನವೀಯ ಕೃತ್ಯಕ್ಕೆ ತಮ್ಮ ಆಕ್ರೋಶವನ್ನು ದಾಖಲಿಸಿದರು. ಬಂದ್‌ಗೆ ವಿದ್ಯಾರ್ಥಿ ಸಂಘಟನೆಗಳು ಕರೆಕೊಟ್ಟಿದ್ದರೂ ಅದಕ್ಕೆ ಇತರರೂ ಬೆಂಬಲ ನೀಡಿದ್ದು ಅಪೂರ್ವ ಕ್ರಮವಾಗಿತ್ತು.

ಜೈಪುರ ನಗರದ ಎಲ್ಲಾ ಮಾರುಕಟ್ಟೆಗಳ ಪ್ರತಿ ಒಂದು ಅಂಗಡಿಯೂ ಇಡೀ ದಿನ ಮುಚ್ಚಿತ್ತು. ವಾಹನಗಳ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ಬಹಳಷ್ಟು ಶಿಕ್ಷಣ ಸಂಸ್ಥೆಗಳೂ ಮುಚ್ಚಿದ್ದವು.

ಬೃಹತ್ ಸಭೆ

ಅನೇಕ ಮಹಿಳಾ ಸಂಘಟನೆಗಳು, ವಿದ್ಯಾರ್ಥಿ ಸಂಘಗಳು, ಪರ್ತಕರ್ತರ ಸಂಘಗಳು, ಸಿಐಟಿಯು ಸಹಿತ ಹಲವು ಕಾರ್ಮಿಕ ಸಂಘಟನೆಗಳು, ಯುವ ಕಾಂಗ್ರೆಸ್ ಮತ್ತಿತರ ಸಂಘ ಸಂಸ್ಥೆಗಳು ಸೆ.8 ರಂದು ವಿಶ್ವವಿದ್ಯಾ ಲಯ ಕ್ಯಾಂಪಾಸ್‌ನಲ್ಲಿ ಉಪಕುಲಪತಿ ಕಚೇರಿ ಎದುರು ತಕ್ಷಣವೇ ಬಂಧಿಸಿ ಅವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಸಂಘ ಸಂಸ್ಥೆಗಳು ಒತ್ತಾಯಿಸಿದವು.

ಅತ್ಯಾಚಾರಕ್ಕೆ ಒಳಗಾದ ಹುಡುಗಿಯ ಮೇಲೆಯೇ ಗೂಬೆಕೂರಿಸಲು, ಆಕೆಯ ನಡತೆಯ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ನಿಲ್ಲಿಸುವಂತೆ ಮಹಿಳಾ ಸಂಘಟನೆಗಳು ಒತ್ತಾಯಿಸಿವೆ. ಇಂಥ ಕೃತ್ಯಗಳಿಂದ ದೂರವಿರುವಂತೆ ಅವು ಪೋಲೀಸರು ಹಾಗೂ ತನಿಖಾ ಸಂಸ್ಥೆಗಳನ್ನು ಒತ್ತಾಯಿಸಿವೆ.

ದುಷ್ಟಕೂಟಕ್ಕೆ ಎಚ್ಚರಿಕೆ ಕೊಟ್ಟ ತ್ರಿಪುರಾ ರ್‍ಯಾಲಿ

ಉಪಜಾತಿ ಗಣಮುಕ್ತಿ ಪರಿಷತ್‌ನ(ಜಿ.ಎಂ.ಪಿ) ಕರೆಯ ಮೇರೆಗೆ ಸೆಪ್ಟೆಂಬರ್ ಆರರಂದು ತ್ರಿಪುರಾ ರಾಜಧಾನಿ ಅಗರ್ತಲಾದ ಅಸ್ತಬಲ್ ಮೈದಾನದಲ್ಲಿ ಬೃಹತ್ ರ್‍ಯಾಲಿಯೊಂದು ನಡೆಯಿತು. ರಾಜ್ಯದಲ್ಲಿ ಜನಾಂಗೀಯ ಸೌಹಾರ್ದತೆಯನ್ನು ಕದಡಲು ಕಾಂಗ್ರೆಸ್(ಐ) - ಟಿಯುಜೆಎಸ್ - ಟಿಎನ್‌ವಿ ಕೂಟ ನಡೆಸುತ್ತಿರುವ ಯತ್ನಗಳಿಗೆ ಈ ರ್‍ಯಾಲಿ ಒಂದು ಸೂಕ್ತ ಉತ್ತರದಂತಿತ್ತು.

ಸಾವಿರಾರು ಬುಡಕಟ್ಟು ಜನರಲ್ಲದೆ ಗಣನೀಯ ಸಂಖ್ಯೆಯ ಬುಡಕಟ್ಟೇತರ ಜನರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ತ್ರಿಪುರಾದ ಶಾಲೆ ಮತ್ತು ಪ್ರಗತಿಗೆ ಸಂಬಂಧಿಸಿದಂತೆ 15 ಬೇಡಿಕೆಗಳನ್ನು ಮುಂದಿಟ್ಟು ಸೆಪ್ಟೆಂಬರ್ ತಿಂಗಳಲ್ಲಿ ಮೂರು ರ್‍ಯಾಲಿಗಳನ್ನು ನಡೆಸಲು ಜಿಎಂಪಿ ಯೋಜಿಸಿದ್ದು ಈ ಸರಣಿಯಲ್ಲಿ ಇದು ಮೊದಲ ಕಾರ್ಯಕ್ರಮವಾಗಿತ್ತು.

ಜಿ.ಎಂ.ಪಿ. ಅಸ್ತಿತ್ವದ 50 ವರ್ಷಗಳ ಪರಂಪರೆಗೆ ಅನುಗುಣವಾಗಿ ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳ ಮಂಡನೆಗಾಗಿ ಈ ಸಾಮೂಹಿಕ ಚಳುವಳಿಯಲ್ಲಿ ಪಾಲ್ಗೊಳ್ಳಲು ಪಶ್ಚಿಮ ಮತ್ತು ದಕ್ಷಿಣ ತ್ರಿಪುರಾಗಳಿಂದ ಜನರ ಪ್ರವಾಹವೇ ಹರಿದುಬಂದಿತ್ತು. ಅವರಲ್ಲಿ ಬಹುತೇಕ ಜನರು ಯುವಜನರೇ ಆಗಿದ್ದರು. ಅವರ 15 ಬೇಡಿಕೆಗೆ ಸೌಹಾರ್ದ ಸೂಚಿಸಲು ರಾಜಧಾನಿಯ ಜನರು, ವಿಶೇಷವಾಗಿ ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರು ರ್‍ಯಾಲಿಯ ಯಶಸ್ಸಿಗೆ ಹಲವು ರೀತಿಯಲ್ಲಿ ಸಹಕಾರ ನೀಡಿದರು.

ರವೀಂದ್ರ ಭವನದಿಂದ ಆರಂಭವಾದ ಮೆರವಣಿಗೆಯ ನೇತೃತ್ವವನ್ನು ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಚಳುವಳಿಯ ಮುಖಂಡರು ವಹಿಸಿದ್ದರು. ಜೆ.ಎಂ.ಪಿ. ಪ್ರಧಾನ ಕಾರ್ಯದರ್ಶಿ ನಾರಾಯಣ ರೂಪಿಣಿ, ಸಂಸತ್‌ಸದಸ್ಯ ಬಾದಲ್ ಚೌಧರಿ, ರಾಜ್ಯದ ಸಚಿವ ನಿರಂಜನ ದೇವವರ್ಮಾ ಮೊದಲಾದವರು ಅವರಲ್ಲಿ ಪ್ರಮುಖರು.

ಗಣಮುಕ್ತಿ ಪರಿಷತ್‌ನ ಅಧ್ಯಕ್ಷರೂ ಆದ ಮುಖ್ಯಮಂತ್ರಿ ದಶರಥದೇವ್ ಹಲವು ದಶಕಗಳ ಕಾಲ ಈ ಸಂಘಟನೆಯನ್ನು ಕಷ್ಟ ಕಾರ್ಪಣ್ಯದ ನಡುವೆ ಮುನ್ನಡೆಸಿದ್ದಾರೆ. ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಿಎಂಪಿ ಮಂಡಿಸಿರುವ ಹಲವು ಬೇಡಿಕೆಗಳನ್ನು ಕೇಂದ್ರ ಸರ್ಕಾರ ಇನ್ನೂ ಈಡೇರಿಸಿಲ್ಲ ಎಂದು ಹೇಳಿದರು. ಆದರೆ ಎಡರಂಗ ಸರಕಾರ ಹಣಕಾಸಿನ ಮುಗ್ಗಟ್ಟಿನ ನಡುವೆಯೂ ಬುಡಕಟ್ಟು ಜನವಸತಿ ಪ್ರದೇಶಗಳಲ್ಲಿ ಸಂಪರ್ಕ, ನೀರು ಸರಬರಾಜು ಹಾಗೂ ವಸತಿ ವ್ಯವಸ್ಥೆಗಳನ್ನು ಸುಧಾರಿಸುತ್ತಿದೆ ಎಂದು ದೇವವರ್ಮಾ ತಿಳಿಸಿದರು.

ಎಚ್ಚರಿಕೆ

ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಮಾಣಿಕ ಸರ್ಕಾರ್ ರ್‍ಯಾಲಿಯನ್ನು ಹೃತ್ಪೂರ್ವಕವಾಗಿ ಬೆಂಬಲಿಸಿದರು, ಅಭಿನಂದಿಸಿದರು.

ಮುಂದಿನ ವರ್ಷ ಮಾರ್ಚ್‌ನಲ್ಲಿ ನಡೆಯಲಿರುವ ವಿಧಾನ ಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಎಡ ವಿರೋಧಿ ಪಕ್ಷಗಳು ಹೂಡುತ್ತಿರುವ ತಂತ್ರಗಳಿಗೆ ಬಲಿಬೀಳದಂತೆ ಸರ್ಕಾರ ರಾಜ್ಯದ ಜನತೆಗೆ ಎಚ್ಚರಿಕೆ ನೀಡಿದರು. ಸಾರ್ವಜನಿಕ ಭದ್ರತೆಗಳೊಂದಿಗೆ ಎಡರಂಗ ಯಾವತ್ತೂ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ 50 ವರ್ಷಗಳ ನಂತರವೂ ತ್ರಿಪುರಾದ ಬುಡಕಟ್ಟು ಜನರು ತಮ್ಮ ಅಸ್ತಿತ್ವಕ್ಕಾಗಿಯೇ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಸಜ್ಜಾಗಬೇಕಾದಂಥ ವಿಷಾದಕರ ಪರಿಸ್ಥಿತಿ ಇದೆ ಎದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ನಾರಾಯಣ ರೂಪಿಣಿ ಹೇಳಿದರು.

ಜಿ.ಎಂ.ಪಿ. ಉಪಾಧ್ಯಕ್ಷ ಅಘೋರ್ ದೇವವರ್ಮ ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದರು. ಸಭೆ ಆರಂಭದಲ್ಲಿ ಮದರ್ ತೆರೇಸಾ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಿತು.

ಭ್ರಷ್ಟಾಚಾರದಲ್ಲಿ ಮುಳುಗಿರುವ ಜಾರ್ಖಂಡ್ ಸ್ವಾಯತ್ತ ಮಂಡಳಿ

ಭ್ರಷ್ಟ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದ ಜಾರ್ಖಂಡ ಪ್ರದೇಶ ಸ್ವಾಯತ್ತ ಮಂಡಲಿಯನ್ನು(ಜೆಎಂಸಿ) ತಕ್ಷಣವೇ ವಿಸರ್ಜಿಸಬೇಕು ಎಂದು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಒತ್ತಾಯಿಸಿದೆ ಹಾಗೂ ಪಕ್ಷದ ಆಧಾರದಲ್ಲಿ ಚುನಾವಣೆ ನಡೆಸಬೇಕೆಂದು ಆಗ್ರಹಿಸಿದೆ.

ಬುಡಕಟ್ಟು ಜನರ ಆಶೋತ್ತರಗಳು ಈಡೇರುವಂತಾಗಲು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಜಾರ್ಖಂಡ್ ಪ್ರದೇಶದ ಸಿಪಿಐ(ಎಂ) ಮುಖಂಡರು ಹಾಗೂ ಕಾರ್ಯಕರ್ತರು ಸಭೆಯೊಂದನ್ನು ನಡೆಸಲಿದ್ದಾರೆ. ಈಚೆಗೆ ನಡೆದ ಪಕ್ಷದ ರಾಜ್ಯ ಸಮಿತಿ ಸಭೆ ಈ ಸಂಬಂಧ ನಿರ್ಣಯ ಕೈಗೊಂಡಿದೆ.

ಖಂಡನೆ

ಭೋಜಪುರ ಜಿಲ್ಲೆಯ ಪುರವಾರಿಯಾ ಗ್ರಾಮದ ದೇವಸ್ಥಾನವೊಂದಕ್ಕೆ ದಲಿತರು ಪ್ರವೇಶಿಸುವುದನ್ನು ತಡೆಯಲು ನಡೆದ ಯತ್ನವನ್ನು ಪಕ್ಷ ಕಟುವಾಗಿ ಖಂಡಿಸಿದೆ.

ರಾಷ್ಟ್ರ ನಾಯಕರಾದ ಡಾ.ಬಿ.ಆರ್.ಅಂಬೇಡ್ಕರ್, ಮಹಾತ್ಮಗಾಂಧಿ ಮತ್ತು ಚಂದ್ರಶೇಖರ ಆಜಾದರ ಪ್ರತಿಮೆಗಳನ್ನು ಅಪವಿತ್ರಗೊಳಿಸಿ ಅವಮಾನಿಸಲಾದ ಘಟನೆಗಳನ್ನು ಸಭೆ ಬಲವಾಗಿ ಖಂಡಿಸಿತು.

ಜಾತಿ ಗಲಭೆಗಳನ್ನು ಹುಟ್ಟು ಹಾಕಲು ಸಮಾಜವಿರೋಧಿ ಶಕ್ತಿಗಳು ಮಾಡುವ ಪ್ರಯತ್ನಗಳನ್ನು ವಿಫಲಗೊಳಿಸುವಂತೆ ಜನರಿಗೆ ಅದು ಕರೆ ನೀಡಿದೆ. ದಲಿತರಿಗೆ ಆಗುವ ಅವಮಾನ ಹಾಗೂ ಅವರ ಮೇಲೆ ನಡೆಯುವ ದೌರ್ಜನ್ಯವನ್ನು ಇಡೀ ಪ್ರಜಾಸತ್ತಾತ್ಮಕ ಜನರು ವಿರೋಧಿಸಬೇಕು ಎಂದು ಪಕ್ಷ ಕರೆ ಕೊಟ್ಟಿದೆ.

ನಿರುದ್ಯೋಗ ಭತ್ಯೆ ಯೋಜನೆ ಪುನರಾರಂಭಕ್ಕೆ ಚಳವಳಿ

ನಿರುದ್ಯೋಗಿ ಯುವಜನರಿಗೆ ಭತ್ಯೆ ನೀಡಬೇಕು, ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು, ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಬೇಕು ಮುಂತಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ತಾಲೂಕು ಜಿಲ್ಲಾ ಕೇಂದ್ರಗಳಲ್ಲಿ ಆಗಸ್ಟ್ 7 ರಂದು ತಮಿಳುನಾಡಿನಾದ್ಯಂತ ಡಿವೈಎಫ್‌ಐ ರಾಜ್ಯ ಸಮ್ಮೇಳನದ ಕರೆಯ ಮೇರೆಗೆ ಈ ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಡಿವೈಎಫ್‌ಐನ ಎಲ್ಲಾ ಪ್ರಮುಖ ನಾಯಕರು ಹಾಗೂ ಸಾವಿರಾರು ಕಾರ್ಯಕರ್ತರು ಪಿಕೆಟಿಂಗ್‌ನಲ್ಲಿ ಪಾಲ್ಗೊಂಡಿದ್ದರು. ರಾಜಧಾನಿ ಚೆನ್ನೈನಲ್ಲಿ ರಾಜ್ಯ ಕಾರ್ಯದರ್ಶಿ ಮಹೇಂದ್ರ ಮತ್ತು ಖಜಾಂಚಿ ತಿರುವಟ್ಟೈ ನೇತೃತ್ವ ವಹಿಸಿದ್ದರು.

1996 ರಲ್ಲಿ ಅಧಿಕಾರಕ್ಕೆ ಬಂದಿದ್ದ ಡಿಎಂಕೆ ಸರಕಾರ ನಿರುದ್ಯೋಗ ಭತ್ಯೆ ಯೋಜನೆಯನ್ನು ಪುನಾರಾಂಭಿಸುವ ಆಶ್ವಾಸನೆಯನ್ನು ನೀಡಿತ್ತು. ಆದರೆ ಅದನ್ನು ಈಡೇರಿಸದಿದ್ದರಿಂದ ಚಳವಳಿ ನಡೆಸಬೇಕಾಗಿದೆ.

ತಮಿಳುನಾಡಿನಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕೆಂದು ಬೇಡಿಕೆಯನ್ನು ಮೊದಲ ಬಾರಿಗೆ ಎತ್ತಿದ್ದು ಡಿವೈಎಫ್‌ಐನ ಸ್ಥಾಪನೆಗಿಂತ ಹಿಂದೆ ಇದ್ದ ಅದರ ಪೂರ್ವಜ ಸಂಘಟನೆ. ಸಮಾಜವಾದಿ ಯುವರಂಗ ಎಂಬ ಹೆಸರಿನ ಆ ಸಂಘಟನೆ 1979 ರಲ್ಲೇ ಈ ಕೇಳಿಕೆಯನ್ನು ಮಂಡಿಸಿತ್ತು.

1980 ರಲ್ಲಿ ಎಂ.ಜಿ.ರಾಮಚಂದ್ರನ್ ನೇತೃತದಲ್ಲಿ ಅಧಿಕಾರಕ್ಕೆ ಬಂದಿದ್ದ ಸರಕಾರ ಈ ಬೇಡಿಕೆಯನ್ನು ಮನ್ನಿಸಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ದಾಖಲಾಗಿದ್ದವರಿಗೆ ನಿರುದ್ಯೋಗ ಭತ್ಯೆ ಕೊಡಲು ಆರಂಭಿಸಿತ್ತು, ಆದರೆ, ಮೂರು ವರ್ಷಗಳ ಹಿಂದೆ, ಅಂದರೆ 1994 ರಲ್ಲಿ ಆಗ ಅಧಿಕಾರದಲ್ಲಿದ್ದ ಜಯಲಲಿತ ನೈತೃತ್ವದ ಎಐಡಿಎಂಕೆ ಸರಕಾರ ಈ ಯೋಜನೆಯನ್ನು ರದ್ದುಪಡಿಸಿತ್ತು. ಆಗ ಡಿವೈಎಫ್‌ಐ ಈ ಕ್ರಮವನ್ನು ಬಲವಾಗಿ ಪ್ರತಿಭಟಿಸಿತ್ತು. 1996 ರ ಸಾವ್ರರ್ತಿಕ ಚುನಾವಣೆಗಳ ಪ್ರಚಾರದ ವೇಳೆ, ತಾನು ಅಧಿಕಾರಕ್ಕೆ ಬಂದರೆ ಈ ಯೋಜನೆಯನ್ನು ಪುನಾರಾರಂಭಿಸುವುದಾಗಿ ಡಿಎಂಕೆ ಭರವಸೆ ಕೊಟ್ಟಿತ್ತು.

ಆದರೆ ಅದು ಜಯಶಾಲಿಯಾಗಿ ಅಧಿಕಾರಕ್ಕೆ ಬಂದು 16 ತಿಂಗಳು ಕಳೆದರೂ ನೀರುದ್ಯೋಗಿಗಳನ್ನು ನಿರ್ಲಕ್ಷಿಸಿದೆ. ಅವರಿಗೆ ನಿರುದ್ಯೋಗ ಭತ್ಯೆಯನ್ನು ಕೊಡಲು ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಮೇ ತಿಂಗಳಲ್ಲಿ ತಿರುನಲ್ವೇಲಿಯಲ್ಲಿ ನಡೆದ ಡಿವೈಎಫ್‌ಐ ರಾಜ್ಯ ಸಮ್ಮೇಳನ ತನ್ನ ಆಶ್ವಾಸನೆಯ ಈಡೇರಿಕೆಗೆ ರಾಜ್ಯ ಸರಕಾರದ ಮೇಲೆ ಒತ್ತಡ ತರಲು ಚಳವಳಿ ರೂಪಿಸಲು ನಿರ್ಧರಿಸಲಾಗಿತ್ತು. ಆಗಸ್ಟ 7 ರ ಪಿಕೆಟಿಂಗ್ ರಾಜ್ಯಾದ್ಯಾಂತ ಶಾಂತಿಯುತವಾಗಿ ಪೊಲೀಸರ ಪ್ರಚೋದನೆಯಿಂದಾಗಿ ಹಿಂಸೆ ನಡೆಯಿತು. ಯಾವುದೇ ಕಾರಣವಿಲ್ಲದೆ ಪೊಲೀಸರು ನಡೆಸಿದ ಲಾಠಿ ಪ್ರಹಾರದಿಂದಾಗಿ ತಿರುವೆಟ್ಟೈ ಸಹಿತ ಅನೇಕ ಕಾರ್ಯಕರ್ತರು ಗಾಯಗೊಂಡರು.

ಪೊಲೀಸ್ ದೌರ್ಜನ್ಯಗಳನ್ನು ಪ್ರತಿಭಟಿಸಿ ಆಗಸ್ಟ್ 11 ರಂದು ರಾಜ್ಯಾದ್ಯಂತ ಪ್ರದರ್ಶನಗಳನ್ನು ನಡೆಸಲಾಯಿತು.

ಸ್ಕಾಟ್‌ಲಂಡ್‌ನಲ್ಲಿ ಜನಮತ "ಸ್ವಾಯತ್ತತೆ ಬೇಕು" ಎಂಬುದಕ್ಕೆ ಭಾರಿ ಬೆಂಬಲ

ಲೋಕಸಂಚಾರ

ಶರತ್ ಚಂದ್ರ

ಬ್ರಿಟನ್‌ನಲ್ಲಿ ಸ್ಕಾಟ್‌ಲೆಂಡ್ ಪ್ರಾಂತ್ಯಕ್ಕೆ ಸ್ವಾಯತ್ತತೆ ಮತ್ತು ಅದರದೇ ಆದ ಪಾರ್ಲಿಮೆಂಟ್ ಬೇಕೆ? ಎಂಬ ಪ್ರಶ್ನೆ ಬಗ್ಗೆ ನಡೆದ ಜನಮತ ಸಂಗ್ರಹದಲ್ಲಿ ದೊಡ್ಡ ರೀತಿಯಲ್ಲಿ 'ಬೇಕು' ಎಂಬ ಮತ ವ್ಯಕ್ತವಾಗಿದೆ. ಬ್ರಿಟನ್ನಿನ ಭಾಗವಾಗಿರುವ ಸ್ಕಾಟ್‌ಲೆಂಡ್‌ಗೆ ಸ್ವಾಯತ್ತತೆ ಬೇಕು ಎಂದು ಹಲವು ಸ್ಕಾಟ್ ಪಕ್ಷಗಳು ಒತ್ತಾಯಿಸುತ್ತಿದ್ದವು. ಲೇಬರ್ ಪಕ್ಷ ಸಹ ಈ ಒತ್ತಾಯಕ್ಕೆ ಬೆಂಬಲ ನೀಡಿತ್ತು. ಇದು ಪ್ರಮುಖ ಸಂವಿಧಾನಿಕ ವಿಷಯವಾದ್ದರಿಂದ, ಆ ಬಗ್ಗೆ ಜನಮತ ಸಂಗ್ರಹ ನಡೆಸಲು ನಿರ್ಧರಿಸಲಾಗಿತ್ತು.

ಜನಮತ ಸಂಗ್ರಹದಲ್ಲಿ ಎರಡು ಪ್ರಶ್ನೆಗಳನ್ನು ಹಾಕಲಾಗಿತ್ತು. ಸ್ಕಾಟ್‌ಲೆಂಡ್‌ಗೆ ಪಾರ್ಲಿಮೆಂಟ್ ಬೇಕೆ? ಒಂದು ಪ್ರಶ್ನೆ. ಸ್ಕಾಟ್‌ಲೆಂಡ್ ಪಾರ್ಲಿಮೆಂಟ್‌ಗೆ ತೆರಿಗೆ ವಿಧಿಸುವ ಅಧಿಕಾರ ಬೇಕೆ? ಎರಡು ಪ್ರಶ್ನೆಗಳಿಗೆ 'ಬೇಕು' ಎಂಬ ದೊಡ್ಡ ಪ್ರಮಾಣದ ಉತ್ತರ ಸಿಕ್ಕರೆ, ಮೊದಲನೆಯ ಪ್ರಶ್ನೆಗೆ ಸುಮಾರು 74-3 ಶೇಕಡಾ ಜನ 'ಬೇಕು' ಎಂದಿದ್ದಾರೆ. ಎರಡನೆಯ ಪ್ರಶ್ನೆಗೆ ಸುಮಾರು 63.5 ಶೇಕಡಾ ಜನ 'ಬೇಕು' ಎಂದಿದ್ದಾರೆ.

ಬ್ರಿಟನ್ ಇಂಗ್ಲೆಂಡ್, ಸ್ಕಾಟ್‌ಲೆಂಡ್ ಮತ್ತು ವೇಲ್ಸ್ ಎಂಬ ಮೂರು ಪ್ರಾಂತ್ಯಗಳನ್ನು ಹೊಂದಿದ್ದು, ಕೆಲವು ಶತಮಾನಗಳ ಹಿಂದೆ ಪ್ರತ್ಯೇಕ ರಾಷ್ಟ್ರೀಯತೆ ಹೊಂದಿದ್ದವು. ಲೇಬರ್ ಪಕ್ಷ ರಾಷ್ಟ್ರೀಯತೆ ಆಧಾರಿತ ಸ್ವಯಂ-ನಿರ್ಧಾರ ಇರಬೇಕು ಎಂಬ ನೀತಿಯ ಆಧಾರದ ಮೇಲೆ ಸ್ಕಾಟ್‌ಲೆಂಡ್‌ಗೆ ಪ್ರತ್ಯೇಕ ಪಾರ್ಲಿಮೆಂಟು ಇರಬೇಕು ಎಂದು ಒತ್ತಾಯಿಸುತ್ತಾ ಬಂದಿತ್ತು. ಕನ್ಸರ್ವೇಟಿವ್ ಪಕ್ಷ ಈ ನೀತಿಯನ್ನು ವಿರೋಧಿಸುತ್ತಾ ಬಂದಿತ್ತು. ಈ ರೀತಿ ಪ್ರತ್ಯೇಕ ಪಾರ್ಲಿಮೆಂಟು ರಚಿಸದರೆ, ದೇಶದ ಐಕ್ಯತೆಗೆ ಧಕ್ಕೆ ಬರುವುದು ಎಂದು ಅದರ ನಿಲುವಾಗಿತ್ತು.

ಈ ಜನಾದೇಶಕ್ಕೆ ದೇಶದಾದ್ಯಂತ ಸ್ವಾಗತ ಸಿಕ್ಕಿದ್ದು, ಪ್ರಧಾನ ಮಂತ್ರಿ ತಮ್ಮ ಪ್ರಸ್ತಾವಕ್ಕೆ ಜನ ಭಾರೀ ಬೆಂಬಲ ಕೊಟ್ಟಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ.

ಇದೇ ರೀತಿಯ ಜನಮತ ಸಂಗ್ರಹ ಈ ವಾರ ವೇಲ್ಸ್‌ನಲ್ಲಿ ನಡೆದು ಅಲ್ಲಿ ಸ್ಕಾಟ್‌ಲ್ಯಾಂಡ್‌ನಷ್ಟು ಭಾರೀ ಬಹುಮತ ದೊರೆಯದಿದ್ದರೂ ವೇಲ್‌ಗೆ ಪ್ರತ್ಯೇಕ ಅಸೆಂಬ್ಲಿ 'ಬೇಕು' ಎಂದು 50.3 ಶೇ ಜನ ಮತ ನೀಡಿದ್ದಾರೆ.

ವರ್ಷದ ಕೊನೆಯ ಒಳಗಾಗಿ ಸ್ಕಾಟ್ ಪಾರ್ಲಿಮೆಂಟು ರಚಿಸುವ ಮಸೂದೆ ಪಾರ್ಲಿಮೆಂಟಿನ ಮುಂದೆ ಇಡಲಾಗುವುದು. ಮುಂದಿನ ವರ್ಷ ಮೊದಲ ಸ್ಕಾಟ್ ಪಾರ್ಲಿಮೆಂಟರಿ ಚುನಾವಣೆಗಳನ್ನು ನಡೆಸಲಾಗುವುದು ಎಂದು ಸರ್ಕಾರಿ ವಕ್ತಾರರು ಹೇಳಿದ್ದಾರೆ. ವಿದೇಶಾಂಗ ನೀತಿ, ರಕ್ಷಣೆ ಮುಂತಾದವುಗಳನ್ನು ಬಿಟ್ಟರೆ, ಸ್ಕಾಟ್ ಪಾರ್ಲಿಮೆಂಟು ಹಲವಾರು ಜನಗಳಿಗೆ ನೇರವಾಗಿ ಪರಿಣಾಮ ಬೀರುವ ವಿಷಯಗಳ ಬಗ್ಗೆ ಕಾನೂನು ರಚಿಸುವ ಅಧಿಕಾರ ಹೊಂದಲಿದೆ

'ಸಿಡಿಗುಂಡು' ನಿಷೇಧಕ್ಕೆ ಅಮೆರಿಕಾದ ಕಾಲ್ತೊಡಕು

'ನಮ್ಮನ್ನ ಇವರೆಲ್ಲ ಕೇಡಿಗಳು ಅಂತಾ ಇದ್ದಾರೆ. ಇದು ಸರಿಯಲ್ಲ' ಎಂದು ಅಮೇರಿಕಾದ ಮೂರು ಸೇನಾ ವಿಭಾಗಗಳು ಜಂಟಿ ಮುಖ್ಯಸ್ಥರು ಕಳೆದ ವಾರ ಹೇಳ ಬೇಕಾಯಿತು. ಈತನಿಗೇಕಪ್ಪಾ ಈ ಅವಸ್ಥೆ ಎಂದಿರಾ? ಕೆನಡಾದ ನಾಯಕತ್ವದಲ್ಲಿ ಓಸ್ಲೊದಲ್ಲಿ ನಡೆಯುತ್ತಿರುವ 'ಲ್ಯಾಂಡ್ ಮೈನ್'ಗಳನ್ನು ಅಂದರೆ ಭೂಮಿಯೊಳಗೆ ಗುಂಡು ಹುಗಿದಿಡುವುದನ್ನು ಪೂರ್ಣವಾಗಿ ನಿಷೇಧಿಸಲು ಸೇರಿರುವ ನೂರು ದೇಶಗಳ ಪ್ರತಿನಿಧಿಗಳು 'ಅಮೆರಿಕಾ ಕೇಡಿ ದೇಶ' ಎಂದು ಹಂಗಿಸುತ್ತಿದ್ದಾರೆಂದು ಅವರ ಅಳಲು.

ಈ 'ಸಿಡಿಗುಂಡು' ಗಳು ಸಾಮಾನ್ಯವಾಗಿ 'ವೈರಿ'ಗಳ ಪಡೆಗಳು ಒಂದು ಪ್ರದೇಶದಲ್ಲಿ ಆಕ್ರಮಣ ಮಾಡುವಾಗ, ಆ ಪ್ರದೇಶದ ರಕ್ಷಣೆ ಮಾಡಲು ಬಳಸುವ ಅಸ್ತ್ರ. ಇದು ಯಾವ ವಸ್ತುವಾದರೂ ತಗಲಿದರೆ ಸ್ಫೋಟಗೊಂಡು, ತಗಲಿದ ವಸ್ತುವನ್ನು ನಾಶಮಾಡುತ್ತದೆ. ಮನುಷ್ಯನಾಗಲಿ, ಟ್ಯಾಂಕ್‌ಲಾಗಲಿ. ಇದನ್ನು ಎಲ್ಲಾ ಯುದ್ಧಗಳಲ್ಲಿ ಬಳಸಲಾಗುತ್ತದೆ, ವೈರಿಯ ಆಕ್ರಮಣದ ವಿರುದ್ಧ ರಕ್ಷಣೆಗೆ.

ಆದರೆ ಯುದ್ಧವಾದ ಮೇಲೆ ನಾಶವಾಗದೆ ಉಳಿದ ಇಂತಹ 'ಸಿಡಿಗುಂಡು'ಗಳನ್ನು ನಾಶಮಾಡಲು ಯುದ್ಧದಲ್ಲಿ ತೊಡಗಿದ ಪಕ್ಷಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಸಾಮಾನ್ಯವಾಗಿ 'ಲ್ಯಾಂಡ್‌ಮೈನ್'ಗಳನ್ನು ಮಣ್ಣಿನಲ್ಲಿ ಹುದುಗಿಸಿ ಇಡುವುದರಿಂದ ಕೆಲವೊಮ್ಮೆ ಯುದ್ಧವಾದ ಹಲವು ವರ್ಷಗಳ ವರೆಗೆ ಈ 'ಸಿಡಿಗುಂಡು'ಗಳು ಜೀವಂತವಾಗಿರುವವು. ಅಕಸ್ಮಾತ್ತಾಗಿ ಯಾರಾದರೂ ನಡೆಯುವಾಗ ಅದರ ಮೇಲೆ ಕಾಲಿಟ್ಟರೆ ವರ್ಷಗಳ ನಂತರ ಸ್ಫೋಟಿಸುವುದುಂಟು. ಈ 'ಲ್ಯಾಂಡ್‌ಮೈನ್'ಗಳು ಈಗ ವಿಶ್ವಾದ್ಯಂತ ಒಂದು ಸಮಸ್ಯೆಯಾಗಿವೆ. ಏಕೆಂದರೆ ಯುದ್ಧ ಸಮಯದ ದೇಶಗಳ ನಿರ್ಜನ ಪ್ರದೇಶಗಳಾದ ಗಡಿಗಳಲ್ಲಿ ಮಾತ್ರವಲ್ಲ, ಆಂತರಿಕ ಯುದ್ಧಗಳಲ್ಲಿ ಸರ್ಕಾರ ವಿರೋಧಿ ಗೆರಿಲ್ಲಾ ಹೋರಾಟಗಳನ್ನು ಲ್ಯಾಂಡ್‌ಮೈನ್‌ಗಳನ್ನು ಬಳಸುವುದು ಸಾಮಾನ್ಯವಾಗಿ ಬಿಟ್ಟಿದೆ. ಸಂಘರ್ಷ ಮುಗಿದ ನಂತರ 'ಸಿಡಿಗುಂಡು' ಗಳನ್ನು ಅದರ ಪಾಡಿಗೆ ಬಿಟ್ಟ ಬಿಡುವುದು ಅಷ್ಟೇ ಸಾಮಾನ್ಯ.

ಎರಡನೇ ಮಹಾಯುದ್ಧದ ಕಾಲದ 'ಲ್ಯಾಂಡ್‌ಮೈನ್' ಗಳು ಅಲ್ಲಲ್ಲಿ ಸಿಡಿಯುವುದು, ಶ್ರೀಲಂಕಾದ ಸರ್ಕಾರ-ಎಲ್‌ಟಿಟಿಇ ನಡುವಣ ಯುದ್ಧದಲ್ಲಿನ 'ಸಿಡಿಗುಂಡು'ಗಳು ಸಿಡಿಯುವುದು ಇದಕ್ಕೆ ಉದಾಹರಣೆಗಳು. 68 ದೇಶಗಳಲ್ಲಿ ಸುಮಾರು ಇಂತಹ ಹತ್ತು ಕೋಟಿ 'ಮೈನ್'ಗಳು ತಮ್ಮ 'ಬಲಿಪಶು'ಗೆ ಕಾಯುತ್ತಿವೆ ಎನ್ನಲಾಗಿದೆ. ಜಗತ್ತಿನಾದ್ಯಂತ ಇಂತಹ 'ಮೈನ್'ಗಳಿಗೆ ಪ್ರತಿವಾರ 500 ಜನ ಬಲಿಯಾಗುತ್ತಾರೆ ಎನ್ನಲಾಗಿದೆ. ಇವರು ಯಾವಾಗಲೂ ಅಮಾಯಕ ನಾಗರೀಕರಾಗಿರುತ್ತಾರೆ.

ಈ ಸಮಸ್ಯೆ ಬಗೆಹರಿಸಲು, 'ಲ್ಯಾಂಡ್ ಮೈನ್'ಗಳ ಬಳಕೆ ವಿರುದ್ಧ, ಅವುಗಳನ್ನು ಬಳಸುವುದರ ಬಗ್ಗೆ ನಿಷೇಧ ಬಗೆಗೆ ಅಂತರ್ರಾಷ್ಟ್ರೀಯ ಒಪ್ಪಂದ ಒಂದರಿಂದ ಸಾಧ್ಯ ಎಂಬ ಅಭಿಪ್ರಾಯದ ಮೇಲೆ ಕೆನಡಾದ ನಾಯಕತ್ವದಲ್ಲಿ ಸುಮಾರು ನೂರು ದೇಶಗಳು ಮಾತುಕತೆ ಆರಂಭಿಸಿವೆ. ಇದನ್ನು ಅಮೆರಿಕ ವಿರೋಧಿಸಿತ್ತು. ಆ ವಿರೋಧ ಲೆಕ್ಕಿಸದೆ ಈ ಒಪ್ಪಂದದ ಬೆಂಬಲಿಗರು, ಮುಂದೆ ಹೋದದ್ದರಿಂದ ಅಮೆರಿಕ ಈಗ ಈ ಒಪ್ಪಂದವನ್ನು ಅರ್ಥಹೀನಗೊಳಿಸುವ ಇತರ ಪ್ರಯತ್ನಗಳಲ್ಲಿ ತೊಡಗಿವೆ. ಈ ಸಂದರ್ಭದಲ್ಲೇ ಅಮೆರಿಕದ ಸೇನಾ ವಿಭಾಗಗಳ ಜಂಟಿ ಮುಖ್ಯಸ್ಥ 'ನಾವು ಕೇಡಿಗಳಲ್ಲ' ಎಂದು ಹೇಳಬೇಕಾದ್ದು.

ಒಂದನೆಯದಾಗಿ ತಮ್ಮನ್ನು ತಾವೇ ನಾಶಮಾಡುವ 'ಚೂಟಿ' ಗುಂಡುಗಳನ್ನು ಈ ಒಪ್ಪಂದದ ಹೊರಗಿಡಬೇಕೆಂದು ಯಾವುದೇ ರೀತಿಯ ಸಿಡಿಗುಂಡುಗಳಿಗೆ (ಅದೂ ಆ ತಂತ್ರಜ್ಞಾನ ಎಲ್ಲರ ಬಳಿ ಇಲ್ಲದಿರುವಾಗ) ರಿಯಾಯಿತಿ ತೋರುವ ಒಪ್ಪಂದವನ್ನು ಹೆಚ್ಚಿನ ದೇಶಗಳು ತಿರಸ್ಕರಿಸಿದವು ಎಂಬ ಆತಂಕದ ಆಧಾರದ ಮೇಲೆ ಈ ಸಲಹೆ ತಳ್ಳಿ ಹಾಕಲಾಗಿದೆ. ಎರಡನೆಯದಾಗಿ ಕೊರಿಯಾದಲ್ಲಿ ಅಮೆರಿಕ ಹಾಕಿರುವ ಮೈನ್‌ಗಳನ್ನು ಈ ಒಪ್ಪಂದದಿಂದ ಹೊರಗಿಡುವಂತೆ ಪ್ರಯತ್ನಿಸಲಾಯಿತು. ಮೂರನೆಯದಾಗಿ ಒಂಭತ್ತು ವರ್ಷಗಳವರೆಗೆ ಕೊರಿಯ ಅಥವಾ ಎಲ್ಲಾ ಕಡೆ 'ಮೈನ್' ಗಳಿಗೆ ರಿಯಾಯಿತಿ ಕೊಡುವಂತೆ ಒಪ್ಪಂದ ರೂಪಿಸುವಂತೆ ಪ್ರಯತ್ನಿಸಲಾಯಿತು. ಈ ಎಲ್ಲಾ ಅಮೆರಿಕದ ಪ್ರಯತ್ನಗಳನ್ನು ಈವರೆಗೆ ಓಸ್ಲೊದಲ್ಲಿ ಸೇರಿರುವ ಪ್ರತಿನಿಧಿಗಳು ತಿರಸ್ಕರಿಸಿದ್ದಾರೆ. ಆದರೆ ಅಮೆರಿಕ ಯಥಾಪ್ರಕಾರ ಎಲ್ಲಾ ಅಂತರ್ರಾಷ್ಟ್ರೀಯ ಒಪ್ಪಂದಗಳನ್ನು ತನ್ನ ಪ್ರಯೋಜನ, ಯಜಮಾನಿಕೆಗೆ ಬಳಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಈಗ ಹೇಳಿ 'ಅಮೆರಿಕ ಈ ಒಪ್ಪಂದ ಕೆಡಿಸಲು ತೊಡಗಿರುವ ಕೇಡಿ' ಅಲ್ಲವೇ?

ಅಮೆರಿಕಾದಲ್ಲಿ ಮೇ ದಿನಾಚರಣೆ?!

ಏನು ವಿಶೇಷ ಅಂದಿರಾ? ಕಾರ್ಮಿಕ ವರ್ಗ ಇದ್ದಲ್ಲಿ, ಅದೂ ಮೇ ದಿನಾಚರಣೆಯ ಹುಟ್ಟುನಾಡಿನಲ್ಲಿ ಮೇ ದಿನಾಚರಣೆ ವಿಶೇಷ ಅಂದಿರಾ?

ಹೌದು ಅಮೆರಿಕದಲ್ಲಿ 1997 ರ ಮೇ ದಿನಾಚರಣೆ ವಿಶೇಷವೇ. ಅಮೆರಿಕದಲ್ಲಿ 50 ರ ದಶಕದ ಅಧಿಭಾಗದ 'ಕಮ್ಯುನಿಸ್ಟ್-ವಿರೋಧಿ ಮೆಕಾರ್ಥಿವಾದ' ದ ಫಲವಾಗಿ ಮೇ ದಿನಾಚರಣೆಯನ್ನು ಕಾನೂನು-ವಿರೋಧಿ ಎಂದು ಘೋಷಿಸಲಾಗಿತ್ತು. ಅಂದಿನಿಂದ ಈ ವರ್ಷದ ವರೆಗೆ ಅಲ್ಲೊಂದು ಇಲ್ಲೊಂದು ಮೇ ದಿನಾಚರಣೆ ನಡೆಸುವ ಪ್ರಯತ್ನ ನಡೆದರೂ ಅದು ಹೆಚ್ಚು ಸಫಲವಾಗಲಿಲ್ಲ.

1928 ರ ಅಮೆರಿಕದ ಪಾರ್ಲಿಮೆಂಟಿನ ಒಂದು ನಿರ್ಧಾರವನ್ನು ಗೋಣು ಆಡಿಸಿ ಪಾಲಿಸಿದ ಅಮೆರಿಕದ ಕೇಂದ್ರ ಟ್ರೇಡ್ ಯೂನಿಯನ್ ನಾಯಕತ್ವದ ನಿರ್ಧಾರದಿಂದಾಗಿ, ಆ ದೇಶದಲ್ಲಿ ಮೇ ದಿನ ಕಾರ್ಮಿಕರ ದಿನವಾಗಿ ಉಳಿದಿರಲಿಲ್ಲ, ಆ ದಿನವು 'ಮಕ್ಕಳ ಆರೋಗ್ಯ' ದಿನಾಚರಣೆಯಾಗಿ ಪರಿವರ್ತಿಸಲಾಯಿತು. ಆದರೂ 50 ದಶಕದ ಆರಂಭದವರೆಗೆ ಅಮೆರಿಕದ ಸಮರಶೀಲ ಟ್ರೇಡ್ ಯೂನಿಯನ್‌ಗಳು, ಎಡಪಂಥೀಯ ಕಾರ್ಮಿಕರ ಮೇ ದಿನಾಚರಣೆಯ ಸಂಪ್ರದಾಯ ಉಳಿಸಿಕೊಂಡು ಬಂದಿದ್ದರು.

ಇಡೀ ಜಗತ್ತಿನಾದ್ಯಂತ ಹೆಚ್ಚಿನ ದೇಶಗಳಲ್ಲಿ ಮೇ ದಿನ ಕಾರ್ಮಿಕರ ದಿನವಾಗಿ ಆಚರಿಸಲಾಗುತ್ತದೆ. ಆ ದಿನ ರಜೆ ಕೂಡಾ. ಆದರೆ ಅಮೆರಿಕದಲ್ಲಿ ಅದು ರಜಾ ದಿನವಲ್ಲ. ಅದರ ಬದಲು ಸೆಪ್ಟೆಂಬರ್ 2 ನ್ನು ಕಾರ್ಮಿಕ ದಿನವಾಗಿ ಆಚರಿಸಲಾಗುತ್ತದೆ ಎಂದರೆ ಯಾರಿಗೂ ಆಶ್ಚರ್ಯವಾಗಬಹುದು. ಆದರೆ ಅದು ನಿಜ.

50 ರ ದಶಕದ 'ಮೆಕಾರ್ಥಿವಾದ'ದ ಅಮೆರಿಕದ ವಿರೋಧಿ 'ಕಾರ್ಯಚರಣೆ' ಹೆಸರಿನಲ್ಲಿ ದಮನ ಮಾಡಲಾದ ಮೇ ದಿನ ಸಮಿತಿಗಳು ಕೆಲವೇ ಕೆಲವು ವರ್ಷಗಳಲ್ಲಿ ಅವನ್ನು ಒಂದು ಮೇ ದಿನದ ರ್‍ಯಾಲಿ ನಡೆಸಿದರು. 1986 ರಲ್ಲಿ ಮೇ ದಿನಾಚರಣೆಯ ಶತಮಾನೋತ್ಸವ ರ್‍ಯಾಲಿ, 1993 ರ ಮೇ ದಿನಾಚರಣೆಯ ರ್‍ಯಾಲಿ(ಎರಡೂ ನ್ಯೂಯಾರ್ಕ್‌ನಲ್ಲಿ ನಡೆದವು) ಗಮನಾರ್ಹವಾಗಿತ್ತು.

ಈ ವರ್ಷ ನ್ಯೂಯಾರ್ಕ್‌ನಲ್ಲಿ ನಡೆದ ಮೇ ದಿನದ ರ್‍ಯಾಲಿಯಲ್ಲಿ ಹಲವಾರು ಯೂನಿಯನ್ನುಗಳು, ಅಮೆರಿಕದಲ್ಲಿ ಬದಲಾವಣೆಯ ಗಾಳಿ ಬೀಸಲಾಗಿದೆ ಎನ್ನುವುದರ ದ್ಯೋತಕ. ಮೇ ದಿನದ ಹುಟ್ಟು ನಾಡಿನಲ್ಲಿ, ಮೇ ದಿನ ಇಡೀ ಕಾರ್ಮಿಕ ವರ್ಗ ದಿನಾಚರಣೆಯಾಗುವ ದಿನ ದೂರವಿಲ್ಲ!

ಝೈರೆ ಮಾಜಿ ಸರ್ವಾಧಿಕಾರಿ ಮೊಬುಟು ನಿಧನ

ಇತ್ತೀಚೆಗಷ್ಟೆ ಪದಚ್ಯುತರಾಗಿದ್ದ ಝೈರೆ(ಈಗ ಕಾಂಗೋ) ಮಾಜಿ ಸರ್ವಾಧಿಕಾರಿ ಮೊಬುಟು ನಿಧನ ಹೊಂದಿದ್ದಾರೆ. ಆತನ ವಿರುದ್ಧ ಭಾರಿ ದಂಗೆ ನಡೆದ ನಂತರ, ಮೊರಾಕ್ಕೊದ ರಾಜಧಾನಿಗೆ ಪಲಾಯನ ಮಾಡಿದ್ದ ಆತ ಅಲ್ಲೇ ನೆಲೆಸಿದ್ದ.

1965 ರಲ್ಲಿ ಆಗ ಕಾಂಗೋ ಎಂದು ಕರೆಯಲಾಗುತ್ತಿದ್ದ ದೇಶದಲ್ಲಿ ಅಮೆರಿಕ ಬೆಂಬಲದಿಂದ ಮಿಲಿಟರಿ ಕ್ಷಿಪ್ರ ಕ್ರಾಂತಿಯಲ್ಲಿ ಅಧಿಕಾರಕ್ಕೆ ಬಂದು ಮೂರು ದಶಕಗಳ ಕಾಲ ಸರ್ವಾಧಿಕಾರ ನಡೆಸಿದ ಈತನ ಆಳ್ವಿಕೆಯಲ್ಲಿ ಕಾಂಗೋ ಇನ್ನಷ್ಟು ಬಡವಾಯಿತು. ದೇಶದ ಶ್ರೀಮಂತ ಗಣಿ ಕೈಗಾರಿಕೆ(ಯುರೇನಿಯಂ) ಸೇರಿದಂತೆ, ಎಲ್ಲವನ್ನು ತನ್ನ ಖಾಸಗಿ ಸಂಪತ್ತು ಬೆಳೆಸಲು ಬಳಸಿದ ಈತನ ದುರಾಡಳಿತದ ವಿರುದ್ಧ ಇತ್ತೀಚೆಗೆ ದಂಗೆ ಎದ್ದು, 7 ತಿಂಗಳ ಆಂತರಿಕ ಸಮರದ ನಂತರ ಆತನನ್ನು ಪದಚ್ಯುತಗೊಳಿಸಲಾಗಿತ್ತು.

ಬೇಡಿಕೆಗಳ ಈಡೇರಿಕೆಗಾಗಿ ಕಾರ್ಮಿಕರ ಮೆರವಣಿಗೆ

ಮಂಡ್ಯ: ಜಿಲ್ಲೆಯ ಸಾವಿರಾರು ಅಸಂಘಟಿತ ಕಾರ್ಮಿಕರಾದ ಬೀಡಿ, ರೈಸ್ ಮಿಲ್, ಸಾಮಿಲ್, ವಿದ್ಯುತ್ ಹಾಗೂ ಕೈ ಮಗ್ಗ, ಕಟ್ಟಡ ಕೆಲಸ, ಮೋಟಾರು ವಾಹನ ಚಾಲಕರು ಕ್ಲೀನರುಗಳು, ಕಲ್ಲು ಹೊಡೆಯುವವರು, ಹೋಟೆಲ್, ಅಂಗಡಿ, ಗ್ರಾನೈಟ್, ಹಲವಾರು ಸಣ್ಣ ಕೈಗಾರಿಕೆಗಳಲ್ಲಿ ಅಲ್ಲದೇ ಸಕ್ಕರೆ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ನ್ಯಾಯಬದ್ಧ ಸೌಲಭ್ಯಗಳನ್ನು ಕೊಡದೆ, ಮಾಲೀಕರುಗಳು ಕಾರ್ಮಿಕರನ್ನು ಶೋಷಿಸುತ್ತಿರುವುದನ್ನು ಪ್ರತಿಭಟಿಸಿ ಆಗಸ್ಟ 25 ರಂದು ಮಧ್ಯಾಹ್ನ 12 ಗಂಟೆಗೆ ಸಿಲ್ವರ್ ಜ್ಯುಬಿಲಿ ಪಾರ್ಕಿನಿಂದ ನೂರಾರು ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಮೆರವಣಿಗೆ ಹೊರಟು ಕೆಳಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

1. ಬೀಡಿ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಟ ಕೂಲಿ 40 ರೂ. ಗಳು(ಸಾವಿರ ಬೀಡಿ ಕಟ್ಟಲು) ಜಾರಿಗೊಳಿಸಬೇಕು.
2. ಬೀಡಿ ಕಾರ್ಮಿರಿಗೆ ಸಂಬಂಧಿಸಿದ ವಿವಿಧ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ದಾಖಲೆಗಳನ್ನು ಇಟ್ಟು, ಗುರುತಿನ ಚೀಟಿ, ಸಂಬಳದ ಚೀಟಿ(ವೇಜ್ ಸ್ಲಿಪ್)ಗಳನ್ನು ಕೊಡಿಸಬೇಕೆಂದು ಒತ್ತಾಯಿಸಿ.
3. ಗ್ರಾಮ ಪಂಚಾಯ್ತಿ ಮತ್ತು ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕು.
4. ಸಕ್ಕರೆ ಕಾರ್ಖಾನೆಗಳಲ್ಲಿ ಕಾರ್ಖಾನೆ ಪ್ರಾರಂಭ ಮಾಡದಿರುವುದರಿಂದ ಸೀಸನಲ್ ನೌಕರರಿಗೆ ತುಂಬಾ ಅನ್ಯಾಯವಾಗಿದ್ದು ಹಂಗಾಮಿ ಮತ್ತು ಗುತ್ತಿಗೆ ಕಾರ್ಮಿಕರಿಗೆ ಕನಿಷ್ಟ ವೇತನ, ಇತರ ಎಲ್ಲಾ ಸೌಲಭ್ಯಗಳನ್ನು ನೀಡಬೇಕು.
5. ಗ್ರಾನೈಟ್, ಸಕ್ಕರೆ ಇತರೆ ಉದ್ದಿಮೆಗಳ ಕಾರ್ಮಿಕರಿಗೆ ನಿಗದಿಯಾದ ದಿನದಂದು ಪ್ರತಿ ತಿಂಗಳು ಸಂಬಳ ಕೊಡಬೇಕು.
6. ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನದ ಜಾರಿ.

ಜಿಲ್ಲಾಧಿಕಾರಿಗಳು ಸಿಐಟಿಯು ಜಿಲ್ಲಾ ಸಮಿತಿಯವರನ್ನು ಮತ್ತೊಂದು ಬಾರಿ ಕರೆದು ಚರ್ಚಿಸಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವ ಭರವಸೆಯನ್ನು ನೀಡಿದರು.

ಮೆರವಣಿಗೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಮೋಹನ್ ಕುಮಾರ್, ವರಲಕ್ಷ್ಮಿ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಎಸ್.ಶಂಕರಯ್ಯ, ಜಿಲ್ಲಾ ನಾಯಕರುಗಳಾದ ಹನುಮಂತು, ಬೋರಯ್ಯ.ಕೆ. ರಾಮಕೃಷ್ಣ.ಜಿ, ಶಮೀರ್, ಷಹಜಾನ್, ಚನ್ನಪ್ಪ ವಹಿಸಿದ್ದರು.

ರಾಷ್ಟ್ರೀಯ ಮಟ್ಟದ ಕನಿಷ್ಟ ವೇತನಕ್ಕಾಗಿ ಬೀಡಿ ಕೆಲಸಗಾರರ ಸಂಘದ ಒತ್ತಾಯ

ಬಂಟ್ವಾಳ ತಾಲ್ಲೂಕು ಬೀಡಿ ಕೆಲಸ ಗಾರರ ಸಂಘ(ಸಿಐಟಿಯು)ದ 17ನೇ ವಾರ್ಷಿಕ ಮಹಾಸಭೆಯ ಆಗಸ್ಟ್ 10 ರಂದು ಬಂಟ್ವಾಳದ ವೈಎಸ್ ಕಾಂಪ್ಲೆಕ್ಸ್‌ನಲ್ಲಿ ಬಿ.ಪೂವಯ್ಯಾ ಬಂಗೇರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾಯರು ಬೀಡಿ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಮಂದಿ ಕಾರ್ಮಿಕರಿಗೆ ದೇಶಾದ್ಯಂತ ವಿಭಿನ್ನ ರೀತಿಯ ಮಜೂರಿಗಳಿದ್ದು ಬೀಡಿ ಕೈಗಾರಿಕೆಯು ಕಡಿಮೆ ವೆಚ್ಚದಲ್ಲಿ ತಯಾರಾಗುವ ರಾಜ್ಯಗಳಿಗೆ ಪಲಾಯನ ಗೊಳ್ಳುವ ಅಪಾಯಕಾರಿ ಸನ್ನಿವೇಶಗಳಿವೆ ಎಂದು ಹೇಳಿ ದೇಶಾದ್ಯಂತ ಏಕರೀತಿಯ ಕನಿಷ್ಟಕೂಲಿ ಮತ್ತು ದೇಶವ್ಯಾಪಕವಾಗಿ ಬೀಡಿ-ಸಿಗರ್ ಕಾನೂನಿನ ಜಾರಿಗೊಳಿಸ ಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸಿದರು.

ಬೀಡಿ ಕಾರ್ಮಿಕ ಸಂಘದ ಹಿರಿಯ ಮುಖಂಡರಾದ ಮೋನಪ್ಪ ಸಫಲ್ಯ ಮತ್ತು ಸಿಪಿಐ(ಎಂ)ನ ಬಂಟ್ವಾಳ ತಾಲ್ಲೂಕು ಕಾರ್ಯದರ್ಶಿ ಬಿ.ವಾಸುಗಟ್ಟಿಯವರು ಸಭೆಯಲ್ಲಿ ಮಾತನಾಡಿದರು.

ಸಂಘದ ಅಧ್ಯಕ್ಷರಾಗಿ ಬಿ.ವಾಸುಗಟ್ಟಿ, ಉಪಾಧ್ಯಕ್ಷರುಗಳಾಗಿ ಬಿ.ನಾರಾಯಣ ಮತ್ತು ಶ್ರೀಮತಿ ವಿಮಲ, ಪ್ರಧಾನ ಕಾರ್ಯ ದರ್ಶಿಯಾಗಿ ಬಿ.ಸಂಜೀವ ಬಂಗೇರ, ಸಹಾಯಕ ಕಾರ್ಯದರ್ಶಿಯಾಗಿ ವಿ. ರಾಮಣ್ಣ ಮತ್ತು ಶ್ರೀಮತಿ ಗಂಗಮ್ಮ, ಕೋಶಾಧಿಕಾರಿಯಾಗಿ ಬಿ.ಪೂಯ್ಯ ಬಂಗೇರ ಆಯ್ಕೆಗೊಂಡರು.

ಬೀಡಿ ಕಾರ್ಮಿಕರಿಂದ ಭವಿಷ್ಯ ನಿಧಿ ವಂತಿಗೆಯು ವಸೂಲಾಗುತ್ತಿದ್ದರೂ ಹಲವು ವರ್ಷಗಳಿಂದ ಭವಿಷ್ಯ ನಿಧಿ ಇಲಾಖೆಯು ವಂತಿಗೆಯ ರಶೀದಿಯನ್ನು ನೀಡದೆ ಇರುವ ನೀತಿಯನ್ನು ಸಭೆ ಖಂಡಿಸಿ ಕೂಡಲೇ ಬೀಡಿ ಕಾರ್ಮಿಕರಿಂದ ವಸೂಲಾದ ಭವಿಷ್ಯ ನಿಧಿ ಹಾಕ್ಕೆ ರಶೀದಿ ಪಾವತಿಸಬೇಕೆಂದು ಆಗ್ರಹಿಸಿದೆ.

ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕೆ ಆಗ್ರಹ

ಹಾವೇರಿ: ತಾಲ್ಲೂಕಿನ ಗೌರಾಪುರ, ಕಬ್ಬೂರ, ಕಬ್ಬೂರ ತಾಂಡ ಅಗಡಿ, ಬೆನಕನ ಹಳ್ಳಿ, ಹೊಸೂರು ತಾಂಡೆ, ಗಣಜೂರು, ದಿಡಗೂರು, ದೇವಗಿರಿ, ತಿಮ್ಮಾಪೂರ, ನಜೀಕಲಕಮಾಪೂರ, ಕರಿಮತ್ತಿಹಳ್ಳಿ ಮೊದಲಾದ ಗ್ರಾಮಗಳ ನೂರಾರು ಭೂಹೀನ ಕೃಷಿಕೂಲಿಕಾರರು ಮತ್ತು ಬಡರೈತರು ಇಂದು ನಗರದಲ್ಲಿ ಮೆರವಣಿಗೆ ಮಾಡಿ ತಾವು ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯನ್ನು ಸಕ್ರಮಗೊಳಿಸಿ ತಮಗೆ ಪಟ್ಟಾ ನೀಡಬೇಕೆಂದು ಒತ್ತಾಯಿಸುವ ಮನವಿಯನ್ನು ತಾಲ್ಲೂಕು ತಹಶೀಲ್ದಾರರ ಮೂಲಕ ಮುಖ್ಯ ಮಂತ್ರಿ ಜೆ.ಹೆಚ್.ಪಟೇಲರಿಗೆ ಸಲ್ಲಿಸಿದರು. ಕಳೆದ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಸರ್ಕಾರ ಕೆಲವು ವರ್ಷಗಳ ಹಿಂದೆ ಸ್ಥಳ ಪರಿಶೀಲನೆ ನಡೆಸದೆ ಸಾರಾಸಗಟಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಿದೆ, ಅರಣ್ಯ ಇಲಾಖೆಯವರು ದಬ್ಬಾಳಿಕೆ ಮಾಡಿ, ಬೆಳೆದ ಪೈರನ್ನು ನಾಶಮಾಡಿ ಸದರಿ ಭೂಮಿಯಲ್ಲಿ ನೀಲಗಿರಿ ಮೊದಲಾದ ಸಸಿಗಳನ್ನು ನೆಟ್ಟು ಆ ಭೂಮಿಯನ್ನು ನಂಬಿಕೊಂಡಿದ್ದ ಭೂಹೀನ ಬಡವರನ್ನು ಬೀದಿಪಾಲು ಮಾಡಲಾಗಿದೆ. ಗೌರಾಪೂರ ಮೊದಲಾದ ಗ್ರಾಮಗಳ ಕೂಲಿಕಾರರ ಮೇಲೆ ಹಾಕಲಾದ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಅಕ್ರಮ ಸಕ್ರಮಗೊಳಿಸುವ 50 ನಂಬರ ಫಾರ್ಮ್ ತುಂಬಲು ಅವಧಿಯನ್ನು ವಿಸ್ತರಿಸಬೇಕೆಂದೂ ಒತ್ತಾಯಿಸಲಾಗಿದೆ.

ಸಭೆಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ನಿತ್ಯಾನಂದ ಸ್ವಾಮಿ, ಫಕೀರಪ್ಪ ಹೋತನಹಳ್ಳಿ, ವಿಶ್ವನಾಥ ತುಪ್ಪದ ಮತ್ತು ರುದ್ರಪ್ಪ ಜಾಬಿನ ಮಾತನಾಡಿದರು. ಹೊನ್ನಪ್ಪ ಹೋಜನವರ, ಸಹದೇವಪ್ಪ ಕರಬಣ್ಣನವರ, ಚೆನ್ನಬಸಪ್ಪ ಕರಿಗಾರ, ನಾಗಪ್ಪ ಲಮಾಣಿ, ಗೋಣೆಪ್ಪ ಕಾಡಿಗೇರ ಇಮಾಂಬಾಬ ಸಿರ್ಸಿ,ಯಲ್ಲಪ್ಪ ಆಲಗೇರಿ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಸಮಸ್ಯೆಗಳ ಬಗ್ಗೆ ಹೇಳಿದರಷ್ಟೇ ಸಾಕೆ?

ವಿಶೇಷ ಸಂಸದ್ ಅಧಿವೇಶನದ ಬಗ್ಗೆ ಸುರ್ಜಿತ್

ಇತ್ತೀಚೆಗೆ ಸಂಸತ್ತಿನ ಐದು ದಿನಗಳ ವಿಶೇಷ ಅಧಿವೇಶನ ಒಂದು ಹೊಸ ದಾಖಲೆ ಸ್ಥಾಪಿಸಿದೆಯಂತೆ. ಲೋಕಸಭೆಯಲ್ಲಿ ಸತತ 62 ಗಂಟೆಗಳ ಕಾಲ ನಡೆದ ಚರ್ಚೆಯಲ್ಲಿ 215 ಸದಸ್ಯರು ಭಾಗವಹಿಸಿದರು. ರಾಜ್ಯಸಭೆಯಲ್ಲೂ ಇಂತಹುದೇ ಚರ್ಚೆ ನಡೆಯಿತು. ಸ್ವಾತಂತ್ರ್ಯದ ಸ್ವರ್ಣಜಯಂತಿ ಆಚರಣೆಯ ಸಂದರ್ಭದಲ್ಲಿ ಇದನ್ನು ಏರ್ಪಡಿಸಲಾಗಿತ್ತು. ಒಂದು ರೀತಿಯಲ್ಲಿ ಇದು ಆರೋಗ್ಯಕರ ಲಕ್ಷಣ, ಏಕೆಂದರೆ ಜನತಾ ಪ್ರತಿನಿಧಿಗಳು ದೇಶದ ಸಮಸ್ಯೆಗಳು ಹಾಗೂ ದೇಶದ ಇತಿಹಾಸ ಮತ್ತು ಭವಿಷ್ಯದ ಬಗ್ಗೆ ತೀವ್ರ ಆಸಕ್ತಿಯನ್ನು ತೋರ್ಪಡಿಸಿದರು. ಆದರೆ ಸಮಸ್ಯೆಯ ಅರಿವಷ್ಟೇ ಸಾಕೆ? ಸಾಲದು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು.

ಪ್ರಧಾನ ಮಂತ್ರಿಗಳು ಈ ಚರ್ಚೆಯ ಸಮಾರೋಪಮಾಡಿದರು. ಈ ವಿಶೇಷ ಅಧಿವೇಶನ ಒಂದು ನಿರ್ಣಯವನ್ನು ಅಂಗೀಕರಿಸಿತು. ಆದರೆ ಪ್ರಧಾನಿಗಳ ಭಾಷಣವಾಗಲೀ, ನಿರ್ಣಯವಾಗಲೀ ಸಾರ್ವತ್ರಿಕವಾಗಿ ಹಲವು ವಿಷಯಗಳನ್ನು ಹೇಳಿದರೂ ನಿರ್ದಿಷ್ಟವಾಗಿ ಏನನ್ನೂ ಹೇಳಲಿಲ್ಲ. ಆದ್ದರಿಂದ ಇವು ರಾಷ್ಟ್ರೀಯ ಪುನರ್ರಚನೆಯಲ್ಲಿ ಜನಗಳನ್ನು ಅಣಿನೆರೆಸುವಲ್ಲಿ ಏನಾದರೂ ಪ್ರಯೋಜನಕ್ಕೆ ಬರುತ್ತದೆ ಎಂದು ನಿರೀಕ್ಷಿಸುವ ಸಾಧ್ಯವಿಲ್ಲ ಎಂದಿದ್ದಾರೆ ಸುರ್ಜಿತ್.

1947 ರ ಆಗಸ್ಟ್ 14-15 ರ ನಡುರಾತ್ರಿಯ ಚಾರಿತ್ರಿಕ ಅಧಿವೇಶನ ನಡೆದದ್ದು ದೇಶದ ವಿಭಜನೆಯ ಹಿನ್ನಲೆಯಲ್ಲಿ. ಹೊಸದಾಗಿ ನಿರ್ಮಿಸಿದ ಗಡಿಯ ಎರಡೂ ಕಡೆ ಕನಿಷ್ಟ 10 ಲಕ್ಷ ಜನ ಬಲಿಯಾದರು. ಒಂದೂವರೆ ಕೋಟಿ ಜನ ತಮ್ಮ ಮನೆ-ಮಾರು ಬಿಟ್ಟು ಹೋಗಬೇಕಾಯಿತು. ಕೋಮು ವಿಷ ಎಲ್ಲೆಡೆ ಹರಡಿ ರಾಷ್ಟ್ರೀಯ ವಿಮೋಚನಾ ಆಂದೋಲನ ಸೃಷ್ಟಿಸಿದ ಉನ್ನತ ಮೌಲ್ಯಗಳ ಮೇಲೆ ಪ್ರತಿಕೂಲ ಪ್ರಭಾವ ಬೀರಿದ್ದ ಸಮಯವದು. 50 ವರ್ಷಗಳ ನಂತರ ವಿಶೇಷ ಸಂಸತ್ ಅಧಿವೇಶನವೂ ಇಂತಹುದೇ ಒಂದು ವಾತಾವರಣದಲ್ಲಿ, ಕರಾಳ ಶಕ್ತಿಗಳು ಮತ್ತೆ ತಲೆ ಎತ್ತುತ್ತಿರುವ ಹಿನ್ನೆಲೆಯಲ್ಲಿ ನಡೆಯಿತು. ಒಬ್ಬ ಭಾಷಣಕಾರರು ಗಮನಿಸಿದಂತೆ ಸ್ವಾತಂತ್ರ್ಯ ಭಾರತದಲ್ಲಿ ಕೋಮುದಂಗೆಗಳಿಗೆ ಬಲಿಯಾದವರ ಸಂಖ್ಯೆ 2000 ನ್ನು ಮೀರಿರುವ ಹಿನ್ನಲೆಯಲ್ಲಿ ನಡೆಯಿತು ಎಂದು ಗಮನಿಸಿರುವ ಸುರ್ಜಿತ್‌ರವರು ಈ ವಿಶೇಷ ಅಧಿವೇಶನದ ನಿರ್ಣಯ ಹೆಚ್ಚು ನೇರವಾಗ್ಗಿ ನಾವು ಎದುರಿಸುತ್ತಿರುವ ನಿರ್ದಿಷ್ಟ ಸಮಸ್ಯೆಗಳನ್ನು ಎತ್ತಿ ತೋರಿಸಲು ಪ್ರಯತ್ನಿಸಬಹುದಾಗಿತ್ತು ಎಂದಿದ್ದಾರೆ.

ಈ ವಿಶೇಷ ಅಧಿವೇಶನದ ಮೊದಲು ನಡೆದ ಮಳೆಗಾಲದ ಅಧಿವೇಶನದಲ್ಲಿ ಸರಕಾರ ನೀಡಿದ್ದ ವಚನಗಳನ್ನು ಈಡೇರಿಸುವಲ್ಲಿ ವಿಫಲವಾದುದನ್ನು ದೇಶ ಕಂಡಿತು. ಮಹಿಳೆಯರಿಗೆ 33% ಮೀಸಲಾತಿಯ ಮಸೂದೆಯನ್ನು ಅಂಗೀಕರಿಸಲಿಲ್ಲ, ಕೃಷಿಕಾರ್ಮಿಕರಿಗೆ ಕೂಲಿ, ದುಡಿಮೆಯ ಪರಿಸ್ಥಿತಿ ಕುರಿತಾದ ಮಸೂದೆಯನ್ನು ಅಂಗೀಕರಿಸಲಿಲ್ಲ. ದೇಶದ ಬಹುಪಾಲು ಜನ ವಿಭಾಗಗಳನ್ನು ತಟ್ಟುವ ಈ ಎರಡೂ ವಿಷಯಗಳಲ್ಲಿ ಸರಕಾರ ಹಿಂದೇಟು ಹಾಕಿತು. ಲೋಕಪಾಲ್ ಮಸೂದೆಯನ್ನು ತರಲಿಲ್ಲ. ಪ್ರಧಾನಿಗಳ ಭಾಷಣವಾಗಲೀ ವಿಶೇಷ ಅಧಿವೇಶನದ ನಿರ್ಣಯವಾಗಲೀ ಈ ಮೂರು ಮಸೂದೆಗಳ ಪ್ರಸ್ತಾಪವನ್ನು ಮಾಡಲಿಲ್ಲ ಎಂಬ ಅಂಶದತ್ತ ಸುರ್ಜಿತ್ ದೇಶಬಾಂಧವರ ಗಮನ ಸೆಳೆದಿದ್ದಾರೆ.

ಒಟ್ಟಿನಲ್ಲಿ ಸಂಸತ್ತಿನ ಈ ವಿಶೇಷ ಅಧಿವೇಶನ ದೇಶ ಮತ್ತು ಜನತೆ ಎದುರಿಸುತ್ತಿರುವ ವಿಭಿನ್ನ ಸಮಸ್ಯೆಗಳತ್ತ ಗಮನ ಸೆಳೆಯಲು ನೆರವಾಗಿ ಒಂದು ಮಹತ್ವಪೂರ್ಣ ಪಾತ್ರವನ್ನೇನೋ ವಹಿಸಿದೆ, ಆದರೆ ಈ ಬಗ್ಗೆ ಬೆನ್ನು ತಟ್ಟಿಕೊಳ್ಳುವಂತಹದ್ದೇನೂ ಇಲ್ಲ, ಏಕೆಂದರೆ ನಾವಿನ್ನು ಬಹಳ ದೂರ ಸಾಗಬೇಕಾಗಿದೆ ಎಂದಿದ್ದಾರೆ.

ವಿರುದ್ಧ ಸಿಐಟಿಯು ಸಂಘಗಳ ಚಳುವ

ದೇಶದ ಪ್ರಧಾನ ಕಾರ್ಮಿಕ ಸಂಘಟನೆ ಸಿಐಟಿಯು ಡೀಸೆಲ್ ಅಡುಗೆ ಅನಿಲ ಮತ್ತು ಪೆಟ್ರೋಲ್‌ನ ಬೆಲೆಗಳಲ್ಲಿ ತೀವ್ರ ಏರಿಕೆಯ ವಿರುದ್ಧ ಪ್ರತಿಭಟನೆ ಹಾಗೂ ಚಳುವಳಿ ನಡೆಸಬೇಕು ಎಂದು ತನ್ನ ಎಲ್ಲಾ ಘಟಕಗಳಿಗೆ ಮತ್ತು ಎಲ್ಲಾ ವಲಯಗಳ ಕಾರ್ಮಿಕರಿಗೆ ಮತ್ತು ನೌಕರರಿಗೆ ಕರೆ ನೀಡಿದೆ.

ತೈಲ ನಿಧಿ ಖಾತೆಯ ಕೊರತೆಯನ್ನು ತುಂಬಲು ಯೋಜಿಸಿರುವ ವ್ಯವಸ್ಥೆಯಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ನಿರಂತರ ಬೆಲೆಯೇರಿಕೆಯಾಗುತ್ತಿರುತ್ತದೆ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಟೀಕಿಸಿದೆ.

"ಪೆಟ್ರೋಲಿಯಂ ಮಂತ್ರಿ ಜನೇಶ್ವರ್ ಮಿಶ್ರಾ ಬೆಲೆಯೇರಿಕೆಯ ಪ್ರಕಟಣೆ ಮಾಡುತ್ತಾ ಜೂನ್ 30 ರ ವರೆಗಿದ್ದ 18000 ಕೋಟಿ ರೂ.ಗಳ ಭಾರೀ ಕೊರತೆಯನ್ನು ಹಣಕಾಸು ಇಲಾಖೆಯ ಖಾತೆಗೆ ವರ್ಗಾಯಿಸಲಾಗುವುದು ಎಂದಿರುವುದು ಕೇವಲ ಲೆಕ್ಕಪತ್ರದ ಕಸರತ್ತು, ಈ ಕೊರತೆಯ ಸಂಪೂರ್ಣ ಹೊರೆಯನ್ನು ಜನರೇ ಹೊರಬೇಕಾಗುತ್ತದೆ ಎಂಬುದೀಗ ಬಯಲಾಗಿದೆ" ಎಂದು ಗಮನಿಸಿರುವ ಸಿಐಟಿಯು ಸೀಮೆಎಣ್ಣೆಯ ಬೆಲೆಯನ್ನು ಏರಿಸಿಲ್ಲ ಎಂದು ಬೆನ್ನು ತಟ್ಟಿಕೊಂಡಿರುವುದು ಕೂಡಾ ಅರ್ಥಹೀನ ಎಂದು ಹೇಳಿದೆ. ಏಕೆಂದರೆ ಇದಕ್ಕೆ "ಅಂತರ ಸಬ್ಸಿಡಿ" ಎಂಬ ದೊಡ್ಡ ಪದ ಬಳಸಿದರೂ ವಾಸ್ತವವಾಗಿ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಬಳಕೆ ದಾರರಿಂದ ಹೆಚ್ಚಿನ ಬೆಲೆ ಕಿತ್ತುಕೊಂಡು ಈ 'ಸಬ್ಸಿಡಿ' ನೀಡಲಾಗಿದೆ ಎಂದು ಸಿಐಟಿಯು ಹೇಳಿದೆ.

ಮಂತ್ರಿಸಂಪುಟ ಮಂಜೂರು ಮಾಡಿದ ಕ್ರಮಗಳು ಪೆಟ್ರೋಲಿಯಂ ಉತ್ಪನ್ನಗಳ ನಿರಂತರ ಬೆಲೆಯೇರಿಕೆಗೆ ಕಾರಣವಾಗುತ್ತವೆ ಎಂದು ಸಿಐಟಿಯು ಎಚ್ಚರಿಸಿದೆ. ಕಳೆದ ಕೆಲವು ತಿಂಗಳಲ್ಲಿ ಪೆಟ್ರೋಲಿಯಂ ಬೆಲೆಯೇರಿಕೆಯ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯುವಂತಾಗಿತ್ತು. ಆದರೆ ಇನ್ನು ಮುಂದೆ ಇಂತಹ ಚರ್ಚೆಗಳಿಲ್ಲದೇ ನಿರಂತರ ಬೆಲೆಯೇರಿಕೆಯಾಗುವಂತಹ ಕ್ರಮಗಳನ್ನು ಸರಕಾರ ಕುಯುಕ್ತಿಯಿಂದ ತಂದಿದೆ ಎಂದು ಅದು ಟೀಕಿಸಿದೆ.

ಸಾರ್ವಜನಿಕ ವಲಯದ ಘಟಕಗಳ ಪುನರುಜ್ಜೀವನಕ್ಕಾಗಿ
ರಸಗೊಬ್ಬರ ಕಾರ್ಮಿಕರ ದೇಶವ್ಯಾಪಿ ಮುಷ್ಕರ

ಎರಡು ಪ್ರಧಾನ ಸಾರ್ವಜನಿಕ ವಲಯದ ರಸಗೊಬ್ಬರ ಕಂಪನಿಗಳಾದ ಎಫ್.ಸಿ.ಐ. ಮತ್ತು ಹೆಚ್.ಎಫ್.ಸಿ. ಯಲ್ಲಿನ ಕಾರ್ಮಿಕ ಸಂಘಗಳು ಒಂದು ಹಂತ-ಹಂತದ ಚಳುವಳಿಯ ಜಂಟಿ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಈ ಕಾರ್ಯಕ್ರಮದ ಕೊನೆಯಲ್ಲಿ ಒಂದು ದಿನದ ದೇಶವ್ಯಾಪಿ ಸಾಂಕೇತಿಕ ಮುಷ್ಕರ ನಡೆಸಲು ಸರ್ವಾನುಮತದಿಂದ ನಿರ್ಧರಿಸಿದ್ದಾರೆ. ಬಿ.ಐ.ಎಫ್.ಆರ್.ಗೆ ಒಪ್ಪಿಸಿದ ಸಾರ್ವಜನಿಕ ವಲಯದ ರಸಗೊಬ್ಬರ ಘಟಕಗಳ ಪುನರುಜ್ಜೀವನ ಈ ಮುಷ್ಕರದ ಮುಖ್ಯ ಬೇಡಿಕೆ. ಮುಷ್ಕರದ ದಿನ ಈ ಎರಡು ಕಂಪನಿಗಳಲ್ಲದೆ ಉಳಿದ ಇಡೀ ರಸಗೊಬ್ಬರ ಉದ್ದಿಮೆಯ ಕಾರ್ಮಿಕರು ಬ್ಯಾಡ್ಜ್‌ಧಾರಣೆಯ ಮೂಲಕ ಈ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸುತ್ತಾರೆ.

ಸೆಪ್ಟೆಂಬರ್ 1 ರಂದು ನಡೆದ 'ಜಂಟಿ ಸಮಿತಿ'ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಯಿತು. ಭಾರತ ರಸಗೊಬ್ಬರ ಕಾರ್ಮಿಕರ ಒಕ್ಕೂಟ(FWFI) ಮತ್ತು ಭಾರತೀಯ ರಾಷ್ಟ್ರೀಯ ರಾಸಾಯನಿಕ ಕಾರ್ಮಿಕರ ಒಕ್ಕೂಟ (INCWF) ನ ಅಧ್ಯಕ್ಷರುಗಳಾದ ರಮಾಕಾಂತ್ ಪಾಂಡೇ ಮತ್ತು ರಾಜಾ ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ದೇಶದೆಲ್ಲೆಡೆಯಿಂದ ಬಂದ ರಸಗೊಬ್ಬರ ಉದ್ದಿಮೆಯ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಕೂಡಾ ಈ ಸಭೆಯನ್ನುದ್ದೇಶಿ ಮಾತನಾಡಿದರು.

ಹೆಚ್.ಎಫ್.ಸಿ. ಹಾಗೂ ಎಫ್.ಐ.ಸಿ. ಘಟಕಗಳನ್ನು ಪುನರುಜ್ಜೀವನಗೊಳಿಸಲು ಈ ಹಿಂದೆ ನಿರ್ಧರಿಸಲಾಗಿತ್ತು. ಏಪ್ರಿಲ್ 21, 1995 ರಂದು ಮಂತ್ರಿಗಳ ಗುಂಪು ಪುನರುಜ್ಜೀವನ ಯೋಜನೆಯನ್ನು ಮಂಜೂರು ಮಾಡಿತ್ತು. ನಂತರ ಆ ವಿಷಯವನ್ನು ಒಂದು ಸಲಹಾ ಸಂಸ್ಥೆ FEDOಗೆ ತಾಂತ್ರಿಕ ಪರಿಶೀಲನೆಗೆ ನೀಡಿ ಯೋಜನೆಯನ್ನು ಹಣಕಾಸು ದೃಷ್ಟಿಯಿಂದ ಹಾಗೂ ತಾಂತ್ರಿಕವಾಗಿ ಪರಿಶೀಲಿಸಲಾಗಿತ್ತು.

ಆದರೆ ಈ ವರ್ಷ ಏಪ್ರಿಲ್ 21 ರಂದು ಸರಕಾರ ಈ ಎರಡು ಕಂಪನಿಗಳ ಎರಡು ಘಟಕಗಳನ್ನು ಬಿಟ್ಟು ಬೇರೆಲ್ಲವನ್ನೂ ಮುಚ್ಚಿಬಿಡುವ ನಿರ್ಧಾರ ಪ್ರಕಟಿಸಿದಾಗ ಎಲ್ಲರಿಗೂ ಅಘಾತವಾಗಿತ್ತು. ರಸಗೊಬ್ಬರವನ್ನು ದೇಶಿಯವಾಗಿ ಉತ್ಪಾದಿಸುವದಕ್ಕಿಂತ ಆಮದು ಮಾಡುವುದೇ ಅಗ್ಗ ಎಂಬುದು ಸರಕಾರದ ವಾದ. ಆದರೆ ಇದಕ್ಕೆ ಆಧಾರವಿಲ್ಲ. ಈ ಘಟಕಗಳನ್ನು ಮುಚ್ಚುವುದರಿಂದ ಸಾವಿರಾರು ಕಾರ್ಮಿಕರು ಬೀದಿಪಾಲಾಗುತ್ತಾರೆ. ಮಾತ್ರವಲ್ಲ ಭಾರತ ಯೂರಿಯಾ ಆಮದನ್ನೇ ಅವಲಂಬಿಸಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಮರ್ಜಿಗೆ ಒಳಪಡಬೇಕಾಗುತ್ತದೆ ಎನ್ನುತ್ತವೆ ರಸಗೊಬ್ಬರ ಕಾರ್ಮಿಕರ ಯೂನಿಯನ್‌ಗಳು.

ಆದ್ದರಿಂದಲೇ FEDO ತಯಾರಿಸಿದ ಪುನರುಜ್ಜೀವನ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಯೂನಿಯನ್‌ಗಳು ಒತ್ತಾಯಿಸುತ್ತಿವೆ. ಹಲ್ದಿಯಾ, ಗೋರಖ್‌ಪುರ, ರಾಮಗುಂಡಂ ಹಾಗೂ ತಲೇಚೇರ್ ಸ್ಥಾವರಗಳನ್ನು ಹಾಗೂ ರಸಗೊಬ್ಬರ ಪ್ರೋತ್ಸಾಹ ಹಾಗೂ ಕೃಷಿ ಸಂಶೋಧನಾ ವಿಭಾಗವನ್ನು ಮುಚ್ಚುವ ಪ್ರಯತ್ನಗಳನ್ನೆಲ್ಲಾ ಚಳುವಳಿ ಮತ್ತು ಹೋರಾಟಗಳ ಮೂಲಕ ಬಲವಾಗಿ ಪ್ರತಿರೋಧಿಸಲಾಗುವುದು, ನವಂಬರ್ 11 ರ ಮುಷ್ಕರ ಈ ಹೋರಾಟದ ಭಾಗ ಎಂದು ಸಂಘಗಳು ಹೇಳಿವೆ.

(ಐಎನ್ಎನ್)

ಕೇಂದ್ರ ಸರಕಾರಿ ನೌಕರರ ವಿಜಯ - ಸಿಪಿಐ(ಎಂ) ಸ್ವಾಗತ

ಐದನೇ ವೇತನ ಆಯೋಗದ ಶಿಫಾರಸುಗಳನ್ನು ಕುರಿತಂತೆ ಸರಕಾರ ಮತ್ತು ನೌಕರರ ಸಂಘಗಳ ನಡುವೆ ಒಪ್ಪಂದವಾಗಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸ್ವಾಗತಿಸಿದೆ. ಜಂಟಿ ಸಮಾಲೋಚನಾ ವ್ಯವಸ್ಥೆಯಲ್ಲಿನ ನೌಕರರ ಪ್ರತಿನಿಧಿಗಳು ಹಾಗೂ ಮಂತ್ರಿಗಳ ಗುಂಪಿನ ನಡುವೆ ಮಾತುಕತೆಗಳ ನಂತರ ಆಗಿರುವ ಈ ಒಪ್ಪಂದ ನೌಕರರ ಒಂದು ವಿಜಯ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಈ ಒಪ್ಪಂದ ನೌಕರರ ಕೆಲವು ಪ್ರಮುಖ ಬೇಡಿಕೆಗಳನ್ನು ಪೂರೈಸಿದೆ. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೂಲವೇತನದಲ್ಲಿ 40% ಏರಿಕೆ, ಎಲ್ಲಾ ನಾನ್ - ಗೆಜೆಟೆಡ್ ನೌಕರರಿಗೆ ಬೋನಸ್, 3-5 ಲಕ್ಷ ಖಾಲಿ ಹುದ್ದೆಗಳನ್ನು ರದ್ದು ಮಾಡುವ ನಿರ್ಣಯದ ಪುನರ್ ವಿಮರ್ಶೆ ಹಾಗೂ 10 ವರ್ಷಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು 30% ರಷ್ಟು ಕಡಿತ ಮಾಡಬೇಕೆಂಬ ವೇತನ ಆಯೋಗದ ಶಿಫಾರಸ್ಸಿಗೆ ತಿರಸ್ಕಾರ ಈ ಒಪ್ಪಂದದ ಮುಖ್ಯ ಅಂಶಗಳು. ನೌಕರರ ಸಂಘಗಳು ಪ್ರದರ್ಶಿಸಿದ ಐಕ್ಯತೆ ಹಾಗೂ ದೃಢ ನಿಲುವಿನಿಂದಾಗಿ ಈ ಸೌಲಭ್ಯಗಳು ಸಿಗುವುದು ಸಾಧ್ಯವಾಗಿದೆ ಎಂದು ಸಿಪಿಐ(ಎಂ) ಹೇಳಿದೆ. ಈ ನಿಟ್ಟಿನಲ್ಲಿ ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬರುವಲ್ಲಿ ಹಾಗೂ ನೌಕರರ ಕೆಲವು ನ್ಯಾಯಪೂರ್ಣ ಬೇಡಿಕೆಗಳನ್ನು ಈಡೇರಿಸುವಲ್ಲಿ ಸಂಯುಕ್ತರಂಗ ಸರಕಾರ ಅನುಸರಿಸಿದ ಸಕಾರಾತ್ಮಕ ನಿಲುವಿನ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮೆಚ್ಚುಗೆ ಸೂಚಿಸಿದೆ.

ಬಾಬ್ರಿಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಆರೋಪ ಪತ್ರ ದಾಖಲು ಮಾಡಿ ವಿಚಾರಣೆ ಆರಂಭವಾಗಲು ಸುಮಾರು ಐದು ವರ್ಷಗಳೇ ಹಿಡಿದವು. ಇವುಗಳಲ್ಲಿ ಮೂರು ವರ್ಷ ಆಗಾಗ ನ್ಯಾಯಾಧೀಶರ ವರ್ಗಾವಣೆಯಿಂದ ನಷ್ಟವಾಯಿತು. ಈ ಅವಧಿಯಲ್ಲಿ ಎಂಟು ತಿಂಗಳ ಕಾಲ ನ್ಯಾಯಾಧೀಶರ ಪೀಠ ಖಾಲಿಯಾಗಿತ್ತು. ಅಂದರೆ ಕಾವಿ ಪಡೆಗಳು ಕಾನೂನು ತನ್ನ ಕೆಲಸ ಮಾಡದಂತೆ ತಡೆಯಲು ಎಲ್ಲಾ ರೀತಿಯ ಬುಡಮೇಲು ಕೃತ್ಯಗಳನ್ನು ನಡೆಸಲು ಪ್ರಯತ್ನಿಸಿದರೂ ಕೊನೆಗೂ ಈ ಧ್ವಂಸದ ಪಿತೂರಿಯನ್ನು ಮುಚ್ಚಿಹಾಕಲಾಗಿಲ್ಲ. ಸಿಬಿಐ ಒಟ್ಟು 49 ಎಫ್.ಐ.ಆರ್.ಗಳ ತನಿಖೆ ನಡೆಸಿತು. ಅದರಲ್ಲಿ ಎರಡು ಮಾತ್ರ ಬಾಬ್ರಿ ಮಸೀದಿಯ ಧ್ವಂಸ ಹಾಗೂ ಪಿತೂರಿಗೆ ಸಂಬಂಧಪಟ್ಟವು. ಇತರ 47 ಮಾಧ್ಯಮಗಳು(ವಿದೇಶಿ ಪತ್ರಕರ್ತರೂ ಸೇರಿ) ಹಾಕಿದ ಮೊಕದ್ದಮೆಗಳು. ಈ ಪತ್ರಕರ್ತರನ್ನು ಡಿಸೆಂಬರ್ 6, 1992 ರ ಧ್ವಂಸ ಕಾರ್ಯ ನಡೆಸುತ್ತಿದ್ದ ಕರಸೇವಕರು ಅಮಾನುಷವಾಗಿ ಥಳಿಸಿದ್ದರು.

ಈ ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಅಡ್ವಾಣಿ, ಬಾಳಾಠಾಕ್ರೆ, ಈಗ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗುತ್ತಿರುವ ಕಲ್ಯಾಣ್ ಸಿಂಗ್,ಅಶೋಕ್ ಸಿಂಘಾಲ್, ವಿನಯ್ ಕಟಿಯಾರ್, ಮುರಳಿ ಮನೋಹರ್ ಜೋಶಿ ಇತ್ಯಾದಿ ಕಾವಿಪಡೆಗಳ ವಿವಿಧ ಅವತಾರ ಗಳ ಮೇಲೆ ಹಾಕಿರುವ ಭಾರತೀಯ ದಂಡ ಸಂಹಿತೆಯ ವಿವಿಧ ವಿಭಾಗಗಳ ವಿವರ ಹೀಗಿದೆ.

ಇದು ನಿಮಗೆ ಗೊತ್ತೆ?

ವಿಭಾಗ	ಅಪರಾಧ	ಶಿಕ್ಷೆ
147	ದೊಂಬಿ ನಡೆಸಿದ್ದ	ಎರಡು ವರ್ಷಗಳವರೆಗೆ ಸೆರೆವಾಸ ಅಥವಾ ದಂಡ ಅಥವಾ ಎರಡೂ.
153(ಎ)	ಪೂಜಾಸ್ಥಳಗಳು ಇತ್ಯಾದಿಗಳಲ್ಲಿ ವರ್ಗಗಳನಡುವೆ ವೈಮನಸ್ಯಕ್ಕೆ ಪ್ರೋತ್ಸಾಹ	ಐದು ವರ್ಷಗಳ ಸೆರೆವಾಸ ಅಥವಾ ದಂಡ ಅಥವಾ ಎರಡೂ
153(ಬಿ)	ಸಾರ್ವಜನಿ ಪ್ರಾರ್ಥನಾ ಸ್ಥಳಗಳು ಇತ್ಯಾದಿಗಳಲ್ಲಿ	ಐದು ವರ್ಷಗಳ ಸೆರೆವಾಸ ಅಥವಾ ದಂಡ
295	ಒಂದು ಪೂಜಾಸ್ಥಳವನ್ನು ಅಥವಾ ಪವಿತ್ರ ವಸ್ತುವನ್ನು ಯಾವುದೇ ವರ್ಗದ ಜನಗಳ ಧರ್ಮವನ್ನು ಹೀಗಳೆಯುವಉದ್ದೇಶದಿಂದನಾಶಮಾಡುವುದು ಅಥವಾ ಹಾಳುಗೆಡುವುದು	ಎರಡು ವರ್ಷಗಳ ಸೆರೆವಾಸ ಅಥವಾ ದಂಡ ಅಥವಾ ಎರಡೂ
295(ಎ)	ಯಾವುದೇ ವರ್ಗದ ಧರ್ಮದ ಅಥವಾ ಧಾರ್ಮಿಕ ನಂಬಿಕೆಗಳನ್ನು ದ್ವೇಷದಿಂದ ಅವಮಾನಗೊಳಿಸುವುದು	ಮೂರುವರ್ಷಗಳ ಸೆರೆವಾಸ ಅಥವಾ ದಂಡ ಅಥವಾ ಎರಡೂ
505	ಬಂಡಾಯ ಅಥವಾ ಸಾರ್ವಜನಿಕ ಶಾಂತಿಯ ವಿರುದ್ಧ ಅಪರಾಧ ಎಸಗುವ ಉದ್ದೇಶದಿಂದ ಸುಳ್ಳು ಹೇಳಿಕೆ, ವದಂತಿ ಇತ್ಯಾದಿ ಹರಡುವುದು.	3 ವರ್ಷಗಳ ಸೆರೆವಾಸ ಅಥವಾ ದಂಡ ಅಥವಾ ಎರಡೂ
	ವಿಭಿನ್ನ ವರ್ಗಗಳ ನಡುವೆ ವೈರತ್ವ, ದ್ವೇಷ ಅಥವಾ ದುರ್ಭಾವನೆ ಸೃಷ್ಟಿಸುವ ಉದ್ದೇಶದ ಸುಳ್ಳು ಹೇಳಿಕೆ, ವದಂತಿ ಇತ್ಯಾದಿಗಳ ಹರಡಿಕೆ	ಮೇಲಿನಂತೆ
	ವೈರತ್ವ, ದ್ವೇಷ ಅಥವಾ ದುರ್ಭಾವನೆ ಸೃಷ್ಟಿಸುವ ಉದ್ದೇಶದಿಂದ ಪೂಜಾಸ್ಥಳ ಇತ್ಯಾದಿಗಳಲ್ಲಿ ಸುಳ್ಳು ಹೇಳಿಕೆ, ವದಂತಿ ಇತ್ಯಾದಿಗಳ ಹರಡಿಕೆ	5 ವರ್ಷಗಳ ಸೆರೆವಾಸ ಮತ್ತು ದಂಡ
120(ಬಿ)	ಎರಡು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಕಠಿಣ ಸೆರೆವಾಸದ ಶಿಕ್ಷೆ ವಿಧಿಸಬಹುದಾದ ಒಂದು ಅಪರಾಧ ಎಸಗಲು ಕ್ರಿಮಿನಲ್ ಪಿತೂರಿ.	ಪಿತೂರಿಯ ಉದ್ದೇಶವಾದ ಅಪರಾಧಗಳಿಗೆ ನೀಡುವ ಶಿಕ್ಷೆಗಳಂತೆ.
	ಬೇರೆ ಯಾವುದೇ ಕ್ರಿಮಿನಲ್ ಪಿತೂರಿ	ಆರು ತಿಂಗಳ ಸೆರೆವಾಸ ಅಥವಾ ದಂಡ ಅಥವಾ ಎರಡೂ

ವಾರದ ವ್ಯಂಗ್ಯಚಿತ್ರ ನಾಥ್



KRNM/BGS-405 MAG(2) PRBDECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು